ಅಕ್ಟೋಬರ್ 2022

₹ 15/-

# ಯುಗರಶ್ಮಿ

ತ್ರೈಮಾಸಿಕ




- ಮುಹಮ್ಮದ್ ಪೈಗಂಬರ್(ಸ) ಮುಸ್ಲಿಮೇತರ ವಿದ್ವಾಂಸರ ದೃಷ್ಟಿಯಲ್ಲಿ
- ಸಾಮಾಜಿಕ ಶಾಂತಿ
- ದೇವಾಸ್ತಿತ್ವದ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯಗಳು
- ಮುಹಮ್ಮದ್ ಪೈಗಂಬರ್(ಸ) ಸರ್ವಶ್ರೇಷ್ಠ ಮಾದರಿ ಪುರುಷ
- ಪವಿತ್ರ ಪ್ರವಾದಿಯ ಮೇಲೆ ದಾಳಿ ಮತ್ತು ಉತ್ತರ
- ನೀನು ಮಾಡು – ಮಾಡಬೇಡ

"'ಭೂಮಿಯಲ್ಲಿ ಕಲಹವನ್ನುಂಟುಮಾಡಬೇಡಿರಿ' ಎಂದು ಅವರೊಡನೆ ಹೇಳುವಾಗ, 'ನಾವು ಶಾಂತಿಗಾಗಿ ಶ್ರಮಿಸುವವರು' ಎಂದು ಅವರು ಮರು ನುಡಿಯುತ್ತಾರೆ. ಎಚ್ಚರಿಕೆಯಿಂದಿರಿ! ಖಂಡಿತವಾಗಿಯೂ ಅವರೇ ಕಲಹವನ್ನು ಸೃಷ್ಟಿಸುವವರು. ಆದರೆ ಅವರು ಅದನ್ನು ಗ್ರಹಿಸುವುದಿಲ್ಲ." ಪವಿತ್ರ ಖುರ್‌ಆನ್ (2: 12,13)

## ವಿಷಯ ಸೂಚಿಕೆ

ಪುಟ


✤ ಮುಹಮ್ಮದ್ ಪೈಗಂಬರ್(ಸ) 1
✤ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
✤ ಮುಹಮ್ಮದ್ ಪೈಗಂಬರ್(ಸ) ಮುಸ್ಲಿಮೇತರ ವಿದ್ವಾಂಸರ ದೃಷ್ಟಿಯಲ್ಲಿ 3
✤ ಸಾಮಾಜಿಕ ಶಾಂತಿ 18
✤ ದೇವಾಸ್ತಿತ್ವದ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯಗಳು 21
✤ ಮುಹಮ್ಮದ್ ಪೈಗಂಬರ್(ಸ) ಸರ್ವಶ್ರೇಷ್ಠ ಮಾದರಿ ಪುರುಷ 25
✤ ಪವಿತ್ರ ಪ್ರವಾದಿಯ ಮೇಲೆ ಮತ್ತೊಂದು ದಾಳಿ ಮತ್ತು ಅದಕ್ಕೆ ಉತ್ತರ 32
✤ ಪತ್ರಿಕಾ ಪ್ರಕಟಣೆ : ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಮಾಡಿದ ಧರ್ಮನಿಂದನೆ ಮತ್ತು ಪ್ರಚೋದನಕಾರಿ ಹೇಳಿಕೆಗಳನ್ನು ಅಹ್ಮದಿಯಾ ಮುಸ್ಲಿಂ ಸಮುದಾಯವು ಬಲವಾಗಿ ಖಂಡಿಸುತ್ತದೆ 35
✤ ಅಹ್ಮದಿಯಾ ಜಮಾಅತಿನ ಪ್ರಗತಿ 36
✤ ನೀನು ಮಾಡು – ಮಾಡಬೇಡ 37
✤ ಓದಿದ್ದು : ● ಮದುವೆ ವಯಸ್ಸು ● ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳ ಬಿಡುಗಡೆ ಅಸಮರ್ಥನೀಯ 40
● ಬಿಜೆಪಿಯ ಗೆಲುವಿಗಾಗಿ ದೇಶಾದ್ಯಂತ ಬಾಂಬ್ ಸ್ಫೋಟಿಸಿದ ಆರೆಸ್ಸೆಸ್: ಪದಾಧಿಕಾರಿ ಹೇಳಿಕೆ
● ಡೋಲೊ ಶಿಫಾರಸಿಗೆ ವೈದ್ಯರಿಗೆ 1000 ಕೋಟಿ ರೂ. ಉಚಿತ ಕೊಡುಗೆ ● ಮುಸ್ಲಿಂ ಹೆಣ್ಮಕ್ಕಳು 16 ವರ್ಷಕ್ಕೇ ಮದುವೆಯಾಗಬಹುದು ● ಹತ್ತು ಮಕ್ಕಳನ್ನು ಹಡೆಯಿರಿ 13 ಲಕ್ಷ ಬಹುಮಾನ ಗೆಲ್ಲಿ! ● ಹಿಂಸೆಯಿಂದ ಲಾಭವಿಲ್ಲ
● 'ಪ್ರತೀ ಮಸೀದಿಯಲ್ಲೂ ಶಿವಲಿಂಗ ಹುಡುಕುವುದೇಕೆ?' ● ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ – ಮೆಕ್ಸಿಕೊ ಚರ್ಚ್ ಮುಖ್ಯಸ್ಥನಿಗೆ ಅಮೆರಿಕದಲ್ಲಿ ಜೈಲು ● ಮುರುಘಾ ಶ್ರೀಗಳ ವಿರುದ್ಧ ಪ್ರಕರಣ ದಾಖಲು
● 57 ಲಕ್ಷ ಮಂದಿ ನಿರಾಶ್ರಿತರು, ಮಳೆಗೆ ತತ್ತರಿಸಿದ ಪಾಕಿಸ್ಥಾನ ● ತಾಜ್ ಕೋಣೆಗಳಲ್ಲಿ ಹಿಂದೂ ವಿಗ್ರಹಗಳಿಲ್ಲ!
● ವೀರ್ಯ, ಅಂಡಾಣು ಇಲ್ಲದೇ ಭ್ರೂಣ ಸೃಷ್ಟಿ! ● ಬಿಷಪ್ ಮನೆ ಮೇಲೆ ಇ.ಡಿ. ದಾಳಿ ● ಸರಕಾರಿ ನೌಕರಿ ಆಮಿಷ ಅಲ್ಲಮಪ್ರಭು ಹಿರೇಮಠ ಶ್ರೀ ಸೆರೆ ● ಕುರಾನ್ ಮೇಲೆ ಕೃತಿಸ್ವಾಮ್ಯ ಸಾಧ್ಯವಿಲ್ಲ ● ತಂದೆಯ ಇಚ್ಛೆ ಪೂರೈಕೆ
● ಅಪ್ಪ, ಅಮ್ಮನಿಗಾಗಿ 17 ಕೋಟಿ ರೂ. ವೇತನಕ್ಕೆ ಗುಡ್ ಬೈ ● ಪ್ರಶ್ನೋತ್ತರ
✤ Statement of the World Head of the Ahmadiyya Muslim Community 47
✤ ಪ್ರತಿಭೆಗಳು 48
✤ ನಿಧನ ವಾರ್ತೆಗಳು 49
✤ ಅಹ್ಮದಿಯಾ ವಾರ್ತೆಗಳು 50
✤ ವಾಟ್ಸ್ ಆ್ಯಪ್ ಸಂದೇಶಗಳು 51


# ಯುಗರಶ್ಮಿ

ಮುಖಪುಟ ಚಿತ್ರ : ಅಹ್ಮದಿಯಾ ಖಲೀಫರು 27–9–2022ರಂದು ಅಮೇರಿಕದ ಇಲ್ಲಿನ್ನೋಯ್ಸ್‌ನ ಝಿಯೋನ್ ಪಟ್ಟಣದಲ್ಲಿ ಉದ್ಘಾಟಿಸಿದ "ಮಸ್ಜಿದ್ ಫತ್‌ಹೆ ಅಝೀಮ್"


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575001.
ಸಂಪರ್ಕಿಸಿರಿ : 9900410789

بِسۡمِ اللّٰہِ الرَّحۡمٰنِ الرَّحِیۡمِ
نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ

# ಯುಗರಶ್ಮಿ


ಸಂಪಾದಕ : ಮುಹಮ್ಮದ್ ಯೂಸುಫ್

ಅಕ್ಟೋಬರ್ 2022

| ಆರಂಭ : 1975 | ಸಂಪುಟ : 39 | ಇಖಾ : 1401 ಹಿಜರೀ ಶಮ್ಸೀ | ಸಂಚಿಕೆ : 1– 2 |
|---|---|---|---|


## ಹಝ್ರತ್ ಮುಹಮ್ಮದ್ ಪೈಗಂಬರ್(ಸ)

"ಮರುಭೂಮಿಗಳಿಂದ ಕೂಡಿದ ಅರಬ್ ದೇಶದಲ್ಲಿ ಒಂದು ಆಶ್ಚರ್ಯಕರ ವಿದ್ಯಮಾನವುಂಟಾಯಿತು. ಲಕ್ಷಾಂತರ (ಆಧ್ಯಾತ್ಮಿಕವಾಗಿ) ಮೃತರಾದವರು ಕೆಲವೇ ದಿನಗಳಲ್ಲಿ ಜೀವಂತರಾದರು. ಹಲವಾರು ಪೀಳಿಗೆಗಳಿಂದ ಕೆಡುತ್ತಾ ಬಂದಿದ್ದವರು ದೈವಿಕ ವರ್ಣ ಹೊಂದಿದರು. ಕಣ್ಣು ಕಾಣದ ಕುರುಡರು ದೃಷ್ಟಿಯನ್ನು ಪಡೆದರು. ಮೂಗರ ನಾಲಗೆಗಳಲ್ಲಿ ದೈವಿಕ ಜ್ಞಾನ ಪ್ರವಹಿಸಲು ತೊಡಗಿತು. ಲೋಕದಲ್ಲಿ ಫಕ್ಕನೆ ಎಂತಹ ಒಂದು ಕ್ರಾಂತಿಯುಂಟಾಯಿತೆಂದರೆ ಅದಕ್ಕಿಂತ ಮುಂಚೆ ಯಾವುದೇ ಕಣ್ಣು ಅಂತಹ ಪರಿವರ್ತನೆಯನ್ನು ಕಂಡಿರಲಿಲ್ಲ ಮತ್ತು ಯಾವುದೇ ಕಿವಿ ಅಂತಹ ಪರಿವರ್ತನೆಯನ್ನು ಕೇಳಿರಲಿಲ್ಲ. ಅದು ಉಂಟಾದುದಾದರೂ ಹೇಗೆಂದು ನೀವು ತಿಳಿದಿರುವಿರಾ? ದೇವನಲ್ಲಿ ತನ್ನನ್ನು ಲೀನಗೊಳಿಸಿದ ಒಬ್ಬ ದೇವಭಕ್ತನು ಅಂಧಕಾರಮಯ ರಾತ್ರಿಗಳಲ್ಲಿ ಮಾಡುತ್ತಿದ್ದ ಪ್ರಾರ್ಥನೆಗಳೇ ಈ ಪರಿವರ್ತನೆಗಳನ್ನುಂಟುಮಾಡಿದುವು. ಆ ಪ್ರಾರ್ಥನೆಗಳು ಲೋಕದಲ್ಲಿ ಉಂಟುಮಾಡಿದ ಅಲ್ಲೋಲಕಲ್ಲೋಲಗಳು ಮತ್ತು ಅವು ತೋರಿಸಿಕೊಟ್ಟ ಅತ್ಯಾಶ್ಚರ್ಯಕರ ಸಂಗತಿಗಳು ಆ ನಿರಕ್ಷರಿ ನಿಸ್ಸಹಾಯಕ ವ್ಯಕ್ತಿಯಿಂದ ಸಾಧಿಸಲ್ಪಡುವುದು ಅಸಾಧ್ಯವೆಂದೇ ತೋರುತ್ತಿದ್ದುವು.

ಹೇ ಅಲ್ಲಾಹ್, ನೀನು ನಿನ್ನ ಇಷ್ಟಾಶೀರ್ವಾದಗಳನ್ನೂ ಶಾಂತಿಯನ್ನೂ ಅನುಗ್ರಹಗಳನ್ನೂ ಅವರ ಮೇಲೆಯೂ ಅವರ ಕುಟುಂಬದ ಮೇಲೆಯೂ ಅವರ ಅನುಯಾಯಿಗಳ ಮೇಲೆಯೂ ಅವರು ಈ ಸಮುದಾಯದ ಬಗ್ಗೆ ಹೊಂದಿದ್ದ ಕಾಳಜಿ ಮತ್ತು ಅವರು ಅದಕ್ಕಾಗಿ ಅನುಭವಿಸಿದ ದುಃಖ ಮತ್ತು ಕಷ್ಟದ ಪ್ರಮಾಣಕ್ಕನುಸಾರವಾಗಿ ಸುರಿಸು ಮತ್ತು ನೀನು ನಿನ್ನ ಕೃಪೆಯ ಪ್ರಕಾಶವನ್ನು ಅನಂತವಾಗಿ ಅವರ ಮೇಲೆ ಸುರಿಸುತ್ತಿರು."

**(ಬರಕಾತುದ್ದುಆ ಪುಟ 10–11 ರೂಹಾನೀ ಖಝಾಇನ್ ಸಂಪುಟ 6 ಪುಟ 10–11)**

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

## ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ♦ ಸತ್ಯವಿಶ್ವಾಸದಲ್ಲಿ ನಲ್ವತ್ತಕ್ಕಿಂತ ಅಧಿಕ ಶಾಖೆಗಳಿವೆ. ಆ ಶಾಖೆಗಳಲ್ಲೊಂದು ಲಜ್ಜೆಯಾಗಿದೆ. (ಬುಖಾರಿ)
- ♦ ಕಪಟ ವಿಶ್ವಾಸಿಗೆ ಮೂರು ಲಕ್ಷಣಗಳಿವೆ. ಸುಳ್ಳು ಹೇಳುವುದು, ಕರಾರು ಮುರಿಯುವುದು, ವಿಶ್ವಾಸ ವಂಚನೆ ಮಾಡುವುದು. (ಬುಖಾರಿ)
- ♦ ಜ್ಞಾನ ಜನರಿಂದ ಅಗಲುವುದು, ಅವಿವೇಕತನ ವರ್ಧಿಸುವುದು, ಮದ್ಯಪಾನ ವ್ಯಾಪಿಸುವುದು, ವ್ಯಭಿಚಾರ ಬಹಿರಂಗವಾಗಿ ನಡೆಯುವುದು ಎಂಬಿವು ಅಂತ್ಯಕಾಲದ ಕುರುಹುಗಳಾಗಿವೆ. (ಬುಖಾರಿ)
- ♦ ಸ್ವಂತ ಧನವನ್ನು ರಕ್ಷಿಸಲಿಕ್ಕೋಸ್ಕರ ಹೋರಾಡಿ ಮೃತನಾಗುವವನು 'ಶಹೀದ್' (ಹುತಾತ್ಮ). (ಬುಖಾರಿ)
- ♦ ದಾನ ಮಾಡಿದ್ದನ್ನು ಮರಳಿ ಪಡೆದರೆ ವಾಂತಿಯನ್ನು ತಿನ್ನುವ ನಾಯಿಯ ಹಾಗೆ. (ಬುಖಾರಿ)
- ♦ ಯಾರಾದರೂ ಸತ್ಯ ಪ್ರಮಾಣ ಮಾಡುವುದಾದರೆ, ಅಲ್ಲಾಹನ ನಾಮದಲ್ಲಿ ಸತ್ಯಪ್ರಮಾಣ ಮಾಡಬೇಕು. ಅಲ್ಲವಾದರೆ ಅವನು ಮೌನ ಅವಲಂಬಿಸಬೇಕು. (ಬುಖಾರಿ)
- ♦ ಖುರ್‌ಆನಿನ ಜ್ಞಾನವುಳ್ಳವನೂ ಅದನ್ನು ಕಲಿಸುವವನೂ ನಿಮ್ಮ ಪೈಕಿ ಅತಿ ಶ್ರೇಷ್ಠ. (ಬುಖಾರಿ)
- ♦ ವಿವಾಹದ ಔತಣಕ್ಕೆ ಯಾರಾದರೂ ಆಮಂತ್ರಿಸಿದರೆ ಆ ಆಮಂತ್ರಣವನ್ನು ನಿರಾಕರಿಸಬಾರದು. (ಬುಖಾರಿ)
- ♦ ಇಬ್ಬರ ಆಹಾರ ಮೂವರಿಗೂ ಮೂವರ ಆಹಾರ ನಾಲ್ವರಿಗೂ ಸಾಕಾಗುವುದು. (ಬುಖಾರಿ)
- ♦ ಒರಗಿ ಕುಳಿತುಕೊಂಡು ಆಹಾರ ತಿನ್ನುವುದು ನನಗಿಷ್ಟವಿಲ್ಲ. (ಬುಖಾರಿ)

# ಇನ್ಸಾನಿಯತ್ ಝಿಂದಾಬಾದ್
# ಮಾನವೀಯತೆ ಚಿರಕಾಲ ಬಾಳಲಿ

# LOVE FOR HONESTY AND HATRED FOR DISHONESTY
# ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ

# ಮುಹಮ್ಮದ್ ಪೈಗಂಬರ್(ಸ)
# ಮುಸ್ಲಿಮೇತರ ವಿದ್ವಾಂಸರ ದೃಷ್ಟಿಯಲ್ಲಿ

* ಶಹಾಬ್ ಅಹ್ಮದ್, ಎಡ್‌ಮಂಟನ್

**ಪ್ರಸಿದ್ಧರಾದ ಮುಸ್ಲಿಮೇತರ ವಿದ್ವಾಂಸರು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕುರಿತು ಬರೆದ ಅಭಿಪ್ರಾಯಗಳನ್ನು ಕೆಳಗೆ ಕ್ರೋಢೀಕರಿಸಲಾಗಿದೆ.**

## ಖುಷ್ವಂತ್ ಸಿಂಗ್

"ವಿಶ್ವದ ಮುಖ್ಯ ಧರ್ಮಗಳಲ್ಲಿ ಅತ್ಯಂತ ತಪ್ಪು ಗ್ರಹಿಕೆಗೆ ಗುರಿಯಾದ ಧರ್ಮವು ಇಸ್ಲಾಮ್ ಆಗಿದೆ. ಕ್ರೈಸ್ತ ಧರ್ಮದ ನಂತರ ಅದು ಅದರ ಅನುಯಾಯಿಗಳ ಸಂಖ್ಯೆಯ ದೃಷ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿದೆ. ಇತರ ಎಲ್ಲಾ ಧರ್ಮಗಳ ಪೈಕಿ ಯಾವುದೇ ಧರ್ಮಕ್ಕೆ ಹೊಸದಾಗಿ ಸೇರುವ ಜನರಿಗಿಂತ ಹೆಚ್ಚಿಗೆ ಜನರು ಇಸ್ಲಾಮಿಗೆ ಸೇರುತ್ತಿದ್ದಾರೆ. ಮುಸ್ಲಿಮರು ಮಧ್ಯಪೂರ್ವದೇಶಗಳಲ್ಲಿ, ಉತ್ತರ ಆಫ್ರಿಕಾದಲ್ಲಿ ಮತ್ತು ಸ್ಪೈನಿನಲ್ಲಿ ಪ್ರಭುತ್ವ ಗಳಿಸಿದ ನಂತರ ಇಸ್ಲಾಮಿನ ವಿರುದ್ಧ ದ್ವೇಷಾಸೂಯೆಗಳು ಕ್ರೈಸ್ತ ದೇಶಗಳಲ್ಲಿ ಹಬ್ಬಿತು. ಕ್ರೈಸ್ತ ಕ್ರೂಸೇಡರ್‌ಗಳು (ಹೋರಾಟಗಾರರು) ಇಸ್ಲಾಮನ್ನು ಅದರ ಮಾತೃ ಭೂಮಿಯಲ್ಲಿ ನಾಶಗೊಳಿಸಲು ಸಮರ್ಥರಾಗಲಿಲ್ಲ. ಆದರೆ ಅವರು ಇಸ್ಲಾಮ್ ಧರ್ಮದ ಸ್ಥಾಪಕರಾದ ಮುಹಮ್ಮದರನ್ನು ನಿಂದಿಸುವುದನ್ನು ಮುಂದುವರಿಸಿದರು.

"ಅವರ ಎರಡು ಮುಖ್ಯ ವಾದಗಳು ಹೀಗಿದ್ದುವು: ಒಂದು – ಇಸ್ಲಾಮ್ ಖಡ್ಗಬಲದಿಂದ ಹಬ್ಬಿತು. ಎರಡು – ಮುಹಮ್ಮದರು ಆದರ್ಶ ಸ್ವಭಾವ ಗುಣಗಳನ್ನು ಹೊಂದಿದ್ದರೆಂದು ಮುಸ್ಲಿಮರು ಪ್ರತಿಪಾದಿಸುತ್ತಾರಾದರೂ ಅವರು ಹಾಗೆ ಆದರ್ಶ ಸ್ವಭಾವ ಗುಣಗಳನ್ನು ಹೊಂದಿದವರು ಆಗಿರಲಿಲ್ಲ. ಇಸ್ಲಾಮನ್ನು ಬಲಾತ್ಕಾರದಿಂದ ಜನರ ಮೇಲೆ ಹೇರಿರಲಿಲ್ಲ ಎಂದು ಚಾರಿತ್ರಿಕ ಸಾಕ್ಷ್ಯಗಳ ಮೂಲಕ ಸಾಬೀತುಗೊಳಸಬಹುದು. ಅದನ್ನು ಮಿಲಿಯಗಟ್ಟಲೆ ಜನರು ಸ್ವಂತ ಇಚ್ಛೆಯಿಂದ ಅಂಗೀಕರಿಸಲು ಎರಡು ಹೊಸ ಕಾರಣಗಳಿದ್ದುವು. ಒಂದನೆಯದಾಗಿ, ಅದು ಜನರಿಗೆ ಸಮಾನತೆಯನ್ನು ನೀಡಿ ಮಾನವರೆಲ್ಲರೂ ಸಹೋದರರೆಂಬ ಹೊಸ ಮೌಲ್ಯವನ್ನು ಬೋಧಿಸಿತು. ಎರಡನೆಯದಾಗಿ, ಅಂದಿನ ಕಾಲದಲ್ಲಿ ಯಾರೂ ಎಂದೂ ಆಲಿಸದ, ಮಹಿಳೆಯರಿಗೆ ಹಕ್ಕುಗಳು ಎಂಬ ತತ್ವವನ್ನು ಇಸ್ಲಾಮ್ ಅವರಿಗೆ ನೀಡಿತು. ಇಂಡೋನೇಶಿಯಾ, ಮಲೇಶಿಯಾ ಮೊದಲಾದ ದೇಶಗಳಲ್ಲಿ ಇಸ್ಲಾಮ್ ಧರ್ಮವನ್ನು ಪ್ರಚಾರಗೊಳಿಸಿದುದು ಮುಸ್ಲಿಮ್ ಆಕ್ರಮಣಗಾರರಾಗಿರಲಿಲ್ಲ. ಮುಸ್ಲಿಮ್ ಧರ್ಮ ಪ್ರಚಾರಕರು ಅಲ್ಲಿನ ಜನರನ್ನು ಇಸ್ಲಾಮಿಗೆ ಸೇರಿಸಿದರು.

"ಅಲ್‌ಖಾಯಿದಾ, ತಾಲಿಬಾನ್ ಮೊದಲಾದ ಸಂಘಟನೆಗಳು ನಡೆಸುವ ಕೃತ್ಯಗಳು ಅಥವಾ ಅರೆಬೆಂದ ಮುಲ್ಲಾಗಳು ನೀಡುವ ಫತ್ವಾಗಳನ್ನು ಆಧಾರವಾಗಿಟ್ಟುಕೊಂಡು ಇಸ್ಲಾಮ್ ಬಗ್ಗೆ ತೀರ್ಪು ನೀಡಬಾರದು. ವೇದ ಮತ್ತು ಉಪನಿಷತ್ತುಗಳು ಪ್ರತಿಪಾದಿಸುವ ಹಿಂದೂ ಧರ್ಮದ ಬಗ್ಗೆ, ಮಸ್‌ಜಿದ್‌ಗಳನ್ನು ಕೆಡವಿಹಾಕುವ, ಧರ್ಮ ಪ್ರಚಾರಕರನ್ನು ಮತ್ತು ಸನ್ಯಾಸಿನಿಯರನ್ನು ಹತ್ಯೆಗೈಯುವ, ಪುಸ್ತಕ ಭಂಡಾರಗಳನ್ನೂ ಕಲಾಕೃತಿಗಳನ್ನೂ ಧ್ವಂಸಗೊಳಸುವ ಹಿಂದುತ್ವದ ಪ್ರತಿಪಾದಕರಾದ ಹಿಂದುಗಳ ಕೃತ್ಯಗಳನ್ನು ನೋಡಿ ತೀರ್ಪು ನೀಡಬಾರದು. ಭಿಂದ್ರನ್‌ವಾಲೆಯ ಭಾಷಣಗಳನ್ನು ಮತ್ತು ನಿರಪರಾಧಿಗಳನ್ನು ಕೊಲ್ಲುವ ಪುಂಡರನ್ನು ನೋಡಿ ಸಿಖ್ಖ್ ಗುರುಗಳ ಉಪದೇಶಗಳ ಬಗ್ಗೆ ತೀರ್ಪ ನೀಡಬಾರದು.

"ಇದೇ ರೀತಿ ಮುಹಮ್ಮದರು ಏನನ್ನು ಉಪದೇಶಿಸಿದರು ಮತ್ತು ಅವರು ಹೇಗೆ ವರ್ತಿಸಿದರು ಎಂಬುದನ್ನು ಆಧಾರವಾಗಿಟ್ಟುಕೊಂಡು ನೀವು ಅವರ ಬಗ್ಗೆ ತೀರ್ಪು ನೀಡಬೇಕು ಹೊರತು ಅವರ ತಥಾಕಥಿತ ಅನುಯಾಯಿಗಳು ಅವರ ಹೆಸರಲ್ಲಿ ಮಾಡುವ ಕೃತ್ಯಗಳನ್ನು ನೋಡಿಕೊಂಡು ಅಲ್ಲ.

"ಮುಹಮ್ಮದರ ಬಗ್ಗೆ ಮಾಡಲಾಗುವ ಆಧಾರ ರಹಿತ ವಿಮರ್ಶೆಗಳಲ್ಲಿ ಒಂದು, ಅವರು ಅವರ ಪ್ರಥಮ ಪತ್ನಿ ಖದೀಜ ನಿಧನ ಹೊಂದಿದ ನಂತರ ಮಾಡಿದ ವಿವಾಹಗಳ ಕುರಿತಾಗಿದೆ. ಈ ವಿಷಯವನ್ನು ಅಂದಿನ ಕಾಲದ ಅರಬ್ ದೇಶದ ಸಾಮಾಜಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಸಬೇಕಾಗಿದೆ. ಆ ಕಾಲದಲ್ಲಿ ಅರಬ್ ದೇಶದಲ್ಲಿ ವಿವಿಧ ಗೋತ್ರವರ್ಗಗಳ ಜನರು ಪರಸ್ಪರ ಹೋರಾಡುತ್ತಾ ಮತ್ತು ವ್ಯಾಪಾರಿ ಸಂಘಗಳನ್ನು ಕೊಳ್ಳೆ ಹೊಡೆಯುತ್ತಾ ಜೀವಿಸುತ್ತಿದ್ದರು. ಆಗ ಪುರುಷರು ಅಧಿಕ ಸಂಖ್ಯೆಯಲ್ಲಿ ಕೊಲ್ಲಲ್ಪಡುತ್ತಿದ್ದರು. ಅದರಿಂದ ಸ್ತ್ರೀಯರ ಸಂಖ್ಯೆ ಮತ್ತು ಪುರುಷರ ಸಂಖ್ಯೆಯಲ್ಲಿ ಆತಂಕಕಾರಿ ವ್ಯತ್ಯಾಸಗಳು ತಲೆದೋರುತ್ತಿದ್ದುವು. ಕೊಲ್ಲಲ್ಪಟ್ಟವರ ವಿಧವೆಯರಿಗೆ ಮತ್ತು ಅನಾಥರಾದ ಮಕ್ಕಳಿಗೆ ಮನೆಗಳನ್ನೂ ಜೀವನಾಧಾರವನ್ನೂ ಒದಗಿಸುವ ಆವಶ್ಯಕತೆ ಇತ್ತು. ಹೀಗೆ ಮಾಡದಿದ್ದರೆ ಅವರು ವ್ಯಭಿಚಾರಕ್ಕೆ ಮತ್ತು ಭಿಕ್ಷಾಟನೆಗೆ ಇಳಿಯುತ್ತಿದ್ದರು. ಇದನ್ನು ತಡೆಗಟ್ಟಲು ವಿಧವೆಯರಿಗೆ ವಿವಾಹ ಏರ್ಪಡಿಸಿ ಅವರಿಗೆ ಸಂರಕ್ಷಣೆ

ನೀಡಲಾಗುತ್ತಿತ್ತು. ವಿವಾಹವು ವಿವಿಧ ಗೋತ್ರಗಳ ಮಧ್ಯೆ ಸೌಹಾರ್ದ ಸಂಬಂಧ ಸ್ಥಾಪಿಸಲು ಉತ್ತಮ ಮಾರ್ಗವಾಗಿತ್ತು. ಮುಹಮ್ಮದರು ತನ್ನ ಜನತೆ ಅಂಗೀಕರಿಸಲಾರದಂತಹ ಯಾವ ಕೆಲಸವನ್ನೂ ಮಾಡಲಿಲ್ಲ. ಅವರು ಇನ್ನಷ್ಟು ಮುಂದುವರಿದರು. ಏಕಪತ್ನಿಯನ್ನು ಹೊಂದುವುದು ಅತ್ಯುತ್ತಮವೆಂದು ಹೇಳಿದ ಧರ್ಮೋಪದೇಶಕರಲ್ಲಿ ಅವರು ಪ್ರಥಮರಾಗಿದ್ದಾರೆ. ಪತ್ನಿಯರನ್ನು ಹೊಂದುವ ಗರಿಷ್ಠ ಮಿತಿಯನ್ನು ಅವರು ನಾಲ್ಕಕ್ಕೆ ಸೀಮಿತಗೊಳಿಸಿದರು. ಆದರೆ ಅವರೆಲ್ಲರನ್ನೂ ಸಮಾನವಾಗಿ ಸಂತೋಷಪಡಿಸಲು ಸಾಧ್ಯವಿದ್ದರೆ ಮಾತ್ರ ಒಬ್ಬನು ಹಾಗೆ ಮಾಡಬಹುದೆಂದು ವಿಧಿಸಿದರು – ಇದು ಕಷ್ಟಸಾಧ್ಯವಾದುದೇ ಆಗಿತ್ತು." **(The Asian Times, March 2008)**

*~*~*~*~*

## ದಿ ವರ್ಲ್ಡ್ ಬುಕ್ ಎನ್‌ಸೈಕ್ಲೋಪೀಡಿಯಾ

"ಮುಹಮ್ಮದ್ ಎಲ್ಲಾ ಕಾಲಗಳಿಗೆ ಸೇರಿದ ಅತ್ಯಂತ ಪ್ರಭಾವಶಾಲಿ ಜನರ ಪೈಕಿ ಒಬ್ಬರಾಗಿದ್ದರು.... ಮುಹಮ್ಮದರು ಏಳನೆಯ ಶತಮಾನದಲ್ಲಿ ಧರ್ಮೋಪದೇಶವನ್ನು ಪ್ರಾರಂಭಿಸಿದಾಗ ಅರಬ್ ದೇಶವು ಕಾಡುಗುಡ್ಡ ಮರುಭೂಮಿ ಭರಿತ, ಕಾನೂನು ಕಾಯಿದೆಗಳ ಹತೋಟಿ ಇಲ್ಲದ ದೇಶವಾಗಿತ್ತು. ಮರುಭೂಮಿ ನಿವಾಸಿಗಳಾದ, ವೈರತ್ವದಲ್ಲಿ ಅತ್ಯುಗ್ರರಾದ ಗೋತ್ರಗಳು ಪರಸ್ಪರ ನಿರಂತರ ಹೋರಾಡುತ್ತಾ ರಕ್ತಪಾತ ಮಾಡುತ್ತಿದ್ದವು. ಅರಬ್ ದೇಶದ ನೈರುತ್ಯ ಭಾಗದಲ್ಲಿದ್ದ ಮಕ್ಕ ಎಂಬ ನಗರದಲ್ಲಿ ಬಡವರು ಬಹಳ ಹಿಂಸಾಚಾರಗಳಿಗೆ ಗುರಿಯಾಗುತ್ತಿದ್ದರು. ಆ ದೇಶದ ಬಹುತೇಕ ಜನರು ಅನೇಕ ದೇವರುಗಳನ್ನೂ ವಿಗ್ರಹಗಳನ್ನೂ ಪ್ರೇತಗಳನ್ನೂ ಪೂಜಿಸುತ್ತಾ ಪ್ರಾರ್ಥಿಸುತ್ತಿದ್ದರು. ಮುಹಮ್ಮದ್ ದೇವನಿಂದ ತನ್ನ ಜನತೆಗೆ ಹೊಸ ಸಂದೇಶವನ್ನು ತಂದರು. ಅವರು ಹೀಗೆ ಉಪದೇಶಿಸಿದರು: ದೇವನೊಬ್ಬನೆ. ಎಲ್ಲರೂ ಅವನಿಗೆ ಶರಣಾಗತರಾಗಬೇಕು. ದೇವನಿಗೆ ಶರಣಾಗುವುದೇ ಇಸ್ಲಾಮ್ ಆಗಿದೆ. ಜನರು ತಮ್ಮ ಗೋತ್ರಗಳಿಗೆ ತೋರಿಸುತ್ತಿದ್ದ ನಿಷ್ಠೆಯನ್ನು ಅವರು ಬದಲಾಯಿಸಿ ಮುಸ್ಲಿಮರ ಮಧ್ಯೆ ಸಮಾನತೆ ಮತ್ತು ಭ್ರಾತೃ ಸಂಬಂಧ ಸ್ಥಾಪನೆಗೆ ಅವರು ನಿಷ್ಠರಾಗುವಂತೆ ಮಾಡಿದರು. ಅವರು ಮಕ್ಕದ ಶ್ರೀಮಂತರು ಮಾಡುತ್ತಿದ್ದ ಅನ್ಯಾಯಗಳ ವಿರುದ್ಧ ಉಪದೇಶಿಸಿ ಬಡವರಿಗೆ ಸಹಾಯ ಮಾಡಲು ಪ್ರಯತ್ನಿಸಿದರು. ಮುಹಮ್ಮದರು ತನ್ನ ಜೀವಿತ ಕಾಲದಲ್ಲಿಯೇ ತನ್ನ ಜನತೆಯನ್ನು ಒಂದು ಭವ್ಯ ಧಾರ್ಮಿಕ ಅಭಿಯಾನದಲ್ಲಿ ಒಗ್ಗೂಡಿ ವರ್ತಿಸುವಂತೆ ಮಾಡಿದರು. ಅವರು ನಿಧನ ಹೊಂದಿದ ನಂತರ ಒಂದು ನೂರು ವರ್ಷಗಳೊಳಗೆ ಮುಸ್ಲಿಮರು ಮುಹಮ್ಮದರ ಸಂದೇಶವನ್ನು ಮಧ್ಯಪೂರ್ವದ ಇತರ ಪ್ರದೇಶಗಳಿಗೂ ಉತ್ತರ ಆಫ್ರಿಕಕ್ಕೂ ಯುರೋಪಿಗೂ ಏಶಿಯಾ ಖಂಡಕ್ಕೂ ಕೊಂಡೊಯ್ದರು.

"ಇಸ್ಲಾಮ್ ವಿಶ್ವದ ಅತಿ ದೊಡ್ಡ ಧರ್ಮಗಳಲ್ಲಿ ಒಂದಾಗಿದೆ. ಇಂದು ಸೌದಿ ಅರೇಬಿಯಾ ಎಂದು ಗುರುತಿಸಲ್ಪಡುವ ಪ್ರದೇಶದಲ್ಲಿ ಅದು ಜನ್ಮ ತಾಳಿತು. ಇಸ್ಲಾಮಿನ ಸ್ಥಾಪಕರು ಕ್ರಿ.ಶ. 570ರಲ್ಲಿ ಮಕ್ಕದಲ್ಲಿ ಜನಿಸಿದ ಮುಹಮ್ಮದ್ ಆಗಿದ್ದಾರೆ. ಅವರು ಶಿಶುವಾಗಿದ್ದಾಗಲೇ ಅನಾಥರಾಗಿದ್ದರು. ಹಾಗೆ ಅವರ ಚಿಕ್ಕಪ್ಪ ಅವರ ರಕ್ಷಕರಾದರು.

"ಆ ಕಾಲದಲ್ಲಿ ಅರಬ್ ದೇಶ ಕಾಡು ಮೇಡು ಮರುಭೂಮಿಗಳಿಂದ ಕೂಡಿದ, ಕಾನೂನು ಕಾಯಿದೆಗಳ ಹತೋಟಿಗೆ ಅಧೀನವಾಗಿರದ ದೇಶವಾಗಿತ್ತು. ಅಲ್ಲಿ ಮರುಭೂಮಿ ನಿವಾಸಿಗಳಾದ ಗೋತ್ರಗಳು ಪರಸ್ಪರ ರಕ್ತಪಾತ ಮಾಡುವ ಯುದ್ಧಗಳನ್ನು ಮಾಡುತ್ತಿದ್ದರು. ಬಡವರು ಅತ್ಯಂತ ಹೆಚ್ಚು ಕಷ್ಟಕ್ಕೀಡಾಗಿದ್ದರು. ಅರಬ್ ದೇಶದ ಜನರು ಅನೇಕ ದೇವರುಗಳನ್ನು ನಂಬುತ್ತಿದ್ದರು. ಅವರು ವಿಗ್ರಹಗಳನ್ನು ಮತ್ತು ಪ್ರೇತಗಳನ್ನು ಪ್ರಾರ್ಥಿಸುತ್ತಿದ್ದರು.

"ಅಂದಾಜು 610ನೇ ವರ್ಷದಲ್ಲಿ ಮುಹಮ್ಮದ್ ಬಹಿರಂಗವಾಗಿ ಉಪದೇಶ ಮಾಡಲು ತೊಡಗಿದರು. ಅಲ್ಲಾಹ್ ಎಂಬ ಒಬ್ಬನೇ ಒಬ್ಬ ದೇವನಿದ್ದಾನೆಂದೂ ಮುಹಮ್ಮದ್ ಅವನ ಪ್ರವಾದಿ ಎಂದೂ ಅವರು ಉಪದೇಶಿಸಿದರು. ಜನರು ಏಕದೇವನಿಗೆ ಶರಣಾಗಬೇಕೆಂದು ಸಹ ಅವರು ಉಪದೇಶಿಸಿದರು. ಅವರು ಹಳೆಯ ಗೋತ್ರ ನಿಷ್ಠೆಯನ್ನು ಬದಲಾಯಿಸಿ ಮುಸ್ಲಿಮರ ಮಧ್ಯೆ ಸಮಾನತೆ ಮತ್ತು ಪರಸ್ಪರ ನಿಷ್ಠೆಯನ್ನು ಸ್ಥಾಪಿಸಲು ಪ್ರಯತ್ನಿಸಿದರು. ಮಕ್ಕದ ಶ್ರೀಮಂತರು ಮಾಡುತ್ತಿದ್ದ ಅನ್ಯಾಯ ವರ್ತನೆಗಳ ವಿರುದ್ಧ ಅವರು ಉಪದೇಶಿಸಿದರು.

"ಒಂದು ಧರ್ಮದ ಮತ್ತು ಒಂದು ಸಮುದಾಯದ ನಾಯಕರಾಗಿದ್ದ ಮುಹಮ್ಮದರು ತನ್ನ ಉಪದೇಶಗಳಿಗೆ ಕಾನೂನು ಕಾಯಿದೆಗಳ ರೂಪ ನೀಡಲು ಪ್ರಯತ್ನಿಸಿದರು. ಅವರು ಮೂರ್ತಿ ಪೂಜೆಯನ್ನು ನಿಷಿದ್ಧಗೊಳಿಸಿದರು. ಅವರು ಬಹುಭಾರ್ಯತ್ವವನ್ನೂ ವಿವಾಹ ವಿಚ್ಛೇದನೆಯನ್ನೂ ನಿಯಂತ್ರಣಕ್ಕೊಳಪಡಿಸಿದರು. ಅವರು ವಾರಸು ಹಕ್ಕುಗಳನ್ನು ಸುಧಾರಣೆ ಮಾಡಿದರು, ಗುಲಾಮಗಿರಿಯನ್ನು ನಿಯಂತ್ರಿಸಿದರು, ಬಡವರ ಹಿತಕ್ಕೋಸ್ಕರ ಕಾರ್ಯಶೀಲರಾದರು. ಕೆಲವು ಗೋತ್ರಗಳ ಜನರು ದಾರಿದ್ರ್ಯದ ಅಪಾಯದಿಂದ ಮುಕ್ತಿ ಹೊಂದಲು ಹೆಣ್ಣು ಶಿಶುಗಳನ್ನು ಕೊಲ್ಲುತ್ತಿದ್ದರು. ಮುಹಮ್ಮದರು ಈ ಆಚಾರವನ್ನು ನಿಷಿದ್ಧಗೊಳಿಸಿದರು."

**(The World Book Encyclopedia, World Book, Inc. Chicago, USA 2006, Volume 13, p. 910)**

*~*~*~*~*

## ದಿ ನ್ಯೂ ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ

"ಅವರ ಧೈರ್ಯ, ದೃಢನಿರ್ಧಾರ, ನಿಷ್ಪಕ್ಷತೆ, ಸ್ಥಿರತೆ ಮತ್ತು ಔದಾರ್ಯಗಳಿಗೋಸ್ಕರ ಮುಹಮ್ಮದರು ತಮ್ಮ ಸಮಕಾಲೀನ ಮೆಚ್ಚುಗೆಗೆ ಪಾತ್ರರಾಗಿದ್ದರು. ಅವರು ತಮ್ಮ ವ್ಯಕ್ತಿತ್ವದ ಮೋಹಕ ಗುಣದಿಂದ ಜನರ ಹೃದಯಗಳನ್ನು ಗೆದ್ದಿದ್ದರು. ಅವರು ಮೃದು ಸ್ವಭಾವಿಯಾಗಿದ್ದರು. ವಿಶಿಷ್ಟವಾಗಿ ಮಕ್ಕಳೊಂದಿಗೆ ವರ್ತಿಸುವಾಗ. ಅವರು ಕೆಲವು ಸಾರಿ ಯೋಚನಾಮಗ್ನರಾಗಿ ಮೌನವಾಗಿರುತ್ತಿದ್ದರೂ ಅವರು ತಮ್ಮ ಜೀವಿತದ ಬಹುತೇಕ ಭಾಗವನ್ನು ಉದ್ದೇಶಪೂರಿತ ಕೆಲಸಗಳಿಗಾಗಿ ವಿನಿಯೋಗಿಸಿದರು. ಅವರು ವೇಗವಾಗಿ ನಡೆಯುತ್ತಿದ್ದರು ಮತ್ತು ನಿರರ್ಗಳವಾಗಿ ಮಾತನಾಡುತ್ತಿದ್ದರು. ಅವರು ಮುಸ್ಲಿಮರಿಗೆ ನೈತಿಕ ಸ್ವಭಾವ ಗುಣಗಳ ಮಾದರಿಯಾದರು. ಮಾನವ ಜೀವಿತದ ಇಸ್ಲಾಮಿಕವಾದ ಅತ್ಯುತ್ತಮ ಆದರ್ಶವನ್ನು ಪಾಲಿಸಿದ ಮಹಾನುಭಾವರೆಂದು ಅವರ ಬಗ್ಗೆ ಇರುವ ಕಥೆಗಳು ಪ್ರಸ್ತಾಪಿಸುತ್ತವೆ."

**(The New Encyclopedia Britannica, Volume 22, Macropaedia. 15th Edition, 1998, p.5)**

*~*~*~*~*~*

## ಜೋರ್ಜ್ ಬೆಶೋರ್

"ವೈದ್ಯಶಾಸ್ತ್ರ, ಗಣಿತ, ಖಗೋಳ ಶಾಸ್ತ್ರ, ತತ್ವಶಾಸ್ತ್ರ ಮತ್ತು ರಸಾಯನ ಶಾಸ್ತ್ರದಲ್ಲಿ ಪುರಾತನ ಈಜಿಪ್ಪಿನ, ಗ್ರೀಸಿನ ಮತ್ತು ರೋಮಿನ ವಿಜ್ಞಾನಿಗಳು ಗಮನಾರ್ಹ ಪ್ರಗತಿಯನ್ನು ಗಳಿಸಿದ್ದರು. ಅಂದಾಜು 570ರ ವರ್ಷದಲ್ಲಿ ಅರಬ್ ದೇಶದಲ್ಲಿ ಮುಹಮ್ಮದ್ ಎಂಬ ಮಗು ಹುಟ್ಟದೆ ಇರುತ್ತಿದ್ದರೆ ಈ ಎಲ್ಲಾ ಸಂಶೋಧನೆಗಳು ಲೋಕಕ್ಕೆ ಶಾಶ್ವತವಾಗಿ ನಷ್ಟವಾಗಿ ಹೋಗುತ್ತಿದ್ದುವು."

**(Beshore, George: Science in Early Islamic Cultures, Grolier Publishing, 1998, p.8)**

*~*~*~*~*~*

## ಕೆ. ಎಸ್. ರಾಮಕೃಷ್ಣರಾವ್

"ಮುಸ್ಲಿಮ್ ಚರಿತ್ರೆಗಾರರ ಪ್ರಕಾರ ಅರಬ್ ದೇಶದ ಮರುಭೂಮಿಯಲ್ಲಿ ಮುಹಮ್ಮದ್ 571 ಎಪ್ರಿಲ್ ದಿನಾಂಕ 20ರಂದು ಜನಿಸಿದರು. ಈ ಹೆಸರಿನ ಅರ್ಥ 'ಅತ್ಯಂತ ಸ್ತುತಿಸಲ್ಪಟ್ಟವನು' ಎಂದು. ಅರಬ್ ದೇಶದ ಪುತ್ರರಲ್ಲಿ ಅವರು ಅತ್ಯಂತ ಮೇಧಾವಿ ಆಗಿದ್ದರೆಂದು ನಾನು ಗಣಿಸುತ್ತೇನೆ. ಅವರಿಗಿಂತ ಮುಂಚಿತವಾಗಿ ಅರಬ್ ದೇಶದ ಕೆಂಪು ಮರಳಿನ ಅಭೇದ್ಯ ಮರುಭೂಮಿಯಲ್ಲಿ ಎಲ್ಲಾ ಕವಿಗಳು ಮತ್ತು ದೊರೆಗಳು ಸಾಧಿಸಿದುದಕ್ಕಿಂತ ಹೆಚ್ಚಿನದನ್ನು ಅವರು ಸಾಧಿಸಿ ತೋರಿಸಿದರು. ಅವರು ಕಾಣಿಸಿಕೊಂಡಾಗ ಅರಬ್ ದೇಶವು ಶೂನ್ಯ ಮರುಭೂಮಿಯಾಗಿತ್ತು. ಶೂನ್ಯತೆಯಿಂದ ಒಂದು ಹೊಸ ಲೋಕವನ್ನು ಮುಹಮ್ಮದರ ಮಹಾನ್ ಚೇತನವು ರೂಪಿಸಿತು. ಒಂದು ಹೊಸ ಜೀವಿತ, ಹೊಸ ಸಂಸ್ಕೃತಿ, ಹೊಸ ನಾಗರಿಕತೆ ಮತ್ತು ಮೊರಕ್ಕೋದಿಂದ ಭಾರತದ ತನಕ ವ್ಯಾಪಿಸಿದ ಸಾಮ್ರಾಜ್ಯದ ಸ್ಥಾಪನೆ ಆಯಿತು. ಏಶಿಯಾ, ಆಫ್ರಿಕಾ ಮತ್ತು ಯುರೋಪ್ ಎಂಬ ಮೂರು ಖಂಡಗಳ ಚಿಂತನೆಗಳನ್ನೂ ಜೀವಿತವನ್ನೂ ಅದು ಪ್ರಭಾವಕ್ಕೊಳಪಡಿಸಿತು.... ಇಸ್ಲಾಮ್ ಮತ್ತು ಖಡ್ಗ ಎಂಬ ಸಿದ್ಧಾಂತವು ಹೆಚ್ಚಿನ ವಲಯಗಳಲ್ಲಿ ಪದೇ ಪದೇ ಈಗ ಕೇಳಿಸುತ್ತಾ ಇಲ್ಲ.... ವಿಶ್ವ ಭ್ರಾತೃತ್ವ ಮತ್ತು ಮಾನವರೆಲ್ಲರೂ ಸಮಾನರೆಂಬ ಸಿದ್ಧಾಂತ ಮುಹಮ್ಮದರು ಪ್ರತಿಪಾದಿಸಿದರು. ಅದು ಮಾನವರ ಸ್ಥಿತಿ ಸುಧಾರಣೆಗೆ ಅವರು ನೀಡಿದ ಬಹು ಅಮೂಲ್ಯವಾದ ಕೊಡುಗೆಯಾಗಿದೆ. ಎಲ್ಲಾ ಮಹಾನ್ ಧರ್ಮಗಳು ಈ ಸಿದ್ಧಾಂತವನ್ನು ಉಪದೇಶಿಸಿವೆ. ಆದರೆ ಇಸ್ಲಾಮಿನ ಪ್ರವಾದಿ ಈ ಸಿದ್ಧಾಂತವನ್ನು ಕೃತಿಗಿಳಿಸಿ ತೋರಿಸಿದರು. ಪ್ರಾಯಶಃ ಶತಮಾನಗಳ ನಂತರ ಅಂತಾರಾಷ್ಟ್ರೀಯ ಪ್ರಜ್ಞೆ ಎಚ್ಚರಗೊಳ್ಳುವಾಗ, ಜನಾಂಗೀಯ ದ್ವೇಷಗಳು ಕಣ್ಮರೆಯಾಗುವಾಗ, ಜಗತ್ತಿನಲ್ಲಿ ಮಾನವೀಯ ಭ್ರಾತೃತ್ವವು ಸ್ಥಾಪಿತವಾಗುವಾಗ ಮುಹಮ್ಮದರು ಕೈಗೊಂಡ ಉಪಕ್ರಮಗಳ ಮೌಲ್ಯವು ಹೆಚ್ಚು ಪೂರ್ಣವಾಗಿ ಗುರುತಿಸಲ್ಪಡುವುದು.... ಅರಬ್ ದೇಶದ ಜನರು ಒಂದು ಬಲಿಷ್ಠವಾದ ಪಾರಂಪರಿಕ ನಡವಳಿಕೆಯನ್ನು ಹೊಂದಿದ್ದರು. ಯಾರು ಈಟಿಯಿಂದ ತಿವಿಯಬಲ್ಲನೋ ಮತ್ತು ಖಡ್ಗವನ್ನು ಚಲಾಯಿಸಬಲ್ಲನೋ ಅವನೇ ಸ್ವತ್ತಿಗೆ ವಾರೀಸುದಾರನಾಗುವನು. ಆದರೆ ಇಸ್ಲಾಮ್ ಧರ್ಮವು ಮಹಿಳೆಯರ ರಕ್ಷಕನಾಗಿ ಆಗಮಿಸಿ ತಂದೆ ತಾಯಂದಿರ ಸ್ವತ್ತಿನಲ್ಲಿ ಮಹಿಳೆಯರಿಗೂ ವಾರಸು ಹಕ್ಕನ್ನು ನೀಡಿತು. ಇಸ್ಲಾಮ್ ಧರ್ಮವು ಶತಮಾನಗಳ ಹಿಂದೆ ಮಹಿಳೆಯರಿಗೆ ಭೂಸ್ವತ್ತನ್ನು ಹೊಂದುವ ಹಕ್ಕನ್ನು ನೀಡಿತು. ಆದರೆ ಹನ್ನೆರಡು ಶತಮಾನಗಳ ನಂತರ 1881ರಲ್ಲಿ 'ಪ್ರಜಾಪ್ರಭುತ್ವದ ತೊಟ್ಟಿಲು' ಎಂದು ಕರೆಯಲ್ಪಡುವ ಇಂಗ್ಲೆಂಡ್ ಇಸ್ಲಾಮಿನ ಈ ನಿಯಮವನ್ನು ದೇಶದಲ್ಲಿ ಜಾರಿಗೊಳಿಸಿತು. ಆ ನಿಯಮವು 'ವಿವಾಹಿತ ಮಹಿಳೆಯ ನಿಯಮ' ಎಂದು ಕರೆಯಲ್ಪಡುತ್ತದೆ...... ಮುಹಮ್ಮದರ ಸಮಕಾಲೀನರು, ಅವರು ಸ್ನೇಹಿತರಾದರೂ ಶತ್ರುಗಳಾದರೂ ಅವರ ಅತ್ಯುತ್ತಮ ಸ್ವಭಾವ ಗುಣಗಳನ್ನು, ನಿಷ್ಕಳಂಕ ಪ್ರಾಮಾಣಿಕತೆ, ಅವರ ಭವ್ಯ ವರ್ತನೆ, ಅವರ ಪರಿಪೂರ್ಣ ವಿಧೇಯತೆ, ಅವರ ವಿಶ್ವಾಸಾರ್ಹತೆಯನ್ನು ಎಲ್ಲಾ ಜೀವಿತ ಕ್ಷೇತ್ರಗಳಲ್ಲೂ ಗುರುತಿಸಿ ಪ್ರಶಂಸಿದ್ದಾರೆ.... ಪರಿಸ್ಥಿತಿಗಳು ಬದಲಾಯಿಸಿದವು. ಆದರೆ ದೇವನ ಪ್ರವಾದಿಯಲ್ಲಿ ಯಾವ ಬದಲಾವಣೆಯೂ ಉಂಟಾಗಲಿಲ್ಲ. ಜಯಶಾಲಿಯಾಗಿದ್ದಾಗಲೂ ಸೋತಾಗಲೂ ಅಧಿಕಾರ ಹೊಂದಿದಾಗಲೂ

ಕಷ್ಟದಲ್ಲಿದ್ದಾಗಲೂ ಸಿರಿತನದಲ್ಲೂ ಬಡತನದಲ್ಲೂ ಅವರು ಒಂದೇ ರೀತಿಯ ಸ್ವಭಾವವನ್ನು ಪ್ರಕಟಿಸಿದರು. ದೇವನ ರೀತಿಗಳು ಮತ್ತು ನಿಯಮಗಳು ಬದಲಾವಣೆ ಹೊಂದಲಾರವು. ಇದೇ ರೀತಿ ದೇವನ ಪ್ರವಾದಿಗಳ ಸ್ವಭಾವಗುಣಗಳು ಬದಲಾವಣೆ ಹೊಂದಲಾರವು. ಒಬ್ಬ ಪ್ರಾಮಾಣಿಕ ಮನುಷ್ಯನು ದೇವನ ಅತ್ಯುತ್ತಮ ಸೃಷ್ಟಿಯಾಗಿದ್ದಾನೆ ಎಂದು ಒಂದು ನುಡಿಮುತ್ತು ಇದೆ. ಮುಹಮ್ಮದರು ಪ್ರಾಮಾಣಿಕತೆಗಿಂತ ಮಿಗಿಲಾಗಿ ಇದ್ದರು. ಅವರು ತನ್ನ ಎಲುಬಿನ ಮಜ್ಜೆಯ ತನಕ ಮಾನವೀಯತೆಯನ್ನು ಹೊಂದಿದ್ದರು. ಮಾನವರ ಬಗ್ಗೆ ಸಹತಾಪ, ಮಾನವೀಯ ಪ್ರೇಮ ಅವರ ಆತ್ಮದ ಸಂಗೀತವಾಗಿತ್ತು. ಮಾನವರ ಸೇವೆ, ಮಾನವರನ್ನು ಮೇಲೆತ್ತುವುದು, ಮಾನವರನ್ನು ಶುದ್ಧಿಕರಿಸುವುದು, ಮಾನವರಿಗೆ ವಿದ್ಯಾಭ್ಯಾಸ ನೀಡುವುದು ಇವುಗಳು ಅವರ ಜೀವಿತದ ಪರಮ ಉದ್ದೇಶ ಲಕ್ಷ್ಯಗಳಾಗಿದ್ದುವು. ಯೋಚನೆಗಳಲ್ಲಿ, ವಚನಗಳಲ್ಲಿ, ಕೆಲಸಗಳಲ್ಲಿ ಮಾನವರ ಹಿತಕಾಂಕ್ಷೆಯೇ ಅವರ ಏಕಮಾತ್ರ ಪ್ರಚೋದನೆಯೂ ಅವರ ಏಕಮಾತ್ರ ಮಾರ್ಗದರ್ಶಿ ಸೂತ್ರವೂ ಆಗಿತ್ತು."

**(Rao, K. S. Ramakrishna. Mohammad: The Prophet. Abdul Rahman, 1996, pp. 1-14)**

*~*~*~*~*~*

## ಕರೆನ್ ಆರ್ಮ್‌ಸ್ಟ್ರಾಂಗ್

"ಅವರು ಪ್ರತಿಭಾವಂತ ಆಕರ್ಷಕ ರಾಜಕೀಯ ನಾಯಕರಾಗಿದ್ದರು. ಅವರು ಅರಬ್ ದೇಶವನ್ನು ಮಾತ್ರವಲ್ಲ, ಲೋಕದ ಚರಿತ್ರೆಯನ್ನು ಪರಿವರ್ತಿಸಿದರು... ಮಾನವ ಕುಲದ ಸಮಾನತೆಯಲ್ಲಿ ನಿಷ್ಠೆಯುಳ್ಳ ಆದರ್ಶವನ್ನು ಹೊಂದಿದ ಇಸ್ಲಾಮ್ ಎಲ್ಲಾ ಜನರನ್ನು ಸಮಾನ ಸಾಮಾಜಿಕ ಮತ್ತು ರಾಜಕೀಯ ಹಂತಕ್ಕೆ ತಂದು ಭ್ರಾತೃಭಾವನೆಯನ್ನು ಬೆಳೆಸುವ ಪ್ರಾಯೋಗಿಕ ವಿಧಾನವನ್ನು ಜಾರಿಗೊಳಿಸಿತು.... ನಿಶ್ಚಯವಾಗಿಯೂ ಮುಹಮ್ಮದ್ ಸ್ವತಃ ತನ್ನ ನಡೆವಳಿಕೆಯಿಂದ ಭ್ರಾತೃ ಸಂಬಂಧ ಸ್ಥಾಪಿಸುವ ಉನ್ನತ ಮಟ್ಟವನ್ನು ತೋರಿಸಿಕೊಟ್ಟರು. ಹಲವು ಶತಮಾನಗಳ ಕಾಲ ನಾವು ಪಾಶ್ಚಿಮಾತ್ಯರು ಮುಹಮ್ಮದರ ಕುರಿತು ಹೇಳುವ ನಿರ್ದಯಿ, ಕ್ರೂರ ಯೋಧ, ಕಲ್ಲೆದೆಯ ರಾಜಕಾರಣಿ ಎಂಬ ಭಾವನೆ ಹೊಂದಿದ್ದೆವು. ಆದರೆ ವಾಸ್ತವಿಕವಾಗಿ ಅವರು ಬಹಳ ದಯೆದೋರುವವರೂ ಬುದ್ಧಿಶಾಲಿಯೂ ಆಗಿದ್ದರು.... ಮುಹಮ್ಮದರ ಅಸಾಧಾರಣವಾದ ವಿಜಯಕ್ಕೆ ದೇವನ ಸಹಾಯ ಎಂದಲ್ಲದೆ ಬೇರೇನೂ ವಿವರಣೆ ನೀಡಲು ಸಾಧ್ಯವಾಗದು... ರೋಮನ್ ಸಾಮ್ರಾಜ್ಯಕ್ಕೆ ಅಧೀನವಾದ ದೇಶಗಳ ವಿರುದ್ಧ ಯುದ್ಧ ಮಾಡದಿರುವುದು ಎಂಬ ತತ್ವ ಪ್ರಕಾರ ತಮ್ಮ ವೈಯಕ್ತಿಕ ಜೀವಿತವನ್ನು ಪರಿವರ್ತಿಸಿದ ಆದಿಕಾಲೀನ ಕ್ರೈಸ್ತರ ಹಾಗೆ ವರ್ತಿಸದೆ ಮುಹಮ್ಮದ್ ಮತ್ತು ಅವರ ಸಂಗಡಿಗರು ತಮ್ಮ ಸಮಾಜದ ಸುಧಾರಣೆಗೆ ಕಾರ್ಯಪ್ರವೃತ್ತರಾದರು. ಹಾಗೆ ಮಾಡದ ಹೊರತು ಯಾವುದೇ ನೈತಿಕ ಮತ್ತು ಆಧ್ಯಾತ್ಮಿಕ ಪ್ರಗತಿ ಉಂಟಾಗಲಾರದು... ಇಸ್ಲಾಮಿಕ ಸಾಮ್ರಾಜ್ಯವು ಅದರ ವಿಸ್ತಾರದ ಮಿತಿಯನ್ನು ಮುಹಮ್ಮದರು ಮೃತರಾದ ನಂತರ ಒಂದು ನೂರು ವರ್ಷದೊಳಗೆ ತಲಪಿತು. ಮುಸ್ಲಿಮರು ತಮ್ಮ ನೆರೆಹೊರೆಯ ಮುಸ್ಲಿಮೇತರ ದೇಶಗಳೊಂದಿಗೆ, ಅವರ ಪ್ರದೇಶ ಯುದ್ಧದ ಮನೆ (ದಾರುಲ್ ಹರ್ಬ್) ಎಂದು ಕರೆಯಲ್ಪಡುತ್ತಿದ್ದರೂ ರಾಜಕೀಯ ಮತ್ತು ಆರ್ಥಿಕ ಸಂಬಂಧವನ್ನು ಸ್ಥಾಪಿಸಿದರು. ಯಹೂದಿಯರ, ಕ್ರೈಸ್ತರ ಮತ್ತು ಝೊರಾಸ್ಟ್ರಿಯನರ ಮೇಲೆ ಇಸ್ಲಾಮಿಗೆ ಪರಿವರ್ತನೆ ಹೊಂದಬೇಕೆಂಬ ಯಾವುದೇ ಒತ್ತಡ ಹೇರಿರಲಿಲ್ಲ... ಪಶ್ಚಿಮದಲ್ಲಿರುವ ನಮಗೆ ಇಸ್ಲಾಮಿನೊಂದಿಗೆ ಹೆಣಗಾಡಲು ಎಂದೂ ಸಾಧ್ಯವಾಗಲಿಲ್ಲ. ಅದರ ಬಗ್ಗೆ ನಮ್ಮ ಯೋಚನೆಗಳು ಅಪಕ್ವವೂ ತಿರಸ್ಕಾರ ಯೋಗ್ಯವೂ ಆಗಿವೆ. ಇಂದು ಮುಸ್ಲಿಮ್ ಲೋಕದಲ್ಲಿರುವ ನೋವು ಮತ್ತು ಅಲ್ಲಿ ಆರಂಭಗೊಂಡ ದಾರುಣ ಯಾತನೆಯ ಬಗ್ಗೆ ನಮ್ಮ ಅಸಡ್ಡೆಯು ಸಹಿಷ್ಣುತೆ ಮತ್ತು ದಯೆದೋರುವಿಕೆಯ ಬಗ್ಗೆ ನಮಗಿರುವ ಬದ್ಧತೆಯನ್ನು ನಿರಾಕರಿಸುವಂತಿದೆ. ಇಸ್ಲಾಮ್ ಧರ್ಮವು ಅಪ್ರತ್ಯಕ್ಷವಾಗಲಾರದು. ಅಥವಾ ಅದು ಸೊರಗಿ ಹೋಗದು. ಅದು ಆರೋಗ್ಯಪೂರ್ಣವೂ ಶಕ್ತಿಯುತವೂ ಆಗಿದ್ದರೆ ಚೆನ್ನಾಗಿತ್ತು. ಇನ್ನೂ ಕ್ರಮಕೈಗೊಳ್ಳಲು ಬಹಳ ತಡವಾಗಿಲ್ಲ ಎಂದು ಮಾತ್ರ ನಾವು ಪ್ರತೀಕ್ಷಿಸಬಹುದು... ಮುಸ್ಲಿಮರು ನಮ್ಮ ಪಾಶ್ಚಿಮಾತ್ಯ ಪರಂಪರೆಗಳನ್ನೂ ಸಂಸ್ಥೆಗಳನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಲು ಪಶ್ಚಿಮದಲ್ಲಿರುವ ನಾವು ನಮ್ಮ ಹಳೆಯ ಪೂರ್ವಗ್ರಹಗಳನ್ನು ಬಿಟ್ಟು ಬಿಡಬೇಕಾಗಿದೆ. ಪ್ರಾಯಶಃ ಮೊದಲನೆಯದಾಗಿ ನಾವು ಮುಹಮ್ಮದರ ಬಗ್ಗೆ ನಮ್ಮ ನಿಲುವನ್ನು ಸರಿಪಡಿಸಬೇಕು. ಮುಹಮ್ಮದರು ವಿವಿಧ ಭಾವೋದ್ವೇಗಗಳನ್ನು ಹೊಂದಿದ ವ್ಯಕ್ತಿಯಾಗಿದ್ದರು. ಅವರು ಕೆಲವು ಸಾರಿ ಮಾಡಿದ ಕೆಲಸಗಳನ್ನು ಅಂಗೀಕರಿಸಲು ನಮಗೆ ಕಷ್ಟಕರವಾಗಿದೆ. ಆದರೆ ಅವರು ಅತ್ಯಂತ ಬುದ್ಧಿಶಾಲಿಯಾಗಿದ್ದರು. ಅವರು ಒಂದು ಧರ್ಮವನ್ನು ಮತ್ತು ಸಂಸ್ಕೃತಿಯ ಪರಂಪರೆಯನ್ನು ಸ್ಥಾಪಿಸಿದರು. ಪಾಶ್ಚಿಮಾತ್ಯ ಐತಿಹ್ಯಗಳು ಅದರ ಬಗ್ಗೆ ಸೂಚಿಸಿದರೂ ಅದು ಖಡ್ಗದ ಮೇಲೆ ಆಧರಿಸಿರಲಿಲ್ಲ. ಅವರು ಸ್ಥಾಪಿಸಿದ ಧರ್ಮದ ಹೆಸರು 'ಇಸ್ಲಾಮ್' ಶಾಂತಿ ಮತ್ತು ಸೌಹಾರ್ದ ಸ್ಥಾಪನೆಯನ್ನು ಸೂಚಿಸುತ್ತದೆ."

**(Armstrong, Karen: A Biography of the Prophet. Victor Gollancz, 1996, pp. 164-166)**

*~*~*~*~*~*

### ಎಲನ್ ಬ್ಲಾಕ್‌ವುಡ್

"ಮುಹಮ್ಮದರು ಇಸ್ಲಾಮ್ ಧರ್ಮವನ್ನು ಸ್ಥಾಪಿಸಿದರು. ಅವರು ಅರಬ್ ದೇಶದ ಮಕ್ಕ ನಗರದಲ್ಲಿ ಜನಿಸಿದರು... ಅರಬ್ ದೇಶವು ಬಂಜರು, ಒರಟು ಮತ್ತು ಕ್ರೂರ ದೇಶವಾಗಿತ್ತು. ತನ್ನ ಹೊಸಧರ್ಮವನ್ನು ಪ್ರಚಾರಗೊಳಿಸಲು ಮುಹಮ್ಮದರಿಗೆ ಧೈರ್ಯವು ಆವಶ್ಯಕವಾಗಿತ್ತು. ಅವರು ಮತ್ತು ಅವರ ಆರಂಭಕಾಲದ ಅನುಯಾಯಿಗಳಿಗೆ ಆಗಾಗ ಕಲ್ಲೆಸೆಯಲಾಯಿತು. ಅವರು ಹೊಡೆತಗಳಿಗೆ ತುತ್ತಾದರು. ಕ್ರಿ.ಶ. 622ರಲ್ಲಿ ಮುಹಮ್ಮದ್ ಮಕ್ಕದಿಂದ ಮದೀನಕ್ಕೆ ಪಲಾಯನ ಮಾಡಬೇಕಾಯಿತು. ಅದನ್ನು ಹಿಜ್‌ರ ಎನ್ನುತ್ತಾರೆ. ಅದು ಇಸ್ಲಾಮೀ ಕಾಲಗಣನೆಯ ಪ್ರಾರಂಭವನ್ನು ಸೂಚಿಸುತ್ತದೆ. ಕ್ರಮೇಣ ಮುಹಮ್ಮದರ ಸಂದೇಶವು ಅಂಗೀಕರಿಸಲ್ಪಟ್ಟಿತು....

"ಮುಹಮ್ಮದರು ಮೃತರಾಗುವುದರೊಳಗೆ ಅರಬ್ ದೇಶದ ಗೋತ್ರಗಳು ಇಸ್ಲಾಮ್ ಎಂಬ ಹೊಸ ಧರ್ಮದಲ್ಲಿ ಐಕ್ಯತೆಯನ್ನು ಪಡೆದಿದ್ದುವು. ಅನಂತರದ ಶತಮಾನಗಳಲ್ಲಿ ಇಸ್ಲಾಮ್ ಧರ್ಮವು ಮತ್ತು ಅದರೊಂದಿಗೆ ಬೆಳೆದ ನಾಗರಿಕತೆಯು ಕಲೆ ಮತ್ತು ವಿಜ್ಞಾನದಲ್ಲಿ ಸಮೃದ್ಧಿಯನ್ನು ಗಳಿಸಿ ಸ್ಪೈನ್ ಮತ್ತು ಉತ್ತರ ಆಫ್ರಿಕಾದಿಂದ ಮಧ್ಯಪೂರ್ವ ದೇಶಗಳ ಮೂಲಕ ಭಾರತದ ತನಕ ಮತ್ತು ಪೂರ್ವ ಯುರೋಪಿನ ಬಹುದೊಡ್ಡ ಒಂದು ಭಾಗಕ್ಕೆ ಹಬ್ಬಿತು."

**(Blackwood, Alan: A to Z of Famous People, London, U.K., 1982, p. 165)**

*~*~*~*~*~*

### ಮೈಕಲ್ ಎಚ್. ಹಾರ್ಟ್

"ವಿಶ್ವದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ನಾನು ಮುಹಮ್ಮದರಿಗೆ ಪ್ರಥಮ ಸ್ಥಾನ ನೀಡಿ ಆಯ್ಕೆ ಮಾಡಿದುದು ಕೆಲವು ವಾಚಕರನ್ನು ಆಶ್ಚರ್ಯ ಚಕಿತರನ್ನಾಗಿ ಮಾಡಬಹುದು ಮತ್ತು ಬೇರೆ ಕೆಲವರು ಅದನ್ನು ಪ್ರಶ್ನಿಸಬಹುದು. ಆದರೆ ಧಾರ್ಮಿಕ ಮತ್ತು ಲೌಕಿಕ ಹಂತದಲ್ಲಿ ಅತ್ಯುಚ್ಛ ರೀತಿಯಲ್ಲಿ ಜಯಶಾಲಿ ಆದ ಮಹಾನುಭಾವರು ಅವರೊಬ್ಬರೇ.... ಕ್ರೈಸ್ತ ಧರ್ಮದ ಮೇಲೆ ಯೇಸು ಕ್ರಿಸ್ತರು ಮತ್ತು ಸಂತ ಪೌಲರು ಒಗ್ಗೂಡಿ ಬೀರಿದ ಪ್ರಭಾವಕ್ಕಿಂತ ಇಸ್ಲಾಮಿನ ಮೇಲೆ ಮುಹಮ್ಮದರು ಬೀರಿದ ಪ್ರಭಾವ ಹೆಚ್ಚಿನದಾಗಿತ್ತು.... ಅದ್ವಿತೀಯವಾದ ಧಾರ್ಮಿಕ ಮತ್ತು ಲೌಕಿಕ ಪ್ರಭಾವವನ್ನು ಬೀರಿದ ಮುಹಮ್ಮದರು ಮಾನವ ಚರಿತ್ರೆಯಲ್ಲಿ ಅತ್ಯಂತ ಪ್ರಭಾವಶಾಲಿ ಏಕಮಾತ್ರ ವ್ಯಕ್ತಿ ಎಂದು ಆಯ್ಕೆಮಾಡಲು ಅರ್ಹತೆಯನ್ನು ನನ್ನ ದೃಷ್ಟಿಯಲ್ಲಿ ಪಡೆದರು."

**(Hart, Michael H.: The 100: A Ranking of the Most Influential Persons in History. Carol Publishing Group, 1978, pp. 3-10)**

*~*~*~*~*~*

### ಡಬ್ಲ್ಯೂ. ಮೋಂಟ್ಗೊಮೆರಿ ವಾಟ್ಟ್

"ಮುಹಮ್ಮದರ ಅತ್ಯಂತ ಮಹತ್ತರ ಸಾಧನೆಗಳಲ್ಲಿ ಒಂದು, ಅವರು ಮಕ್ಕದ ಗಣ್ಯರೊಂದಿಗೆ ಸ್ಥಾಪಿಸಿದ ನೈಜ ರಾಜಿಸಂಧಾನವಾಗಿದೆ. ಆ ಜನರು ಕೆಲವು ತಿಂಗಳ ಹಿಂದೆ ಅವರ ಕಠಿಣ ಶತ್ರುಗಳಾಗಿದ್ದರು... ಮಕ್ಕದ ಮತ್ತು ಮದೀನದ ಕಾಲಘಟ್ಟದಲ್ಲಿ ಮುಹಮ್ಮದರ ಸಮಕಾಲೀನರು ಅವರನ್ನು ಒಳ್ಳೆಯ ಮತ್ತು ನೀತಿವಂತ ಮನುಷ್ಯನೆಂದು ಗಣಿಸಿದ್ದರು. ಚರಿತ್ರೆಯ ದೃಷ್ಟಿಯಲ್ಲಿ ಅವರು ನೈತಿಕ ಮತ್ತು ಸಾಮಾಜಿಕ ಸುಧಾರಕರಾಗಿದ್ದರು.. ಮುಹಮ್ಮದರ ಮತ್ತು ಇಸ್ಲಾಮಿನ ಆದ್ಯಕಾಲದ ಚರಿತ್ರೆಯ ಅಧ್ಯಯನವನ್ನು ಹೆಚ್ಚು ಹೆಚ್ಚಾಗಿ ಮಾಡುವಾಗ ಅವರ ಸಾಧನೆಗಳ ವಿಶಾಲತೆಯನ್ನು ಕಂಡು ಅಚ್ಚರಿಗೊಳ್ಳುತ್ತೇವೆ. ಅವರಿಗೆ ಸಾಧನೆಗೈಯುವಂಥ ಸಂದರ್ಭಗಳು ಬೇರೆ ಕೆಲವರಿಗೆ ಮಾತ್ರವೇ ದೊರೆತಿದ್ದುವು. ಆದರೆ ಅವರು ಕಾಲಕ್ಕೆ ಅನುಸಾರವಾಗಿ ವರ್ತಿಸಿದರು. ಅವರು ದಿವ್ಯಜ್ಞಾನಿಯೂ ರಾಜಕೀಯ ಮುತ್ಸದ್ಧಿಯೂ ಆಡಳಿತಾಧಿಕಾರಿಯೂ ಆಗುವ ಭಾಗ್ಯಗಳಿಸಿದ್ದರು. ಅವುಗಳ ಹಿನ್ನೆಲೆಯಲ್ಲಿ ದೇವನ ಬಗ್ಗೆ ಭರವಸೆ ಮತ್ತು ದೇವನೇ ತನ್ನನ್ನು ಕಳುಹಿಸಿದ್ದಾನೆಂಬ ನಂಬಿಕೆ ಇಲ್ಲದಿರುತ್ತಿದ್ದರೆ ಮಾನವ ಚರಿತ್ರೆಯಲ್ಲಿ ಒಂದು ಮುಖ್ಯ ಅಧ್ಯಾಯವು ಬರೆಯದೆ ಬಿಟ್ಟು ಹೋಗುತ್ತಿತ್ತು."

**(Watt, W. Montgomery: Muhammad: Prophet and Statesman. Oxford University Press, 1974, pp. 210-237)**

*~*~*~*~*~*

## ಜೇಮ್ಸ್ ಎ. ಮಿಚೆನರ್

"ಬಾಲ್ಯದಲ್ಲಿಯೇ ಅನಾಥರಾದ ಅವರು ಯಾವಾಗಲೂ ಬಡವರ, ನಿರ್ಗತಿಕರ, ವಿಧವೆಯರ, ಅನಾಥರ, ಗುಲಾಮರ ಮತ್ತು ತುಳಿತಕ್ಕೆ ಗುರಿಯಾದವರ ಹಿತೈಷಿಯಾಗಿದ್ದರು.... ಅವರು ಮರುಭೂಮಿಯ ಆಚಾರಗಳಲ್ಲಿ ಬಂಧಿತರಾಗಿದ್ದ ಮಹಿಳೆಯರನ್ನು ಮೇಲಕ್ಕೆ ಎತ್ತಿದರು. ಅವರು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದರು.... ಕುಡುಕರಾಗಿದ್ದ ಜನರಿಗೆ ಮದ್ಯವನ್ನು ನಿಷಿದ್ಧಗೊಳಿಸಿದರು... ಗುಲಾಮರನ್ನು ವಿಮೋಚಿಸಬೇಕೆಂದು ಅವರು ಬೋಧಿಸಿದರು. ತಂದೆಯು ತನಗೆ ಬೇಡವಾಗಿರುವ ತನ್ನ ಹೆಣ್ಣು ಶಿಶುವನ್ನು ಕೊಲ್ಲಬಾರದೆಂದು ಆಜ್ಞಾಪಿಸಿದರು. ಸಮಾಜದಿಂದ ದೌರ್ಜನ್ಯಕ್ಕೆ ಗುರಿಯಾದವರಿಗೆ ವಾರಸು ಹಕ್ಕು ನೀಡಲಾಯಿತು. ಯುದ್ಧಕ್ಕಿಂತ ಶಾಂತಿ ಉತ್ತಮವೆಂದು ಸಾರಲಾಯಿತು. ನ್ಯಾಯದಾನಕ್ಕೆ ಆದ್ಯತೆ ನೀಡಲಾಯಿತು... ಇಸ್ಲಾಮಿನ ಹಾಗೆ ಬೇರೆ ಯಾವ ಧರ್ಮವೂ ಇಷ್ಟು ವೇಗದಿಂದ ಹರಡಲಿಲ್ಲ... ಈ ಧರ್ಮದ ಹಬ್ಬುವಿಕೆ ಖಡ್ಗದ ಮೂಲಕ ಸಾಧ್ಯವಾಯಿತೆಂದು ಪಾಶ್ಚಿಮಾತ್ಯರಲ್ಲಿ ಬಹುತೇಕ ಜನರು ನಂಬುತ್ತಾರೆ. ಆದರೆ ಆಧುನಿಕ ವಿದ್ವಾಂಸರು ಈ ನಿಲುವನ್ನು ಅಂಗೀಕರಿಸುವುದಿಲ್ಲ. ಖುರ್‌ಆನ್ ಮನಸ್ಸಾಕ್ಷಿಯ ಸ್ವಾತಂತ್ರ್ಯದ ಕುರಿತು ಸ್ಪಷ್ಟವಾಗಿ ಹೇಳಿದೆ... ಅನೇಕ ಪಾಶ್ಚಿಮಾತ್ಯರು ತಮ್ಮ ಚರಿತ್ರೆಯ ಪುಸ್ತಕಗಳಿಂದ ಪ್ರಭಾವಿತರಾಗಿ ಮುಸ್ಲಿಮರು ಬರ್ಬರ ಅವಿಶ್ವಾಸಿಗಳೆಂದು ನಂಬುತ್ತಿರುವುದರಿಂದ ಮುಸ್ಲಿಮ್ ವಿದ್ವಾಂಸರಿಂದ ತಮ್ಮ ಬೌದ್ಧಿಕ ಜೀವಿತವು ವಿಜ್ಞಾನ, ವೈದ್ಯಕೀಯ, ಗಣಿತ, ಭೂಗೋಳ ಶಾಸ್ತ್ರ ಮತ್ತು ತತ್ವಶಾಸ್ತ್ರಗಳ ಕ್ಷೇತ್ರದಲ್ಲಿ ಹೇಗೆ ಆಳವಾಗಿ ಪ್ರಭಾವಕ್ಕೊಳಗಾಗಿದೆ ಎಂದು ಮನವರಿಕೆ ಮಾಡಿಕೊಳ್ಳಲು ಅಸಮರ್ಥರಾಗಿದ್ದಾರೆ.... ನಾನು ಇಸ್ಲಾಮ್ ಧರ್ಮದ ಬಗ್ಗೆ ಅನೇಕ ವರ್ಷಗಳಿಂದ ಅಧ್ಯಯನ ಮಾಡುತ್ತಿದ್ದೇನೆ. ಈ ಧರ್ಮ ಮತ್ತು ಕ್ರೈಸ್ತ ಧರ್ಮ ಏಕೆ ಸಹಕರಿಸಲಾರವೆಂಬುದಕ್ಕೆ ಯಾವುದೇ ಸಮರ್ಪಕ ಕಾರಣವು ನನಗೆ ಕಾಣಿಸಿಲ್ಲ."

**(Michener, James A.: "Islam the Misunderstood Religion", Readers Digest. May 1955 pp. 77-86)**

*~*~*~*~*

## ರೋಬರ್ಟ್ ಎಲ್. ಗುಲಿಕ್ ಜೂನಿಯರ್

"ಮುಹಮ್ಮದರ ಜೀವನ ಚರಿತ್ರೆಯ ನಂತರ ಅತ್ಯಂತ ಆಸಕ್ತಿಯನ್ನು ಕೆರಳಿಸುವ ವಿಷಯ ಇಸ್ಲಾಮ್ ವಿದ್ಯಾಭ್ಯಾಸಕ್ಕೆ ನೀಡಿದ ಕೊಡುಗೆ ಮತ್ತು ಅದು ಸಂಸ್ಕೃತಿಗೆ ವಿವಿಧ ಆಯಾಮಗಳಲ್ಲಿ ನೀಡಿದ ಕೊಡುಗೆಗೆ ಸಂಬಂಧಿಸಿದೆ: ಆರ್ಥಿಕ ಸಿದ್ಧಾಂತ ಮತ್ತು ಅದರ ಪ್ರಯೋಗ, ಸಂಗೀತ, ಸಾಹಿತ್ಯ, ವಾಸ್ತುಶಿಲ್ಪ, ಶಿಲ್ಪಕಲೆ, ಗಣಿತ, ರಸಾಯನಶಾಸ್ತ್ರ, ಶರೀರ ವಿಜ್ಞಾನ, ವೈದ್ಯಶಾಸ್ತ್ರ.... ಇತ್ಯಾದಿ.

"ಪಾಶ್ಚಿಮಾತ್ಯರು ಇಸ್ಲಾಮಿನ ಹಬ್ಬುವಿಕೆಗೆ ಬಲಪ್ರಯೋಗವೇ ಕಾರಣವೆಂದು ಹೇಳುತ್ತಾರೆ. ಜಿಹಾದ್ ಅಥವಾ 'ಪವಿತ್ರ ಯುದ್ಧ'ದ ಬಗ್ಗೆ ಅವರ ನಿಲುವು ತಿರುಚಲ್ಪಟ್ಟದ್ದಾಗಿದೆ. ಅವರು ಮುಸ್ಲಿಮ್ ಯೋಧನನ್ನು ಒಂದು ಕೈಯಲ್ಲಿ ಖುರ್‌ಆನನ್ನೂ ಇನ್ನೊಂದು ಕೈಯಲ್ಲಿ ಖಡ್ಗವನ್ನೂ ಹಿಡಿದುಕೊಂಡಿರುವುದಾಗಿ ಚಿತ್ರಿಸುತ್ತಾರೆ. ಇದು ತಪ್ಪಾಗಿ ಗುರುತಿಸಲ್ಪಟ್ಟ ನಿಲುವಾಗಿದೆ. ವಾಸ್ತವಿಕವಾಗಿ ಮುಸ್ಲಿಮರಲ್ಲ, ಕ್ರೈಸ್ತ ಧರ್ಮಾನುಯಾಯಿಗಳು ಈ ವಿಷಯದಲ್ಲಿ ಮುಖ್ಯ ಅಪರಾಧಿಗಳಾಗಿದ್ದಾರೆ. ಸ್ಪೈನ್‌ನಲ್ಲಿ ಇನ್‌ಕ್ವಿಝಿಷನ್ ಕಾಲಘಟ್ಟದಲ್ಲಿ ಇಪ್ಪತ್ತು ಲಕ್ಷ ಮುಸ್ಲಿಮರು ಒಂದು ಕ್ರೈಸ್ತ ಪಂಥವನ್ನು ಸೇರದಿದ್ದರೆ ಕೊಲ್ಲಲ್ಪಡುವರೆಂದು ಬೆದರಿಕೆ ಹಾಕಲಾಗಿತ್ತು.

"ಮುಹಮ್ಮದರು ಮಾಡಿದ ಯುದ್ಧಗಳು ಆತ್ಮರಕ್ಷಣೆಗಾಗಿತ್ತು ಎಂದು ಸ್ಪಷ್ಟವಾಗಿ ಹೇಳಬಹುದು. ಆ ಯುದ್ಧಗಳನ್ನು ಮಾಡದಿರುತ್ತಿದ್ದರೆ ಮುಸ್ಲಿಮರೆಲ್ಲರೂ ನಾಶವಾಗುತ್ತಿದ್ದರು – ಹಾಗೆ ಆಗಿದ್ದರೆ ಮುಂದಿನ ನಾಗರಿಕತೆಗೆ ಎಂತಹ ದಾರುಣ ಪರಿಣಾಮ ಉಂಟಾಗುತ್ತಿತ್ತೆಂದು ಊಹಿಸಬಹುದು... ಇಸ್ಲಾಮ್ ಬಗ್ಗೆ ಬಲಯುತವಾಗಿ ಹೀಗೆ ಸಾಬೀತುಮಾಡಬಹುದು: ಯಾವ ಸ್ಥಳಗಳಲ್ಲೆಲ್ಲಾ ಇಸ್ಲಾಮ್ ಪ್ರವೇಶಿಸಿತೋ ಅಲ್ಲಿ ಅದು ಪ್ರಗತಿಹೊಂದಿದ ಮತ್ತು ಸಂಪನ್ನ ನಾಗರಿಕತೆಯನ್ನು ಸ್ಥಾಪಿಸಿತು. ಪರ್ಶಿಯನ್ ಜನರಲ್ಲಿ ಕೆಲವರು ಇಸ್ಲಾಮ್ ಅವರ ದೇಶವನ್ನು ಧ್ವಂಸಗೊಳಿಸಿತೆಂದು ವಾದಿಸುತ್ತಾರೆ. ಆದರೆ ಚರಿತ್ರೆಯು ಈ ಜನರ ಅನ್ಯಾಕ್ರಮೇಣ ಶೀಲ ಸ್ವದೇಶಪ್ರೇಮ ಭರಿತ, ಪೂರ್ವಗ್ರಹಪೀಡಿತ ಹೇಳಿಕೆಯನ್ನು ಅನುಮೋದಿಸುವುದಿಲ್ಲ. ಇಸ್ಲಾಮಿನ ಬೆಳಕು ಅತ್ಯಂತ ಹೆಚ್ಚು ಹೊಳಪಿನಿಂದ ಪ್ರಕಾಶಿಸುತ್ತಾ ಇದ್ದಾಗ ಇರಾನ್ ಕಲೆ ಮತ್ತು ವಿಜ್ಞಾನದಲ್ಲಿ ಉತ್ತುಂಗ ಶಿಖರವನ್ನು ತಲಪಿತು. ಆಗ ಖಗೋಳಶಾಸ್ತ್ರ, ವಾಸ್ತುಶಿಲ್ಪ, ನೇಯ್ಗೆ, ಬಣ್ಣ ಹಚ್ಚುವಿಕೆ ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ಸಾಹಿತ್ಯದಲ್ಲಿ ಅದು ಅತ್ಯುನ್ನತ ಸಾಧನೆಗಳನ್ನು ಮಾಡಿತು. ಹಾಫಿಝ್, ಸಅದಿ, ಜಲಾಲುದ್ದೀನ್ ರೂಮಿ ಮೊದಲಾದ ಸಾಹಿತ್ಯ ರತ್ನಗಳು ಆದರಣೀಯ ಮಹಾಶಯರಾದ ಮುಹಮ್ಮದರ ಭವ್ಯ ಉಪದೇಶಗಳಿಂದ ಲಾಭಪಡೆದರು. ಮುಹಮ್ಮದರು ಮಾನವರಿಗೆ ಚೆನ್ನಾಗಿ ವಿದ್ಯೆಯನ್ನು ನೀಡಿದ ಮಹಾನುಭಾವರಲ್ಲಿ ಒಬ್ಬರಾಗಿರುವರು. ಮುಹಮ್ಮದರು ನಿಜವಾಗಿಯೂ ಒಬ್ಬ ಬೋಧಕರಾಗಿದ್ದರು. ಅವರು ಮಾನವರನ್ನು ಹೆಚ್ಚಿನ ಸ್ವಾತಂತ್ರ್ಯಕ್ಕೆ ಮತ್ತು ಸುಖಸಂತೋಷಕ್ಕೆ ಒಯ್ಯುವ ದಾರಿ ತೋರಿಸುವ ಮಾರ್ಗ ಸೂಚಿಯಾಗಿದ್ದರು."

**(Gulick Jr., Robert L.: Muhammad the Educator, Institute of Islamic Culture, Lahore, Pakistan, 1975, pp. 2, 47, 103-104)**

## ರೂಥ್ ಕ್ರಾನ್‌ಸ್ಟನ್

"ಬಾಲ್ಯದಲ್ಲಿಯೇ ಅನಾಥರಾದ ಮುಹಮ್ಮದರನ್ನು ಅವರ ಚಿಕ್ಕಪ್ಪ ಪೋಷಿಸಿದರು. ಅವರು ಸಾತ್ವಿಕ ಗೌರವಾರ್ಹ ಸ್ವಭಾವಗುಣಗಳನ್ನು ಯೌವ್ವನ ಕಾಲದಲ್ಲಿ ಪ್ರದರ್ಶಿಸಿದರು. ಸಜ್ಜನರೂ ಸೌಮ್ಯರೂ ತನ್ನ ಕರ್ತವ್ಯಗಳಿಗೆ ನಿಷ್ಠರೂ ಆಗಿದ್ದ ಅವರನ್ನು ಅವರ ಸಂಬಂಧಿಕರೂ ನೆರೆಹೊರೆಯವರೂ ಪ್ರೀತಿಸುತ್ತಿದ್ದರು. ಅವರಿಗೆ ಅನಂತರ ಅಲ್ ಅಮೀನ್ – ಅತ್ಯಂತ ಪ್ರಾಮಾಣಿಕ ಎಂದು ಮಕ್ಕದ ಜನರು ಪ್ರಶಸ್ತಿ ನೀಡಿದರು.

"ಮುಹಮ್ಮದರ ಉಪದೇಶಗಳು ಪರಲೋಕ ಜೀವಿತದ ಬಗ್ಗೆಯಾಗಲೀ ಬೇರೆ ಯಾವುದೇ ವಿಷಯಕ್ಕೆ ಸಂಬಂಧಿಸಿಯಾಗಲೀ ತರ್ಕರಹಿತವಾದ ಹೇರಿಕೆಯ ಸ್ವಭಾವದ್ದಾಗಿರಲಿಲ್ಲ. ಖುರ್‌ಆನ್‌ನಲ್ಲಿ ಇಂತಹ ಉಪದೇಶಗಳಿಲ್ಲದಿರುವುದು ಗಮನಾರ್ಹವಾಗಿದೆ. ಅದು ಮಾನವರ ಆತ್ಮಸಾಕ್ಷಿಯನ್ನು ಮತ್ತು ಅವರ ವಿವೇಕವನ್ನು ಸಂಬೋಧಿಸುತ್ತದೆ. ಅದು ಮಾನವರು ದೇವನೊಂದಿಗೆ ನೇರ ಸಂಪರ್ಕ ಸ್ಥಾಪಿಸಲು ಆಗ್ರಹಪಡಿಸುತ್ತದೆ. ದೇವನು ಮಾನವರೊಂದಿಗೆ ನೇರ ಸಂಪರ್ಕ ಸ್ಥಾಪಿಸುತ್ತಾನೆ; ಮಧ್ಯವರ್ತಿಗಳ ಆವಶ್ಯಕತೆ ಇರುವುದಿಲ್ಲ.

"ಮುಹಮ್ಮದರು ಎಂದೂ ಯುದ್ಧವನ್ನೂ ರಕ್ತಪಾತವನ್ನೂ ಪ್ರಚೋದಿಸಲಿಲ್ಲ. ಅವರು ಮಾಡಿದ ಎಲ್ಲಾ ಯುದ್ಧಗಳು ಶತ್ರುಗಳನ್ನು ತಡೆಗಟ್ಟಲಿಕ್ಕಾಗಿದ್ದವು. ಅವರು ಜೀವರಕ್ಷಣೆಗಾಗಿ ಹೋರಾಡಿದರು. ಅವರು ಅವರ ಕಾಲದ ಆಯುಧಗಳನ್ನು ಉಪಯೋಗಿಸಿ ಅವರ ಕಾಲದ ಸಂಪ್ರದಾಯಗಳ ಪ್ರಕಾರ ಹೋರಾಡಿದರು.

"ಧರ್ಮದ ಸ್ವಾತಂತ್ರ್ಯ ಮತ್ತು 'ಭೀತಿಯಿಂದ ಸ್ವಾತಂತ್ರ್ಯ'ವನ್ನು ಘೋಷಿಸಿದ ಎಟ್ಲಾಂಟಿಕ್ ಚಾರ್ಟರ್ ಜಾರಿಗೊಳ್ಳುವುದಕ್ಕೆ ಹದಿಮೂರು ನೂರು ವರ್ಷಗಳಿಗೆ ಮೊದಲು ಮುಹಮ್ಮದರು ತಾನು ಜಯಿಸಿದ ಯಹೂದಿ ಮತ್ತು ಕ್ರೈಸ್ತ ಗೋತ್ರಗಳೊಂದಿಗೆ ಒಡಂಬಡಿಕೆ ಮಾಡಿ ಅವರಿಗೆ ಆರಾಧನೆಯ ಸ್ವಾತಂತ್ರ್ಯ ಮತ್ತು ಸ್ಥಳೀಯ ಸ್ವಯಂ ಆಡಳಿತೆಯ ಹಕ್ಕುಗಳನ್ನು ನೀಡಿದರು. ಮುಸ್ಲಿಮರು ಸ್ವಾಧೀನಪಡಿಸಿದ ಅನೇಕ ದೇಶಗಳಲ್ಲಿ ಅಲ್ಲಿನ ಮುಸ್ಲಿಮೇತರ ಪ್ರಜೆಗಳೊಂದಿಗೆ ಉತ್ತಮ ಮತ್ತು ನ್ಯಾಯಬದ್ಧ ರೀತಿಯಲ್ಲಿ ವರ್ತಿಸಲಾಯಿತು ಮತ್ತು ಮತಪರಿವರ್ತನೆಗೆ ಅವರು ಪ್ರಯತ್ನಿಸಲಿಲ್ಲ.

"ಮುಹಮ್ಮದರು ದಯಾಳುವೂ ವಿನೀತರೂ ಹೆಚ್ಚು ಮಾತನಾಡದ ಚಿಂತಕರೂ ಅನ್ಯರ ಮಾತುಗಳನ್ನು ಗಮನಿಸುವವರೂ ಉತ್ತಮ ಹಾಸ್ಯಪ್ರಿಯರೂ ಆಗಿದ್ದರು. ಅವರ ಜನತೆ ಅವರನ್ನು ಅತಿಶಯವಾಗಿ ಗೌರವಿಸಿದುದರ ಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ. ಎಲ್ಲಾ ಧಾರ್ಮಿಕ ನಾಯಕರ ಹಾಗೆ ಮುಹಮ್ಮದರಿಗೆ ಕೆಲವು ಕಷ್ಟಕರವಾದ ವಿಷಯಗಳಿದ್ದುವು – ಅವರ ಶಿಷ್ಯರ ಮಧ್ಯೆ ಗುಂಪುಗಾರಿಕೆ, ಅಸೂಯೆ, ರೋಗಗಳು, ದೂರುಗಳು, ಒಂದು ದೇಶದಲ್ಲಿ ಒಂದು ಸುವ್ಯವಸ್ಥಿತ ಸಮಾಜವನ್ನು ಮೊದಲ ಬಾರಿಗೆ ರೂಪಿಸುವಾಗ ಉಂಟಾಗುವ ಕಷ್ಟಗಳು. ಮುಹಮ್ಮದರು ಎಲ್ಲಾ ಸಂಕಷ್ಟಗಳನ್ನು ಎದುರಿಸಿ ತನ್ನ ಜನತೆಯನ್ನು ಮುಂದಕ್ಕೆ ಸಾಗಿಸಿದರು – ತನ್ನ ವ್ಯಕ್ತಿತ್ವದ ಬಲಯುತವೂ ಎಂದೂ ಬಳಲಿ ಹೋಗದ ಧೈರ್ಯ ಮತ್ತು ನಿಷ್ಠೆಯ ಮೂಲಕ."

**(Cranston, Ruth: World Faith, Harper & Brothers, New York, U.S.A. 1949, pp. 138-39, 149, 157 and 163)**

*~*~*~*~*~*

## ತಾರಾ ಚಂದ್

"ಅಲ್ ಅಮೀನ್ (ಅತ್ಯಂತ ಪ್ರಾಮಾಣಿಕ) ಎಂದು ಹೆಸರು ಗಳಿಸಿದ ಮುಹಮ್ಮದರ ಕುರಿತು ಮುಸ್ಲಿಮೇತರರು ಚೆನ್ನಾಗಿ ತಿಳಿದುಕೊಳ್ಳುವುದು ಆವಶ್ಯಕವಾಗಿದೆ. ಅವರು ಬಡವರ, ತುಳಿತಕ್ಕೆ ಗುರಿಯಾದವರ ಮತ್ತು ಅನಾಥರ ಸ್ನೇಹಿತರಾಗಿದ್ದರು. ಅವರು ಸುಖಭೋಗಗಳನ್ನು ತ್ಯಜಿಸಿ, ತನ್ನ ಸ್ವಂತ ಕೈಗಳಿಂದ ತನ್ನ ಬಟ್ಟೆಗಳಿಗೆ ತೇಪೆ ಹಚ್ಚಿದರು. ಪಾದರಕ್ಷೆಗಳನ್ನು ದುರಸ್ತಿಗೊಳಿಸಿದರು ಮತ್ತು ಮಸ್‌ಜಿದ್ ನಿರ್ಮಾಣದಲ್ಲಿ ಶ್ರಮವಹಿಸಿದರು. ಅವರು ಖರ್ಜೂರ ತಿಂದು ಮತ್ತು ನೀರು ಕುಡಿದು ಜೀವಿಸಿದರು. ಅವರು ಪ್ರಯಾಣಮಾಡುತ್ತಿದ್ದಾಗ ಅದನ್ನು ತನ್ನ ಸೇವಕನೊಂದಿಗೆ ಹಂಚಿ ತಿಂದರು. ಅವರು ಶತ್ರುಗಳನ್ನು ಕ್ಷಮಿಸಿದರು. ಅವರು ಗುಲಾಮರಿಗೆ ದಯೆದೋರಿದರು. ಅವರು ಧೈರ್ಯಶಾಲಿಯೂ ಯಾರಿಗೂ ಬಗ್ಗದವರೂ ಆಗಿದ್ದರು. ಹೀಗಿದ್ದರೂ ಅವರು ಸೌಜನ್ಯಶೀಲರೂ ಪ್ರೀತಿದೋರುವವರೂ ಆಗಿದ್ದರು. ಅವರು ಇಸ್ಲಾಮನ್ನು ಖಡ್ಗದಿಂದ ಗಳಿಸಿದ ಜಯಗಳ ಮೂಲಕ ಹಬ್ಬಿಸಲಿಲ್ಲ ಎಂದು ನಾವು ಮನವರಿಕೆ ಮಾಡಬೇಕು. ಅವರು ತನ್ನ ವ್ಯಕ್ತಿತ್ವದ ಇಂದ್ರಜಾಲ ಮತ್ತು ಆಶ್ಚರ್ಯಕರವಾದ ವಾದಸರಣಿಯಿಂದ ಅದನ್ನು ಸಾಧಿಸಿದರು.

"ಇಸ್ಲಾಮ್ ಧರ್ಮವು ವಿನಯ ಮತ್ತು ಆತ್ಮಾಭಿಮಾನವನ್ನು ಆಶ್ಚರ್ಯಕರವಾದ ರೀತಿಯಲ್ಲಿ ಒಗ್ಗೂಡಿಸಿದೆ ಎಂಬುದನ್ನು ಸಹ ಅರಿತುಕೊಳ್ಳುವುದು ಆವಶ್ಯಕವಾಗಿದೆ. ಅದು ದೇವನ ಮಹೋನ್ನತ ಸ್ಥಾನವನ್ನು ಕೊಂಡಾಡಿ ಅವನೆದುರಿಗೆ ಮನುಷ್ಯನು ತಾನು ಏನೂ

ಅಲ್ಲವೆಂದು ಪರಿಗಣಿಸಬೇಕೆಂದೂ ಆದರೆ ಮನುಷ್ಯರ ಮಧ್ಯೆ ಯಾವುದೇ ವ್ಯತ್ಯಾಸವಿಲ್ಲದೆ ಸಂಪೂರ್ಣ ಸಮಾನತೆ ಇದೆಯೆಂದೂ ಪ್ರತಿಯೊಬ್ಬನು ಅವನ ಹುಟ್ಟು, ಸ್ಥಾನಮಾನ ಮತ್ತು ಐಶ್ವರ್ಯವನ್ನು ಗಣಿಸದೆ ಇನ್ನೊಬ್ಬನಿಗೆ ಸಮಾನನೆಂದೂ ಅದು ಘೋಷಿಸಿತು. ಇಸ್ಲಾಮ್ ನ್ಯಾಯ, ಬುದ್ಧಿಶಕ್ತಿ, ಧೈರ್ಯ ಮತ್ತು ಮಧ್ಯಮಾರ್ಗವನ್ನು ಅವಲಂಬಿಸಲು ಆಗ್ರಹಪಡಿಸುತ್ತದೆ. ಅದರ ತತ್ವಗಳನ್ನು ಸರಿಯಾಗಿ ವ್ಯಾಖ್ಯಾನಿಸುವುದಾದರೆ, ಅದು ಎಲ್ಲಾ ಧರ್ಮಗಳ ಪ್ರವಾದಿಗಳನ್ನು ಗೌರವಿಸುತ್ತದೆ ಮತ್ತು ದೇವಾರಾಧನೆಯನ್ನು ಉಪದೇಶಿಸುವ ಎಲ್ಲಾ ಧರ್ಮಗಳ ಬಗ್ಗೆ ಅದು ಸಹಿಷ್ಣು ಮನೋಭಾವನೆಯನ್ನು ಹೊಂದಿದೆ."

**(Chand, Tara: Mohammad and Teachings of Qur'an. Shaikh Muhammad Ashraf, Lahore, Pakis-tan, 1945, pp. VIII-IX)**

*~*~*~*~*

### ಎಂ. ಎನ್ ರೋಯ್

"ಪ್ರತಿಯೊಬ್ಬ ಪ್ರವಾದಿ ತನ್ನ ವಾದವನ್ನು ಪವಾಡಗಳನ್ನು ಮಾಡುವ ಮೂಲಕ ಪುಷ್ಟೀಕರಿಸುತ್ತಾರೆ. ಈ ದೃಷ್ಟಿಯಿಂದ ನೋಡುವುದಾದರೆ, ಮುಹಮ್ಮದರಿಗಿಂತ ಮುಂಚಿನ ಅಥವಾ ಅವರ ನಂತರದ ಪ್ರವಾದಿಗಳಿಗಿಂತ ಅವರು ಅತ್ಯಂತ ಶ್ರೇಷ್ಠರೆಂದು ಗಣಿಸಲ್ಪಡುವರು. ಇಸ್ಲಾಮ್ ಧರ್ಮವು ವ್ಯಾಪಿಸಿದುದು ಎಲ್ಲಾ ಪವಾಡಗಳಿಗಿಂತ ಅತ್ಯಂತ ಶ್ರೇಷ್ಠ ಪವಾಡವಾಗಿದೆ.

"ಕುಲೀನ, ಸಹಿಷ್ಣು ಜನಾಂಗಗಳ ಮೇಲೆ ಮತಾಂಧರ ವಿಜಯವೆಂದು ಇಸ್ಲಾಮಿನ ಹಬ್ಬುವಿಕೆಯನ್ನು ವಿಶ್ಲೇಷಿಸುವಂತಹ ಕೀಳು ಸಿದ್ಧಾಂತವನ್ನು ವಿದ್ಯಾವಂತ ಲೋಕವು ಇಂದು ತಿರಸ್ಕರಿಸಿದೆ. ಇಸ್ಲಾಮಿನ ಅದ್ಭುತ ವಿಜಯವು ಅದರ ಕ್ರಾಂತಿಕಾರಿ ತತ್ವಗಳ ಮತ್ತು ಪುರಾತನ ಗ್ರೀಸ್, ರೋಮ್ ದೇಶಗಳ ನಾಗರಿಕತೆ ಮತ್ತು ಪರ್ಶಿಯಾ, ಚೈನ ಮತ್ತು ಹಿಂದೂಸ್ತಾನದ ನಾಗರಿಕತೆಯ ಅವನತಿಯ ಕಾರಣದಿಂದ ಉಂಟಾದ ನಿರಾಶೆಯ ಪರಿಸ್ಥಿತಿಯಿಂದ ಜನಸಾಮಾನ್ಯರನ್ನು ಮುನ್ನಡೆಸಲು ಅದಕ್ಕಿದ್ದ ಸಾಮರ್ಥ್ಯದ ಕಾರಣದಿಂದಾಗಿದೆ.

"ಇಸ್ಲಾಮಿನ ಮೂಲತತ್ವ – ದೇವನೊಬ್ಬನೇ ಎಂಬ ತತ್ವ – ಅನ್ಯರ ಬಗ್ಗೆ ಸಹಿಷ್ಣು ಭಾವವನ್ನು ಪ್ರಚೋದಿಸುತ್ತದೆ. ಎಲ್ಲಾ ಕುಂದುಕೊರತೆಗಳು ಮತ್ತು ವೈಕಲ್ಯಗಳನ್ನು ಒಳಗೊಂಡ ಪ್ರಪಂಚ, ಎಲ್ಲಾ ತಪ್ಪು ಮತ್ತು ನಿರರ್ಥಕ ಕೆಲಸಗಳನ್ನು ಮಾಡುವ ಮಾನವರು ಒಬ್ಬನೇ ಒಬ್ಬ ದೇವನ ಸೃಷ್ಟಿ ಎಂದು ನಂಬುವಾಗ ಈ ಉನ್ನತ ತತ್ವದಲ್ಲಿ ನಂಬಿಕೆ ಇರಿಸುವವನು ವಿಕಲತೆಗಳನ್ನು ಕಂಡು ವ್ಯಥೆಪಡಬಹುದು. ಅವನಿಗೆ ನಿರರ್ಥಕವೆಂದೂ ವಿಕೃತವೆಂದೂ ಕಾಣುವುದನ್ನು ನೋಡಿ ನಗಬಹುದು. ಆದರೆ ಅವನ ವಿಶ್ವಾಸವು ಅವುಗಳ ಬಗ್ಗೆ ಅವು ಅನ್ಯ ಕೆಟ್ಟ ದೇವನ ಕೆಲಸವೆಂದು ಯೋಚಿಸಲು ಸಾಧ್ಯವಾಗದು. ಸತ್ಯವಿಶ್ವಾಸಿಯು ತನ್ನ ಹಾಗೆ ಆರಾಧನೆ ಮಾಡದ ಅನ್ಯಮತೀಯರನ್ನು ದಾರಿತಪ್ಪಿದವರೆಂದು ಹೇಳಬಹುದಾದರೂ ಅವರೆಲ್ಲರೂ ಒಬ್ಬನೇ ಒಬ್ಬ ಪಿತನ ಮಕ್ಕಳೆಂದೂ ಅವರನ್ನು ನೇರಮಾರ್ಗಕ್ಕೆ ತರಬೇಕೆಂದೂ ಅವರು ತಮ್ಮ ಮೋಕ್ಷಕ್ಕೆ ಸಿದ್ಧರಾಗುವ ತನಕ ತಾಳ್ಮೆಯಿಂದ ಕಾಣಬೇಕೆಂದೂ ಯೋಚಿಸುವನು."

**(Roy M. N.: The Historical Role of Islam, Renaissance Publishers Private Ltd., Calcutta, India, 1958, pp. 4-5, 6, 34)**

*~*~*~*~*

### ಫಿಲಿಪ್ ಕೆ. ಹಿಟ್ಟಿ

"ಯಾವುದೇ ಒಬ್ಬ ಮನುಷ್ಯನ ಮುಂದೆ ಇಷ್ಟರವರೆಗೆ ಎಂದೂ ತಲೆಬಾಗದ ಅರೇಬಿಯಾ ಈಗ ಮುಹಮ್ಮದರಿಂದ ಆಳಲ್ಪಡಲು ಮತ್ತು ಅವರ ಹೊಸ ಯೋಜನೆಯಲ್ಲಿ ಸೇರಲು ಸಿದ್ಧವಾಯಿತು. ಅದರ ಅಸಂಸ್ಕೃತ ಧರ್ಮವು ಭವ್ಯವಾದೊಂದು ಧರ್ಮಕ್ಕೆ ಮತ್ತು ಶ್ರೇಷ್ಠ ನೈತಿಕತೆಗೆ ಶರಣಾಯಿತು... ಮುಹಮ್ಮದರು ಅತ್ಯುನ್ನತ ಸ್ಥಾನವನ್ನು ಗಳಿಸಿದಾಗ ಕೂಡ ಹಿಂದಿನ ಕಾಲದಲ್ಲಿ ಜೀವಿಸಿದ ಹಾಗೆ ಆಡಂಬರ ರಹಿತ ಜೀವಿತವನ್ನು ಮಣ್ಣಿನಿಂದ ನಿರ್ಮಿಸಿದ ಮನೆಯಲ್ಲಿ, ಇಂದು ಸಹ ಅರೇಬಿಯಾ, ಸಿರಿಯಾಗಳಲ್ಲಿ ಕಾಣಬಹುದಾದಂತಹ ಹಳೆಯ ಮಾದರಿಯ ಕೆಲವೇ ಕೋಣೆಗಳಿರುವ ಮತ್ತು ಮುಂದುಗಡೆ ಒಂದು ಚಾವಡಿ ಇದ್ದು ಅದರ ಮೂಲಕ ಮಾತ್ರ ಪ್ರವೇಶಿಸಬಹುದಾದ ಆವೆಮಣ್ಣಿನ ಗೋಡೆಗಳಿಂದ ನಿರ್ಮಿತ ಮನೆಯಲ್ಲಿ ಜೀವಿಸಿದರು. ಅವರು ಸ್ವತಃ ತನ್ನ ಹರಿದ ಬಟ್ಟೆಗಳನ್ನು ಹೊಲಿಯುತ್ತಿದ್ದರು. ಅವರನ್ನು ಜನರು ಯಾವಾಗಲೂ ಭೇಟಿಯಾಗಬಹುದಿತ್ತು... ಅರಬಿಗಳ ಗೋತ್ರ ನಿಷ್ಠೆಯು ಧರ್ಮನಿಷ್ಠೆಗೆ ತಕ್ಷಣ ಬದಲಾಯಿಸಲ್ಪಟ್ಟಿತು. ಅರಬಿಗಳು ಇಸ್ಲಾಮಿಕ ಭ್ರಾತೃದಲ್ಲಿ ಒಗ್ಗೂಡಿದರು. ಹೊಸ ಮುಸ್ಲಿಮ್ ಸಮುದಾಯದಲ್ಲಿ ಪುರೋಹಿತರಿಲ್ಲ, ಉಚ್ಚ–ನೀಚರಿಲ್ಲ ಮತ್ತು ಕೇಂದ್ರೀಯ ಪುರೋಹಿತ ವರ್ಗವಿಲ್ಲ... ಮುಹಮ್ಮದರು ತನ್ನ ಜೀವಿತದ ಕಾಲದೊಳಗೆ ಹಿಂದೆಂದೂ ಐಕ್ಯದಿಂದಿರದ ಜನರ ಒಂದು ಐಕ್ಯ ಸಮುದಾಯವನ್ನು ಸೃಷ್ಟಿಸಿದರು. ಅವರಿದ್ದ ಪ್ರದೇಶವು ಕೇವಲ ಭೌಗೋಳಿಕವಾಗಿ ಒಂದು ಹೆಸರನ್ನು ಮಾತ್ರ ಪಡೆದಿತ್ತು.

ಮುಹಮ್ಮದ್ ಒಂದು ಧರ್ಮವನ್ನು ಸ್ಥಾಪಿಸಿದರು. ಅದು ವಿಶಾಲ ಪ್ರದೇಶಗಳಲ್ಲಿ ಕ್ರೈಸ್ತ ಧರ್ಮವನ್ನೂ ಯಹೂದಿ ಧರ್ಮವನ್ನೂ ಹಿಂದಕ್ಕೆ ತಳ್ಳಿತು ಮತ್ತು ಇಂದು ಸಹ ಮಾನವ ಕುಲದ ಉತ್ತಮವಾದೊಂದು ಭಾಗವನ್ನು ತನ್ನಲ್ಲಿ ಸೇರ್ಪಡಿಸಿಕೊಂಡಿದೆ. ಮುಹಮ್ಮದರು ಒಂದು ಸಾಮ್ರಾಜ್ಯಕ್ಕೆ ಅಸ್ತಿಭಾರ ಹಾಕಿದರು. ಅದು ಸ್ವಲ್ಪ ಸಮಯದೊಳಗೆ ಅಂದಿನ ಕಾಲದ ನಾಗರಿಕ ಲೋಕದ ಅನೇಕ ಉತ್ತಮ ಪ್ರದೇಶಗಳನ್ನು ತನ್ನಲ್ಲಿ ಸೇರಿಸಿಕೊಂಡಿತು.

"ಮುಹಮ್ಮದ್ ವಿದ್ಯಾಭ್ಯಾಸರಹಿತರಾಗಿದ್ದರೂ ಅವರು ಒಂದು ಗ್ರಂಥಕ್ಕೆ ಕಾರಣೀಭೂತರಾಗಿದ್ದಾರೆ. ಅದನ್ನು ಮಾನವಕುಲದ ಎಂಟನೇ ಒಂದು ಅಂಶದಷ್ಟು ಜನರು ಎಲ್ಲಾ ವಿಜ್ಞಾನ, ವಿವೇಕ ಮತ್ತು ಧರ್ಮಶಾಸ್ತ್ರದ ಮೂರ್ತರೂಪವೆಂದು ಗಣಿಸುತ್ತಾರೆ."

**(Hitti, Philip K.: Muhammad the Prophet of Allah, History of the Arabs, Chapter VIII, Macmillan & Co., London, 1960, pp. 119-22)**

*~*~*~*~*

## ಜೋರ್ಜ್ ಬರ್ನಾರ್ಡ್ ಶಾ

"ಯಾವುದಾದರೂ ಧರ್ಮಕ್ಕೆ ಇಂಗ್ಲೆಂಡನ್ನು ಅಲ್ಲ, ಯುರೋಪನ್ನು ಒಂದು ನೂರು ವರ್ಷಗಳೊಳಗೆ ಆಳಲು ಸಂದರ್ಭ ಸಿಗುವುದಾದರೆ ಅದು ಇಸ್ಲಾಮ್ ಧರ್ಮಕ್ಕೆ ಆಗಿದೆ.

"ನಾನು ಮುಹಮ್ಮದರ ಧರ್ಮವನ್ನು ಬಹಳ ಉನ್ನತ ಮಟ್ಟದಲ್ಲಿ ಪರಿಗಣಿಸಿರುವೆನು – ಅದರ ಆಶ್ಚರ್ಯಕರ ಚೈತನ್ಯದ ಕಾರಣದಿಂದ. ಜೀವಿತದ ಬದಲಾವಣೆ ಹೊಂದುತ್ತಿರುವ ಕಾಲಘಟ್ಟಗಳಿಗೆ ಅನುಸಾರವಾಗಿ ತನ್ನನ್ನು ಪರಿವರ್ತಿಸಿಕೊಳ್ಳುವ ಸಾಮರ್ಥ್ಯ ಹೊಂದಿರುವ ಧರ್ಮ ಇದೊಂದೇ ಆಗಿದೆ ಎಂದು ನನಗೆ ತೋರುತ್ತದೆ. ಆ ಕಾರಣದಿಂದ ಅದು ಪ್ರತಿಯೊಂದು ಕಾಲಘಟ್ಟಕ್ಕೆ ಅನುಸರಣೆಗೆ ಯೋಗ್ಯವಾಗುವುದು. ನಾನು ಮುಹಮ್ಮದರ ಬಗ್ಗೆ ಅಧ್ಯಯನ ಮಾಡಿದ್ದೇನೆ. ಅವರು ಅದ್ಭುತ ಮನುಷ್ಯರಾಗಿದ್ದರು. ನನ್ನ ಅಭಿಪ್ರಾಯದಲ್ಲಿ ಅವರನ್ನು ಕ್ರಿಸ್ತ ವಿರೋಧಿ ಎಂದು ಕರೆಯುವುದಕ್ಕಿಂತ ಅವರನ್ನು ಮಾನವ ಕುಲದ ರಕ್ಷಕನೆಂದು ಕರೆಯಬೇಕು.

"ಅವರಂತಹ ಒಬ್ಬ ವ್ಯಕ್ತಿ ಆಧುನಿಕ ಲೋಕದ ಏಕಾಧಿಪತಿಯಾಗುವುದಾದರೆ ಆ ವ್ಯಕ್ತಿ ಲೋಕದ ಸಮಸ್ಯೆಗಳನ್ನು ಬಗೆಹರಿಸಿ ಅದಕ್ಕೆ ಆವಶ್ಯಕವಾದ ಶಾಂತಿ ಮತ್ತು ಸುಖವನ್ನು ನೀಡಬಲ್ಲರೆಂದು ನಾನು ನಂಬುತ್ತೇನೆ. ನಾನು ಭವಿಷ್ಯ ನುಡಿಯುತ್ತೇನೆ: ಮುಹಮ್ಮದರ ಧರ್ಮವು ಇಂದು ಯುರೋಪಿನಲ್ಲಿ ಅಂಗೀಕರಿಸಲ್ಪಡಲು ಪ್ರಾರಂಭವಾದ ಹಾಗೆ ಅದು ನಾಳೆಯ ಯುರೋಪಿಗೂ ಅಂಗೀಕಾರಕ್ಕೆ ಅರ್ಹವಾಗುವುದು."

**(Shaw, George Bernard: The Genuine Islam, Vol. 1, No.8, 1936 ಇಂಟರ್‌ನೆಟ್‌ನಿಂದ ಉಲ್ಲೇಖಿತ)**

*~*~*~*~*

## ಜವಾಹರಲಾಲ್ ನೆಹರೂ

"ಅರಬ್ ಜನಾಂಗ ಅನ್ಯದೇಶಗಳಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ಯಾವುದೇ ಕಾಳಜಿ ಇಲ್ಲದೆ, ನಿದ್ರಾವಸ್ಥೆಯಲ್ಲಿ ಅನೇಕ ಯುಗಗಳ ಕಾಲ ಜೀವಿಸುತ್ತಿತ್ತು. ಇಂತಹ ಅರಬ್ ಜನಾಂಗ ಹಠಾತ್ತಾಗಿ ಎಚ್ಚರಗೊಂಡು ಪ್ರಚಲಿತ ಶಕ್ತಿಯನ್ನು ಪ್ರದರ್ಶಿಸಿ ಲೋಕವನ್ನು ಬೆಚ್ಚಿಬೀಳುವಂತೆ ಮಾಡಿ ಅದನ್ನು ಗಾಬರಿಗೊಳಪಡಿಸಿದುದು ಅತ್ಯಾಶ್ಚರ್ಯಕರವಾಗಿದೆ. ಅರಬಿಗಳ ಕಥೆ ಮತ್ತು ಅವರು ಹೇಗೆ ವೇಗವಾಗಿ ಏಷ್ಯಾ, ಯುರೋಪು ಮತ್ತು ಆಫ್ರಿಕದಲ್ಲಿ ವ್ಯಾಪಿಸಿದರು ಎಂಬುದು ಹಾಗೂ ಶ್ರೇಷ್ಠ ಸಂಸ್ಕೃತಿ ಮತ್ತು ನಾಗರಿಕತೆಯನ್ನು ಅವರು ಬೆಳೆಸಿದುದು ಚರಿತ್ರೆಯ ಅದ್ಭುತಗಳಲ್ಲಿ ಒಂದಾಗಿದೆ. ಇಸ್ಲಾಮ್ ಎಂಬ ಹೊಸ ಶಕ್ತಿ ಅಥವಾ ಹೊಸ ತತ್ವಾದರ್ಶ ಅರಬಿಗಳಿಗೆ ಆತ್ಮಧೈರ್ಯ ಮತ್ತು ಶಕ್ತಿಯನ್ನು ತುಂಬಿಸಿಕೊಟ್ಟಿತು.

"ಮುಹಮ್ಮದ್ ಎಂಬ ಹೊಸ ಪ್ರವಾದಿಯು ಇಸ್ಲಾಮ್ ಧರ್ಮವನ್ನು ಸ್ಥಾಪಿಸಿದರು. ಅವರು 570ರಲ್ಲಿ ಮಕ್ಕದಲ್ಲಿ ಜನಿಸಿದರು..... ಅವರು ಶಾಂತಮಯ ಜೀವಿತ ನಡೆಸುತ್ತಿದ್ದರು. ಅವರು ಅವರ ಸ್ನೇಹಿತರಿಂದ ಮೆಚ್ಚಿಗೆಗೂ ನಂಬಿಕೆಗೂ ಪಾತ್ರರಾಗಿದ್ದರು. ಅವರನ್ನು 'ಅಲ್‌ಅಮೀನ್' (ಅತ್ಯಂತ ಪ್ರಾಮಾಣಿಕ – ನಂಬಿಕೆಗೆ ಅರ್ಹ) ಎಂದು ಕರೆಯಲಾಗುತ್ತಿತ್ತು.... ಅವರು ಉಪದೇಶಿಸಿದ ಧರ್ಮವು ಅದರ ಸರಳತೆ, ಸ್ಪಷ್ಟತೆ ಹಾಗೂ ಅದರಲ್ಲಿ ಪ್ರಜಾಪ್ರಭುತ್ವ ಮತ್ತು ಸಮಾನತೆಯ ಸತ್ವಗಳ ಕಾರಣ ಜನಸಾಮಾನ್ಯರಿಗೆ ಪ್ರಿಯವಾಯಿತು. ಅರಬ್ ದೇಶದ ನೆರೆಹೊರೆಯ ದೇಶಗಳ ಜನಸಾಮಾನ್ಯರಿಗೂ ಅದು ಪ್ರಿಯಕರವಾಯಿತು. ಆ ಜನರು ನಿರಂಕುಶ ದೊರೆಗಳಿಂದಲೂ ಗರ್ವಿಷ್ಠರಾದ ಪುರೋಹಿತರಿಂದಲೂ ದೌರ್ಜನ್ಯಗಳಿಗೆ ದೀರ್ಘ ಕಾಲ ಗುರಿಯಾಗಿದ್ದರು. ಆ ಜನರು ಹಳೆಯ ಕಟ್ಟು ಕಟ್ಟಳೆಗಳ ಬಗ್ಗೆ

ಬೇಸತ್ತಿದ್ದರು. ಅವರು ಹೊಸ ಬದಲಾವಣೆಗೆ ಸಿದ್ಧರಾಗಿದ್ದರು. ಇಸ್ಲಾಮ್ ಈ ಬದಲಾವಣೆಯನ್ನು ಅವರಿಗೆ ನೀಡಿತು. ಅದನ್ನು ಅವರು ಸ್ವಾಗತಿಸಿದರು. ಅದು ಅವರನ್ನು ಅನೇಕ ರೀತಿಗಳಲ್ಲಿ ಉತ್ತಮ ಸ್ಥಿತಿಗೆ ಏರಿಸಿತು ಮತ್ತು ಹಳೆಯ ಕಾಲದ ದೌರ್ಜನ್ಯಗಳನ್ನು ಕೊನೆಗೊಳಿಸಿತು."

**(Nehru, Jawaharlal: Glimpses of World History. The John Day Company, 1942, pp. 142-145)**

*~*~*~*~*

**ಮೋಹನದಾಸ್ ಕರಮ್‌ಚಂದ್ ಗಾಂಧೀ**

"ಪಶ್ಚಿಮವು ಅಂಧಕಾರದಲ್ಲಿ ಮುಳುಗಿದ್ದಾಗ ಪೂರ್ವ ದಿಗಂತದಿಂದ ಒಂದು ಪ್ರಜ್ವಲಿಸುವ ನಕ್ಷತ್ರ ಉದಿಸಿತು. ಅದು ನೋವಿನಿಂದ ನರಳುತ್ತಿರುವ ಲೋಕಕ್ಕೆ ಸುಖವನ್ನು ನೀಡಿತು. ಇಸ್ಲಾಮ್ ಒಂದು ಮಿಥ್ಯ ಧರ್ಮವಲ್ಲ. ಹಿಂದುಗಳು ಅದರ ಬಗ್ಗೆ ಭಕ್ತಿಯುಕ್ತವಾಗಿ ಅಧ್ಯಯನ ಮಾಡಬೇಕು. ನಾನು ಅದನ್ನು ಪ್ರೀತಿಸುವ ಹಾಗೆ ಅವರು ಸಹ ಅದನ್ನು ಪ್ರೀತಿಸುವರು."

**(Gandhi, Mohandas Karamchand : Young India, The Viking Press, New York, USA 1927, p. 60)**

*~*~*~*~*

**ಎಚ್. ಜಿ. ವೆಲ್ಸ್**

"ಇಸ್ಲಾಮ್ ಜಯಶಾಲಿಯಾದುದು ಏಕೆಂದರೆ ಅದು ಆ ಕಾಲದಲ್ಲಿ ಲೋಕದ ಮುಂದಿರಿಸಿದ ಅತ್ಯುತ್ತಮ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯಾಗಿತ್ತು. ಅದು ಜಯಶಾಲಿಯಾದುದು ಏಕೆಂದರೆ ಅದು ಎಲ್ಲಾ ಕಡೆಗಳಲ್ಲೂ ರಾಜಕೀಯದಲ್ಲಿ ನಿರಾಸಕ್ತರಾದ ಜನರನ್ನು ಕೊಳ್ಳೆಗೆ, ದೌರ್ಜನ್ಯಕ್ಕೆ ಮತ್ತು ಬೆದರಿಕೆಗೆ ಗುರಿಯಾದವರನ್ನಾಗಿ ಕಂಡಿತು. ಜನರು ವಿದ್ಯಾಹೀನರೂ ಸಂಘಟಿತರಾಗದವರೂ ಆಗಿದ್ದರು. ಸ್ವಾರ್ಥಿ ಮತ್ತು ಕೆಟ್ಟ ಸರಕಾರಗಳಿಗೆ ಜನರ ಬಗ್ಗೆ ಯಾವ ಕಾಳಜಿಯೂ ಇರಲಿಲ್ಲ.

"ಇಸ್ಲಾಮ್ ವಿಶಾಲವೂ ಹೊಸದಾದುದೂ ಶುದ್ಧವೂ ಆದ ರಾಜಕೀಯ ತತ್ವಗಳನ್ನೊಳಗೊಂಡು ಅದು ಲೋಕದ ಜನಸಾಮಾನ್ಯರಿಗೆ ಬೇರೆ ಯಾವುದಕ್ಕಿಂತಲೂ ಉತ್ತಮ ಸವಲತ್ತುಗಳನ್ನು ನೀಡಿತು."

**(Wells, H. G.: The Outline of World History. Garden City Books, 1956, p. 493)**

*~*~*~*~*

**ವಿಲಿಯಮ್ ಮ್ಯೂರ್**

"ಮೊದಲಿನ ಎರಡು ಖಲೀಫರಾದ ಅಬೂಬಕರ್ ಮತ್ತು ಉಮರ್‌ರವರ ಸರಳತೆ ಮತ್ತು ಶ್ರದ್ಧೆಯು ಮುಹಮ್ಮದರ ಪ್ರಾಮಾಣಿಕತೆಯ ಕುರಿತು ಅವರಿಗಿದ್ದ ನಂಬಿಕೆಯ ಬಗ್ಗೆ ಶಕ್ತಿಯುತವಾದ ಸಾಕ್ಷ್ಯವಾಗಿದೆ. ಈ ಜನರ ನಂಬಿಕೆಗಳು ಮುಹಮ್ಮದರ ಸ್ವಭಾವ ಗುಣಗಳ ಬಗ್ಗೆ ನಮ್ಮ ಅಭಿಮತವನ್ನು ರೂಪಿಸಲು ನಿರಾಕರಿಸಲಾಗದಂತಹ ಮೌಲ್ಯವನ್ನು ಹೊಂದಿವೆ. ಅವರಿಗೆ ತಮ್ಮ ನಂಬಿಕೆಗಳ ಆಧಾರವನ್ನು ಪರಿಶೀಲಿಸಲು ಸಾಕಷ್ಟು ಸಂದರ್ಭಗಳು ಒದಗಿದ್ದುವು. ಅವರು ಮುಹಮ್ಮದರಿಗೆ ಸಮೀಪವಾಗಿ ದೀರ್ಘಕಾಲ ಇದ್ದರು. ನಾನು ಮುಹಮ್ಮದರ ಸ್ವಭಾವ ಗುಣದ ಬಗ್ಗೆ ತೆಗೆದುಕೊಂಡ ನಿಲುವನ್ನು ಅವರ ವರ್ತನೆಯು ಅನುಮೋದಿಸುತ್ತದೆ..... ಮುಹಮ್ಮದರ ಸ್ವಭಾವ ಗುಣದ ಒಂದು ಗಮನಾರ್ಹ ಅಂಶವು ಅವರು ತನ್ನ ಅತ್ಯಂತ ಸಾಮಾನ್ಯ ಅನುಯಾಯಿಯ ಜೊತೆಗೆ ಕೂಡ ಸಭ್ಯತೆ ಮತ್ತು ಶ್ರದ್ಧೆಯಿಂದ ವರ್ತಿಸುತ್ತಿದ್ದುದಾಗಿದೆ. ಸರಳತೆ, ದಯೆ, ಸಹನೆ, ನಿಸ್ವಾರ್ಥತೆ ಮತ್ತು ಔದಾರ್ಯ ಅವರ ನಡೆವಳಿಕೆಯಲ್ಲಿ ಕಾಣಿಸುತ್ತಿದ್ದವು. ಅದು ಅವರ ಸುತ್ತು ಮುತ್ತಲು ಇದ್ದವರ ಪ್ರೀತಿಯನ್ನು ಅವರಿಗೆ ಗಳಿಸಿಕೊಟ್ಟಿತು.... ಅವರಿಗೆ ನಿರಂಕುಶ ಅಧಿಕಾರವಿದ್ದರೂ ಮುಹಮ್ಮದ್ ನ್ಯಾಯಬದ್ಧರೂ ಸೌಮ್ಯರೂ ಆಗಿದ್ದರು. ಅವರು ತನ್ನ ಶತ್ರುಗಳು ತನ್ನ ವಾದಗಳನ್ನು ಸಂತೋಷದಿಂದ ಅಂಗೀಕರಿಸಿದಾಗ ಅವರೊಂದಿಗೆ ಸಹಾನುಭೂತಿಯಿಂದ ವರ್ತಿಸಲು ಹಿಂಜ–ರಿಯಲಿಲ್ಲ. ಮುಹಮ್ಮದರ ವಾದಗಳ ವಿರುದ್ಧ ಮಕ್ಕದ ಜನರು ದೀರ್ಘಕಾಲ ನಡೆಸಿದ ಪಟ್ಟುಬಿಡದ ಹೋರಾಟ ಅವರನ್ನು ಸೋಲಿಸಿದ ಜಯಶಾಲಿಯನ್ನು ತನ್ನ ಕೋಪದ ಬೆಂಕಿ ಮತ್ತು ರಕ್ತದ ಮೂಲಕ ಅಳಿಸಲಾಗದ ಗುರುತುಗಳಲ್ಲಿ ತೋರಿಸಬಹುದಿತ್ತು. ಆದರೆ ಮುಹಮ್ಮದ್ ಕೆಲವು ಅಪರಾಧಿಗಳನ್ನು ಹೊರತುಪಡಿಸಿ ಎಲ್ಲರಿಗೂ ಕ್ಷಮಾದಾನ ನೀಡಿದರು. ಹಳೆಯ ನೆನಪುಗಳನ್ನು ಅದರ ಎಲ್ಲಾ ಅಪಹಾಸ್ಯ ಮತ್ತು ಹಿಂಸಾಚಾರಗಳೊಂದಿಗೆ ಅವರು ವಿಸ್ಮೃತಿಗೆ ಭವ್ಯವಾಗಿ ತಳ್ಳಿದರು. ಅವರು ತನ್ನ ಅತ್ಯಂತ ಕಠಿಣ ಶತ್ರುವಿನೊಂದಿಗೆ ಕರುಣೆ ಮತ್ತು ಪ್ರೀತಿಯಿಂದ ವರ್ತಿಸಿದರು."

**(Muir, William: The Life of Muhammad. John & Grant, 1923, pp. 509-13)**

## ಎಸ್. ಪಿ. ಸ್ಕಾಟ್

"ಮುಹಮ್ಮದರ ಉದ್ದೇಶ ಶುದ್ಧಿ, ಅವರ ಆತ್ಮವಿಶ್ವಾಸ, ಅವರ ಶ್ರದ್ಧಾಭಕ್ತಿ ಇವುಗಳ ಬಗ್ಗೆ ಅತ್ಯಂತ ವಿಶ್ವಾಸಾರ್ಹ ಸಾಕ್ಷ್ಯಗಳು ಅವರ ಆರಂಭ ಕಾಲದ ಶಿಷ್ಯರ ಉನ್ನತಶ್ರೇಣಿ ಮತ್ತು ಸ್ವಭಾವಗುಣಗಳಿಂದಲೂ ಮುಹಮ್ಮದರ ಉಪದೇಶಗಳು ಎಷ್ಟು ಭಯಭಕ್ತಿಯಿಂದ ಅಂಗೀಕರಿಸಲ್ಪಟ್ಟವು ಎಂಬುದರಿಂದಲೂ ದೊರಕುತ್ತವೆ.

"ಅವರು ತನಗೆ ಸಂಭವಿಸಿದ ಹಾನಿಯ ಬಗ್ಗೆ ಸಿಟ್ಟು ಪ್ರಕಟಿಸಲು ನಿಧಾನವನ್ನು ಅವಲಂಬಿಸುತ್ತಿದ್ದರು. ಆದರೆ ಅವರು ತಪ್ಪುಗಾರನನ್ನು ಕ್ಷಮಿಸಲು ಕೂಡಲೇ ಸಿದ್ಧರಾಗುತ್ತಿದ್ದರು – ಇದು ಅರಬಿಗಳ ಅಭಿಪ್ರಾಯದಲ್ಲಿ ಹೇಡಿತನದ ಚಿಹ್ನೆಯಾಗಿತ್ತು.... ಅವರಿಗೆ ತಕ್ಕ ಸಮಯದಲ್ಲಿ ಶರಣಾಗತಿ ಮತ್ತು ಅವರ ಔದಾರ್ಯದ ಬಗ್ಗೆ ಅಪೇಕ್ಷೆಯು ಅವರ ತಾತ್ಕಾಲಿಕ ಕೋಪವನ್ನು ಶಮನಗೊಳಿಸದೆ ಇರಲಿಲ್ಲ. ಎಂದೂ ಸಮಾಧಾನಪಡಿಸಲಾಗದ ಶತ್ರುಗಳಾಗಿ ಪ್ರಾರಂಭದಲ್ಲಿ ವರ್ತಿಸಿದವರು ಅವರ ನಿಷ್ಠಾವಂತರಾದ ಶಿಷ್ಯರಾಗಿ ಪರಿಣಮಿಸಿದರು. ಅವರ ಔದಾರ್ಯ ಮತ್ತು ಮನುಷ್ಯ ಹೃದಯದ ಬಗ್ಗೆ ಅವರಿಗಿದ್ದ ಆಳವಾದ ಜ್ಞಾನವು ಅವರನ್ನು ಜನನಾಯಕನನ್ನಾಗಿ ಮಾಡಿತು. ಮಕ್ಕವನ್ನು ಜಯಿಸಿದ ನಂತರ ಅವರು ಖುರೈಶ್ ಗೋತ್ರದವರಿಗೆ ತೋರಿಸಿದ ಔದಾರ್ಯವು ಅದಕ್ಕೆ ಸಾಕ್ಷಿಯಾಗಿದೆ.

"ಮುಹಮ್ಮದರ ಘನತೆಯು ಅವರು ಜನರ ನೈತಿಕ ಮತ್ತು ಲೌಕಿಕ ಆವಶ್ಯಕತೆಗಳನ್ನು ಮನವರಿಕೆ ಮಾಡಿಕೊಂಡು ಅವರಿಗೆ ಹಿಂದೆಂದೂ ಸಿಗದ ಉಜ್ವಲ ಜೀವನ ಮಾರ್ಗವನ್ನು ತೆರೆದುಕೊಟ್ಟರು. ಅವರು ಜನರ ಅಭಿವೃದ್ಧಿಗಾಗಿ ಸಾಕಷ್ಟು ಪರಿಶ್ರಮ ಮಾಡಿದರು. ಅರಬ್ ಜನರೊಂದಿಗೆ ಮತ್ತು ಭಾಷೆಯೊಂದಿಗೆ ಸಂಬಂಧ ಹೊಂದದ ಅನ್ಯ ಜನರ ಮೇಲೆಯೂ ಅದರ ಪ್ರಭಾವ ಉಂಟಾಯಿತು. ಅವರು ಅನೇಕ ಕ್ರೂರ ಮತ್ತು ಹೀನ ಆಚಾರಗಳನ್ನು ನಿಷಿದ್ಧಗೊಳಿಸಿದರು. ಅವರ ಉಪದೇಶಗಳನ್ನು ಅನುಷ್ಠಾನಕ್ಕೆ ತಂದ ಎಲ್ಲಾ ಜನರ ಸ್ವಭಾವ ಗುಣಗಳನ್ನು ಅದು ಉನ್ನತಿಗೆ ಮತ್ತು ಗೌರವಾರ್ಹ ಸ್ಥಾನಕ್ಕೇರಿಸಿತು. ಯಾರು ಬಹುದೇವಾರಾಧಕರೂ ವಿಗ್ರಹಾರಾಧಕರೂ ಆಗಿದ್ದರೋ ಅವರನ್ನು ಮುಹಮ್ಮದರು ಏಕದೇವಾರಾಧಕರಾಗಿ ಪರಿವರ್ತಿಸಿದರು."

**(Scott, S. P.: History of the Moorish Empire in Europe, J. B. Lippincott Company, Philadelphia & London, 1904, Vol 1)**

*~*~*~*~*

## ತೋಮಸ್ ಡಬ್ಲ್ಯೂ ಅರ್‌ನೋಲ್ಡ್

"ಯುರೋಪಿಯನ್ ಲೇಖಕರು ಪದೇ ಪದೇ ಪ್ರತಿಪಾದಿಸುತ್ತಾರೇನೆಂದರೆ, ಮದೀನಕ್ಕೆ ವಲಸೆ ಹೋದ ದಿನಾಂಕದ ಮೊದಲುಗೊಂಡು ಅವರ ಜೀವಿತದ ಪರಿಸ್ಥಿತಿಯಲ್ಲಿ ಅಲ್ಲಿ ಉಂಟಾದ ಬದಲಾವಣೆಯ ಕಾರಣದಿಂದ ಪ್ರವಾದಿ ಸಂಪೂರ್ಣವಾಗಿ ಬೇರೆ ಸ್ವಭಾವ ಗುಣಗಳನ್ನು ಹೊಂದಿದವರಾಗಿ ಕಾಣಿಸಿದರು. ಅವರು ಉಪದೇಶಕರೂ ಮುನ್ನೆಚ್ಚರಿಕೆ ನೀಡುವವರೂ ಮನುಷ್ಯರಿಗೆ ದೇವನ ಸಂದೇಶವಾಹಕರೂ ಆಗಿ ತನಗೆ ಅವತೀರ್ಣಗೊಂಡ ಧರ್ಮದ ಸತ್ಯಾಂಶಗಳ ಕುರಿತು ಬೋಧಿಸುವವರಾಗಿ ಮುಂದುವರಿಯದೆ, ಅವರು ನಿರ್ಲಕ್ಷ್ಯನಾದ ಮತಾಂಧನಾದರು. ತನ್ನನ್ನು ಮತ್ತು ತನ್ನ ಅಭಿಪ್ರಾಯಗಳನ್ನು ಹೇರಲು ತನಗೆ ಸಾಧ್ಯವಿರುವ ಎಲ್ಲಾ ರೀತಿಯ ಬಲಪ್ರಯೋಗಗಳನ್ನು ಮತ್ತು ರಾಜತಂತ್ರಗಳನ್ನು ಕೈಗೊಂಡರು.

"ಆದರೆ ಮುಹಮ್ಮದರು ಮದೀನದಲ್ಲಿ ತನ್ನ ಉಪದೇಶಕನೆಂಬ ಕರ್ತವ್ಯವನ್ನು ಕೈಬಿಟ್ಟರು ಎಂದು ಹೇಳುವುದು ಸುಳ್ಳಾಗಿದೆ. ಅವರ ಬಳಿ ದೊಡ್ಡ ಸೈನ್ಯವು ಇದ್ದಾಗ ಅವರು ಅವಿಶ್ವಾಸಿಗಳಿಗೆ ಧರ್ಮಸ್ವೀಕಾರಕ್ಕೆ ಕರೆ ನೀಡುವುದನ್ನು ಬಿಟ್ಟರು ಎಂದು ಹೇಳುವುದು ವಾಸ್ತವಕ್ಕೆ ವಿರುದ್ಧವಾಗಿದೆ.

"ಇಸ್ಲಾಮ್ ಅದರ ಪ್ರಾರಂಭದ ಕಾಲದಿಂದ ಧರ್ಮಪ್ರಚಾರ ಮೂಲಕ ಜನರ ಹೃದಯಗಳನ್ನು ಗೆಲ್ಲಲು ಪ್ರಯತ್ನಿಸುತ್ತಾ ಅವರನ್ನು ವಿಶ್ವಾಸಿಗಳ ಭ್ರಾತೃತ್ವ ಗುಂಪಿಗೆ ಸೇರಿಸಲು ಬಯಸುತ್ತದೆ. ಅದು ಅದರ ಪ್ರಾರಂಭದ ಸ್ಥಿತಿಯಲ್ಲಿದ್ದಂತೆ ಇಂದು ಸಹ ತನ್ನ ಚಟುವಟಿಕೆಯನ್ನು ಅದೇ ರೀತಿ ಮುಂದುವರಿಸುತ್ತಾ ಇದೆ."

**(Arnold, Thomas W.: The spread of Islam in the World, Goodword Books, New Delhi, 2003, pp. 34 and 44)**

*~*~*~*~*

## ಜೆ. ಸೇಲ್ ಮತ್ತು ಈ. ಎಮ್. ವೆರ್ರಿ

"ಖುರ್‌ಆನಿನ ಈ ಉದ್ಧೃತ ಭಾಗವು (ಅಧ್ಯಾಯ 10 ವಚನ 32–37) ಬಹಳ ಬಲವತ್ತಾದ ತರ್ಕವನ್ನು ವಿಗ್ರಹಾರಾಧಕರ ವಿರುದ್ಧ ಮಂಡಿಸಿದೆ. ಅವರು ದೇವನನ್ನು ಅವರಿಗೆ ದೊರೆತ ಎಲ್ಲಾ ಅನುಗ್ರಹಗಳ ಉದ್ಭವ ಸ್ಥಾನವೆಂದು ಗಣಿಸಿ ಕಷ್ಟದಲ್ಲಿರುವಾಗ ಅವನ ಕಡೆಗೆ ಧಾವಿಸುತ್ತಿರುವಾಗ, ಮಿಥ್ಯ ದೈವಗಳನ್ನು ಆರಾಧಿಸುತ್ತಿರುವುದು ಅವರ ತಿಳಿಗೇಡಿತನವೆಂದು ಸ್ಪಷ್ಟಗೊಳಿಸಲಾಗಿದೆ. ಧರ್ಮ ಪ್ರಚಾರಕ ಧರ್ಮವಾದ ಇಸ್ಲಾಮ್ ಜಯಗಳಿಸಲು ಈ ಉಪದೇಶಗಳು ಕಾರಣವಾಗಿವೆ. ವಿಗ್ರಹಾರಾಧಕರ ಬಹುದೇವಾರಾಧನೆಯ ಎದುರಿಗೆ ಇಸ್ಲಾಮಿನ ಏಕದೇವ ವಿಶ್ವಾಸವು ಎದ್ದು ಕಾಣುತ್ತದೆ."

**(George Sale & Wherry, Elwood Moris: A Comprehensive Study on the Quran, Arms Press, New York, USA 1975, Vol 11, pp. 329-30)**

*~*~*~*~*~*

## ಜಾನ್ ವಿಲ್ಯಯಮ್ ಡ್ರೇಪರ್

"ಜಸ್ಟೀನಿಯನ್ ಚಕ್ರವರ್ತಿ ನಿಧನ ಹೊಂದಿದ ನಾಲ್ಕು ವರ್ಷಗಳ ನಂತರ, ಕ್ರಿ.ಶ. 569ರಲ್ಲಿ ಮಕ್ಕದಲ್ಲಿ ಒಬ್ಬ ಮನುಷ್ಯ ಜನಿಸಿದರು. ಅವರು ಮಾನವ ಕುಲದ ಮೇಲೆ ಅತ್ಯಧಿಕ ಪ್ರಭಾವ ಬೀರಿದರು. ಅವರ ಹೆಸರು ಮುಹಮ್ಮದ್. ಅವರನ್ನು ಯುರೋಪಿಯನ್ ಲೇಖಕರು 'ವೇಷಧಾರಿ ವಂಚಕ' ಎಂದು ಕರೆದರು. ಅವರು ತನ್ನ ಜನಾಂಗವನ್ನು ಅನಾಗರಿಕ ಮೂಢ ಆರಾಧನೆ, ಉಲ್ಕಾಪಾತದಿಂದ ಲಭಿಸಿದ ಕಲ್ಲಿನ ಆರಾಧನೆ, ಅತ್ಯಂತ ನೀಚರೀತಿಯಲ್ಲಿ ವಿಗ್ರಹಗಳ ಆರಾಧನೆಗಳಿಂದ ಮೇಲೆಕ್ಕೆತ್ತಿದರು. ಅವರು ಏಕ ದೇವಾರಾಧನೆಯನ್ನು ಬೋಧಿಸಿದರು. ಅದು ಏರಿಯನ್ ಪಂಥದವರ ಮತ್ತು ಕ್ಯಾಥೋಲಿಕ್ ಪಂಥದವರ ನಿರರ್ಥಕ ವಾಗ್ವಾದಗಳನ್ನು ಬೇಗನೆ ಗಾಳಿಗೆ ಚೆಲ್ಲಿತು.... ಮುಹಮ್ಮದ್ ಎಂತಹ ಪ್ರತಿಭೆಯನ್ನು ಹೊಂದಿದ್ದರೆಂದರೆ ಅವರು ಕೈಗೊಂಡ ಕ್ರಮಗಳು ಸಾಮ್ರಾಜ್ಯಗಳ ಭವಿಷ್ಯವನ್ನು ನಿರ್ಧರಿಸಿತು. ಅವರು ಉಪದೇಶಿಯಾದ ಸೈನಿಕರಾಗಿದ್ದರು. ಅವರು ಭಾಷಣದ ವೇದಿಕೆಯಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರು. ಅವರು ರಣರಂಗದಲ್ಲಿ ಶೂರರಾಗಿದ್ದರು. ಅವರ ಧರ್ಮಶಾಸ್ತ್ರ ಸರಳವಾಗಿತ್ತು: 'ಒಬ್ಬನೇ ಒಬ್ಬ ದೇವನಿದ್ದಾನೆ'. ಹೆಣ್ಣಿಗರಾದ ಸಿರಿಯನ್ ಜನರು ಯೇಸುಕ್ರಿಸ್ತರ ವ್ಯಕ್ತಿತ್ವಕ್ಕೆ ಸಂಬಂಧಿಸಿದ ರಹಸ್ಯಗಳ ಚರ್ಚೆಯಲ್ಲಿ ಮುಳುಗಿದ್ದರು. ಅತನಾಸಿಯನ್ ಮತ್ತು ಏರಿಯನ್ ಪಂಥಗಳು ಅವರ ಎದುರಿಗೆ ನಾಮಾವಶೇಷವಾಗಲಿದ್ದುವು.

"ಮುಹಮ್ಮದ್ ಏಕದೇವ ವಿಶ್ವಾಸವೆಂಬ ಶಾಶ್ವತ ಸತ್ಯದ ಬಗ್ಗೆ ನಿರರ್ಥಕ ವಾಗ್ವಾದಗಳಲ್ಲಿ ತಲ್ಲೀನರಾಗಲಿಲ್ಲ. ಅವರು ತನ್ನ ಜನಾಂಗದ ಸಾಮಾಜಿಕ ಸ್ಥಿತಿಯನ್ನು ವೈಯಕ್ತಿಕ ಸ್ವಚ್ಛತೆ, ಮದ್ಯನಿರೋಧ, ಉಪವಾಸ ಮತ್ತು ಪ್ರಾರ್ಥನೆಗೆ ಸಂಬಂಧಿಸಿದ ಆಜ್ಞೆಗಳನ್ನು ಜಾರಿಮಾಡಿ ಸುಧಾರಣೆ ಮಾಡಲು ಪ್ರಯತ್ನಿಸಿದರು. ಅವರು ದಾನ ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದರು. ಔದಾರ್ಯವು ಅಪರಿಚಿತವಾದ ಲೋಕಕ್ಕೆ ಅವರು ಹೀಗೆ ಆಶ್ವಾಸನೆ ನೀಡಿದರು: ಯಾವ ಧರ್ಮಕ್ಕೆ ಸೇರಿದವರಾದರೂ ಸಾತ್ವಿಕರಾಗಿದ್ದರೆ ಮೋಕ್ಷಗಳಿಸುವರು. ದೇವನು ಒಬ್ಬನೇ ಎಂಬ ಘೋಷಣೆಗೆ 'ಮುಹಮ್ಮದ್ ಅವನ ಪ್ರವಾದಿ' ಎಂದು ಅವರು ಸೇರಿಸಿದರು.

"ಇಂತಹ ಧೈರ್ಯಶಾಲಿ ಘೋಷಣೆಗೆ ಅನುಸಾರವಾಗಿ ಲೋಕದಲ್ಲಿ ಪರಿವರ್ತನೆಗಳು ಉಂಟಾದುವೋ ಎಂದು ತಿಳಿಯಲು ಬಯಸುವವರು ನಮ್ಮ ಕಾಲದ ಜಾಗತಿಕ ಭೂಪಟವನ್ನು ಪರಿಶೀಲಿಸುವುದು ಒಳ್ಳೆಯದು. ಹಾಗೆ ಪರಿಶೀಲಿಸುವವನು ವಾಸ್ತವಿಕಾಂಶಗಳನ್ನು ಕಾಣುವನು. ಅನೇಕ ಸಾಮ್ರಾಜ್ಯಗಳ ಧಾರ್ಮಿಕ ನಾಯಕನಾಗಿ ಅಂಗೀಕರಿಸಲ್ಪಡುವ ವಿಶ್ವದ ಮೂರನೆಯ ಒಂದು ಭಾಗದ ಜನರ ದೈನಂದಿನ ಜೀವಿತಕ್ಕೆ ಮಾರ್ಗದರ್ಶನ ನೀಡುವ ಆ ಮಹಾನುಭಾವರು ದೇವನ ಸಂದೇಶವಾಹಕ ಎಂಬ ಬಿರುದಿಗೆ ಅರ್ಹರಾಗಿ ಕಾಣಿಸುತ್ತಾರೆ... ಅರಬ್ ದೇಶದ ಧರ್ಮದ ಅಭಿವೃದ್ಧಿಗೆ ಕಾರಣ ಖಡ್ಗ ಮಾತ್ರವೆಂದು ಹೇಳುವುದು ಸಂಪೂರ್ಣವಾಗಿ ತಪ್ಪುಗ್ರಹಿಕೆಯಾಗಿದೆ. ಖಡ್ಗವು ಒಂದು ದೇಶದ ಅಂಗೀಕರಿಸಲಾದ ಧರ್ಮವನ್ನು ಬದಲಾಯಿಸಬಲ್ಲದು. ಆದರೆ ಖಡ್ಗವು ಎಂದೂ ಮಾನವರ ಮನಸ್ಸಾಕ್ಷಿಯನ್ನು ಬದಲಾಯಿಸದು. ವಾದವು ಗಾಢವಾಗಿದ್ದರೂ ಏಶಿಯಾ ಮತ್ತು ಆಫ್ರಿಕಾದ ಜೀವಿತ ಶೈಲಿಯನ್ನು ಬದಲಾಯಿಸಿ ಇಸ್ಲಾಮ್ ಧರ್ಮವನ್ನೂ ಅರಬಿ ಭಾಷೆಯನ್ನೂ ವಿವಿಧ ಜನಾಂಗಗಳು ಅಂಗೀಕರಿಸಿದುದಕ್ಕೆ ಇನ್ನಷ್ಟು ಗಾಢವಾದ ಕಾರಣಗಳು ಇದ್ದುವು."

**(Draper, John: History of the Intellectual Development of Europe, Vol 1, Chaper XI, Harper & Brothers, 1875, pp. 329-32)**

*~*~*~*~*~*

## ತೋಮಸ್ ಕಾರ್‍ಲೈಲ್

"ಒಬ್ಬ ಸುಳ್ಳುಗಾರ ಒಂದು ಧರ್ಮವನ್ನು ಸ್ಥಾಪಿಸಿದನೇ?.... ಅದನ್ನು ಸ್ಥಾಪಿಸಿದವನು ಸುಳ್ಳುಗಾರನಾಗಿದ್ದರೆ ಅದು ಹನ್ನೆರಡು ಶತಮಾನಗಳಷ್ಟು ಕಾಲ ಬಾಕಿಯಾಗಿ ಉಳಿಯುತ್ತಿರಲಿಲ್ಲ, ನೂರ ಎಂಬತ್ತು ಮಿಲಿಯ ಜನರು ಅದಕ್ಕೆ ಸೇರುತ್ತಿರಲಿಲ್ಲ; ಅದು ಎಂದೋ ನಾಶವಾಗುತ್ತಿತ್ತು.... ಮುಹಮ್ಮದರನ್ನು ನಾವು ಹುಚ್ಚನೆಂದಾಗಲಿ, ವೇಷಧಾರಿ ಎಂದಾಗಲಿ, ಮನಸ್ಸಾಕ್ಷಿ ಇಲ್ಲದವನು ಎಂದಾಗಲಿ, ಮಹತ್ವಾಕಾಂಕ್ಷಿ ಸಂಚುಗಾರ ಎಂದಾಗಲಿ ಹೇಳಲು ಸಾಧ್ಯವಾಗದು..... ಲೋಕವನ್ನು ಬೆಳಗಿಸಲು ಲೋಕದ ಸೃಷ್ಟಿಕರ್ತನು ಹಾಗೆ ಆಜ್ಞಾಪಿಸಿದ್ದನು...

"ಮಾನವರ ಹೃದಯಗಳನ್ನು ಚೆನ್ನಾಗಿ ಅರಿತ ಮರುಭೂಮಿಯ ಈ ಪುತ್ರ ತನ್ನ ಪ್ರಕಾಶಿಸುವ ಕಪ್ಪು ಕಣ್ಣುಗಳಿಂದ ಮತ್ತು ಸಾಮಾಜಿಕ ಕಳಕಳಿಯುಳ್ಳ ಆತ್ಮದಿಂದ ತುಂಬಿದವರಾಗಿದ್ದು ಅವರಿಗೆ ಮಹತ್ವಾಕಾಂಕ್ಷೆಗಿಂತ ಬೇರೆಯೇ ಆದ ಯೋಚನೆಗಳಿದ್ದುವು.... ಮುಹಮ್ಮದರು ತನ್ನ ಧರ್ಮವನ್ನು ಖಡ್ಗದ ಮೂಲಕ ಪ್ರಚಾರಗೊಳಿಸಿದ ಬಗ್ಗೆ ಬಹಳ ಹೇಳಲಾಗಿದೆ.... ಪ್ರತಿಯೊಂದು ಹೊಸ ಅಭಿಪ್ರಾಯ ಅದರ ಪ್ರಾರಂಭದಲ್ಲಿ ಅದು ಒಬ್ಬನದು ಆಗಿರುತ್ತದೆ. ಲೋಕದಲ್ಲಿ ಒಬ್ಬನೇ ಒಬ್ಬ ಮನುಷ್ಯ ಅದನ್ನು ನಂಬುತ್ತಾನೆ. ಆಗ ಒಬ್ಬನು ಇತರ ಎಲ್ಲರಿಗೆ ವಿರುದ್ಧವಾದ ಅಭಿಪ್ರಾಯ ಹೊಂದಿರುತ್ತಾನೆ. ಅಂತಹ ವ್ಯಕ್ತಿ ಖಡ್ಗವೆತ್ತಿಕೊಂಡು ತನ್ನ ಅಭಿಪ್ರಾಯವನ್ನು ಪ್ರಚಾರ ಮಾಡಲು ಪ್ರಯತ್ನಿಸುವುದಾದರೆ ಅವನಿಗೆ ಯಾವುದೇ ಪ್ರಯೋಜನ ಸಿಗಲಾರದು... ಮುಹಮ್ಮದರ ವಿರುದ್ಧ ಏನೆಲ್ಲಾ ಆಕ್ಷೇಪಮಾಡುತ್ತಾರಾದರೂ ಅವರು ಇಂದ್ರಿಯ ಲೋಲುಪರಾಗಿರಲಿಲ್ಲ. ನಾವು ಅವರನ್ನು ಒಬ್ಬ ಸಾಮಾನ್ಯ ಭೋಗಲಾಲಸಿ, ಕೀಳು ಸುಖಾನುಭವಗಳನ್ನು ಬಯಸುವ ವ್ಯಕ್ತಿ ಎಂದು ಗಣಿಸುವುದಾದರೆ ನಾವು ಬಹಳ ದೊಡ್ಡ ತಪ್ಪು ಮಾಡುತ್ತೇವೆ. ಅವರು ಯಾವುದೇ ಸುಖಾನುಭೂತಿಗಳನ್ನು ಆಶಿಸುತ್ತಿರಲಿಲ್ಲ. ತಾನೇ ಸಿದ್ಧಪಡಿಸಿದ ಉಡುಗೆ ತೊಡುಗೆಗಳನ್ನು ಧರಿಸಿದ ಈ ಮಹಾನುಭಾವನಿಗೆ ವಿಧೇಯರಾದ ಹಾಗೆ ಕಿರೀಟಧಾರಿಯಾದ ಯಾವುದೇ ರಾಜನಿಗೆ ಯಾರೂ ವಿಧೇಯರಾಗಲಿಲ್ಲ.

"ಇಪ್ಪತ್ತಮೂರು ವರ್ಷಗಳ ಕಠಿಣ ಪರೀಕ್ಷೆಯ ಕಾಲದಲ್ಲಿ ನಾನು ಅವರನ್ನು ಆ ಸಂಕಷ್ಟಗಳನ್ನು ಎದುರಿಸಿದ ನಿಜವಾದ ವೀರನಾಗಿ ಕಾಣುತ್ತೇನೆ.... ಅರಬ್ ಜನಾಂಗಕ್ಕೆ ಅಂಧಕಾರದಿಂದ ಬೆಳಕಿಗೆ ಜನ್ಮ ತಾಳಿದ ಹಾಗೆ ಆಗಿತ್ತು. ಅರಬ್ ದೇಶ ಅವರ ಮೂಲಕ ಪುನರುಜೀವನ ಪಡೆಯಿತು. ಭೂಮಿಯು ಸೃಷ್ಟಿಸಲ್ಪಟ್ಟ ಕಾಲದಿಂದ ಮೊದಲುಗೊಂಡು ಯಾರಿಂದಲೂ ಗಮನಿಸಲ್ಪಡದೆ ಮರುಭೂಮಿಗಳಲ್ಲಿ ಅಲೆದಾಡುತ್ತಿದ್ದ ಕುರಿಗಾಹಿ ಜನತೆ ಅರಬ್ ದೇಶದ್ದಾಗಿತ್ತು. ಒಬ್ಬ ವೀರ ಪ್ರವಾದಿಯನ್ನು ಅವರು ನಂಬುವಂತಹ ಮಾತಿನೊಂದಿಗೆ ಕಳುಹಿಸಲಾಯಿತು. ನೀವು ನೋಡಿರಿ, ಯಾರೂ ಗಮನಿಸದ ಜನರು ಲೋಕದ ಎಲ್ಲರಿಂದಲೂ ಗಮನಿಸಲ್ಪಡುವವರಾದರು. ಚಿಕ್ಕದಾಗಿದ್ದುದು ಪ್ರಪಂಚದಷ್ಟು ಬೆಳೆಯಿತು. ಕೇವಲ ಒಂದು ನೂರು ವರ್ಷಗಳ ಒಳಗೆ ಹೀಗಾಯಿತು...

"ಮಹಾಪುರುಷರ ಆಗಮನ ಆಕಾಶದಿಂದ ಬಂದೆರಗುವ ಮಿಂಚಿನ ಹಾಗಿರುತ್ತದೆ. ಲೋಕದ ಜನರು ಅವರಿಗಾಗಿ ಇಂಧನದ ಹಾಗೆ ಕಾಯುತ್ತಾ ಇರುತ್ತಾರೆ. ಆಗ ಅವರು ಸಹ ಉರಿಯಲು ಪ್ರಾರಂಭಿಸುತ್ತಾರೆ."

**(Carlyle, Thomas: The Hero as a Prophet (second chapter) in Heroes and Hero Worship. Oxford University Press, 1965)**

*~*~*~*~*

## ಎಡ್ವರ್ಡ್ ಗಿಬ್ಬನ್

"ಅರಬ್ ದೇಶದ ಪ್ರವಾದಿಯ ಅಸಾಧಾರಣ ಪ್ರತಿಭೆ, ಅವರ ಜನಾಂಗದ ನಡೆವಳಿಕೆಗಳು, ಅವರ ಧರ್ಮದ ಚೈತನ್ಯವು ಪೌರ್ವಾತ್ಯ (ರೋಮನ್) ಸಾಮ್ರಾಜ್ಯದ ಅವನತಿ ಮತ್ತು ನಾಶಕ್ಕೆ ಕಾರಣಗಳಾಗಿದ್ದುವು. ನಮ್ಮ ಕಣ್ಣುಗಳು ಆಶ್ಚರ್ಯಭರಿತವಾಗಿ ದಿಟ್ಟಿಸಿ ನೋಡುತ್ತಿವೆ – ವಿಶ್ವದ ಜನಾಂಗಗಳ ಮೇಲೆ ಹೊಸದಾದ ಮತ್ತು ಶಾಶ್ವತವಾದ ಪ್ರಭಾವ ಬೀರಿದ ಸ್ಮರಣೀಯ ಕ್ರಾಂತಿಗಳಲ್ಲಿ ಒಂದನ್ನು.....

"ಮುಹಮ್ಮದರ ಜ್ಞಾಪಕ ಶಕ್ತಿ ವಿಶಾಲವೂ ಸ್ಥಿರವೂ ಆಗಿತ್ತು. ಅವರ ಬುದ್ಧಿಶಕ್ತಿ ಸುಲಭವೂ ಸೌಹಾರ್ದಮಯವೂ ಆಗಿತ್ತು. ಅವರ ಯೋಚನೆಗಳು ಉನ್ನತ ಮಟ್ಟದವುಗಳಾಗಿದ್ದುವು. ಅವರ ತೀರ್ಪು ಸ್ಪಷ್ಟವೂ ತ್ವರಿತವಾದುದೂ ನಿರ್ಣಾಯಕವೂ ಆಗಿತ್ತು. ಅವರಿಗೆ ಯೋಚಿಸಲು ಮತ್ತು ಕೃತಿಗಿಳಿಸಲು ಸಾಕಷ್ಟು ಧೈರ್ಯ ಇತ್ತು....

"ಮುಹಮ್ಮದರ ಧರ್ಮ ಶಂಕೆಗಳಿಂದಲೂ ದ್ವಂದ್ವಾರ್ಥಗಳಿಂದಲೂ ಮುಕ್ತವಾಗಿದೆ. ಖುರ್‌ಆನ್ ಗ್ರಂಥವು ದೇವನ ಏಕತ್ವದ ಬಗ್ಗೆ ಭವ್ಯವಾಗಿ ಪ್ರತಿಪಾದಿಸುತ್ತದೆ. ಮಕ್ಕದ ಪ್ರವಾದಿ ವಿಗ್ರಹಗಳ ಮತ್ತು ಮನುಷ್ಯರ, ನಕ್ಷತ್ರಗಳ ಮತ್ತು ಗ್ರಹಗಳ ಆರಾಧನೆಯನ್ನು ತರ್ಕಬದ್ಧವಾಗಿ ತಿರಸ್ಕರಿಸಿದರು. ಯಾವುದು ಉದಿಸುವುದೋ ಅದು ಅಸ್ತಮಿಸುವುದು. ಹುಟ್ಟುವುದೆಲ್ಲವೂ ಸಾಯುವುದು. ಕೆಟ್ಟು ಹೋಗಬಹುದಾದ ವಸ್ತುಗಳು ಕೆಟ್ಟುಹೋಗಿ ನಾಶವಾಗುವುವು.....

"ಮುಹಮ್ಮದರ ನುಡಿಮುತ್ತುಗಳು ಸತ್ಯದ ಪಾಠಗಳನ್ನು ನೀಡುತ್ತವೆ. ಅವರ ಕೆಲಸಗಳು ಸುಸ್ವಭಾವಗಳ ಉದಾಹರಣೆಗಳಾಗಿವೆ.... ಅವರು ಮನಸ್ಸಾಕ್ಷಿಯ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದರು. ಅವರು ಧಾರ್ಮಿಕ ಹಿಂಸೆಯನ್ನು ನಿಷಿದ್ಧಗೊಳಿಸಿದರು.... ಮಕ್ಕದ ಜನರ ಪ್ರತಿನಿಧಿಯು ಪ್ರವಾದಿಯ ಶಿಷ್ಯರು ತಮ್ಮ ಗುರುವಿನ ಮಾತುಗಳಿಗೆ ಮತ್ತು ನೋಟಗಳಿಗೆ ನೀಡುತ್ತಿದ್ದ ಶ್ರದ್ಧೆಯನ್ನು ಗಮನಿಸಿದಾಗ ಆಶ್ಚರ್ಯಚಕಿತನಾದನು. ಪ್ರವಾದಿಯ ಉಗುಳನ್ನು ಸಂಗ್ರಹಿಸಲು, ಕೆಳಗೆ ಬಿದ್ದ ಒಂದು ತಲೆಗೂದಲನ್ನು ಎತ್ತಿಕೊಳ್ಳಲು, ನಮಾಝ್‌ಗೆ ಮೊದಲು ಮಾಡುವ ಶುದ್ಧೀಕರಣ ಕ್ರಿಯೆಯಲ್ಲಿ ಚೆಲ್ಲಲ್ಪಡುವ ನೀರನ್ನು ಸಂಗ್ರಹಿಸಲು, ಶಿಷ್ಯರು ತೋರಿಸುತ್ತಿದ್ದ ಆಸಕ್ತಿ ಅವರು ಪ್ರವಾದಿತ್ವದ ಒಂದು ಅಂಶವನ್ನು ಗಳಿಸುವರೋ ಎಂಬಂತೆ ಇತ್ತು. ಆ ಪ್ರತಿನಿಧಿ ಹೀಗೆಂದನು: 'ನಾನು ಪರ್ಶಿಯಾದ ದೊರೆ ಕಿಸ್ರಾನನ್ನೂ ರೋಮಿನ ದೊರೆ ಖೈಸರನನ್ನೂ ನೋಡಿದ್ದೇನೆ. ಆದರೆ ಯಾವುದೇ ದೊರೆಯು ತನ್ನ ಪ್ರಜೆಗಳೊಂದಿಗೆ ಮುಹಮ್ಮದರು ಅವರ ಶಿಷ್ಯರೊಂದಿಗೆ ಇದ್ದ ಹಾಗೆ ಇದ್ದುದಾಗಿ ನಾನು ಕಂಡಿಲ್ಲ.' ಭಕ್ತಿಭರಿತ ಉತ್ಸಾಹವು ದೊರೆಗಳ ದರಬಾರಿನ ತಣ್ಣಗಾದ ಮತ್ತು ಅಧಿಕೃತ ಸೇವಾ ಭಾವನೆಗಿಂತ ಹೆಚ್ಚು ಶಕ್ತಿಶಾಲಿಯಾಗಿರುತ್ತದೆ....

"ಮಕ್ಕದ ವಿಜಯದ ನಂತರ ಅಲ್ಲಿನ ಗಣ್ಯರು ಮುಹಮ್ಮದರಿಗೆ ಶಿರಬಾಗಿದರು. ಮುಹಮ್ಮದ್ ಕೇಳಿದರು: 'ನೀವು ದೌರ್ಜನ್ಯಕ್ಕೆ ಗುರಿಮಾಡಿದವನಿಂದ ಯಾವ ರೀತಿ ದಯೆಯನ್ನು ಪ್ರತೀಕ್ಷಿಸುತ್ತೀರಿ?' ಅವರು ಹೇಳಿದರು: 'ನಾವು ನಮ್ಮ ಸಂಬಂಧಿಕನ ಔದಾರ್ಯದ ಬಗ್ಗೆ ಪ್ರತೀಕ್ಷೆ ಹೊಂದಿದ್ದೇವೆ.' ಮುಹಮ್ಮದ್ ಹೇಳಿದರು: 'ನಿಮ್ಮ ಪ್ರತೀಕ್ಷೆ ವ್ಯರ್ಥವಾಗಲಾರದು. ನೀವು ಹೋಗಿರಿ. ನೀವು ಸುರಕ್ಷಿತರಾಗಿರುವಿರಿ, ನೀವು ಸ್ವತಂತ್ರರಾಗಿರುವಿರಿ'.....

"ಮುಹಮ್ಮದರ ಪತ್ನಿಯರ ಮತ್ತು ಅವರ ಶಿಷ್ಯರ ವರದಿಗಳಿಗೆ ನಾವು ಸ್ವಲ್ಪವಾದರೂ ಅಂಗೀಕಾರ ನೀಡುವುದಾದರೆ, ಮುಹಮ್ಮದರ ಕುರಿತು ಹೀಗೆ ಹೇಳಬಹುದು: ಅವರ ಕುಟುಂಬದ ಹೃದಯಗಳಲ್ಲಿ ಅವರು ತನ್ನ ಜೀವಿತದ ಕಡೆಗಾಲದ ತನಕ ಪ್ರವಾದಿಯ ಗೌರವವನ್ನೂ ಉತ್ಸಾಹಿಯಾದೊಬ್ಬನ ವಿಶ್ವಾಸವನ್ನೂ ಕಾಪಾಡಿದ್ದರು... ಮುಹಮ್ಮದರ ಉತ್ತಮ ಗುಣಸ್ವಭಾವಗಳು ದೊರೆತನದ ಆಡಂಬರವನ್ನು ತಿರಸ್ಕರಿಸಿತು. ದೇವನ ಪ್ರವಾದಿ ಮನೆಗೆಲಸ ಮಾಡುತ್ತಿದ್ದರು. ಅವರು ಒಲೆ ಹೊತ್ತಿಸುತ್ತಿದ್ದರು. ನೆಲವನ್ನು ಗುಡಿಸುತ್ತಿದ್ದರು. ಆಡುಗಳ ಹಾಲನ್ನು ಹಿಂಡುತ್ತಿದ್ದರು, ಅವರು ತನ್ನ ಪಾದರಕ್ಷೆಗಳನ್ನೂ ಉಣ್ಣೆಬಟ್ಟೆಗಳನ್ನೂ ತನ್ನ ಕೈಗಳಿಂದಲೇ ದುರಸ್ತಿ ಮಾಡುತ್ತಿದ್ದರು.

"ವಿರಕ್ತನ ದೇಹದಂಡನೆಯನ್ನೂ ವಿರಕ್ತಿಯನ್ನೂ ತಿರಸ್ಕರಿಸಿದ ಅವರು ಆಡಂಬರ ರಹಿತರಾಗಿ ಒಬ್ಬ ಅರಬಿಯ ಮತ್ತು ಸೈನಿಕನ ಮಿತಾಹಾರವನ್ನು ಸೇವಿಸುತ್ತಿದ್ದರು. ವಿಶೇಷ ಸಂದರ್ಭಗಳಲ್ಲಿ ಅವರು ತನ್ನ ಶಿಷ್ಯರಿಗೆ ಧಾರಾಳವಾಗಿ ಊಟ ನೀಡುತ್ತಿದ್ದರು. ಆದರೆ ಅವರ ಮನೆಯ ಕಡೆಗೆ ನೋಡುವುದಾದರೆ, ಒಲೆ ಹೊತ್ತಿಸದೆ ಅನೇಕ ವಾರಗಳು ದಾಟಿಹೋಗುತ್ತಿದ್ದುವು....

"ಇಸ್ಲಾಮ್ ಧರ್ಮದ ಪ್ರಚಾರದ ಬಗ್ಗೆಯಲ್ಲ, ಅದು ಸ್ಥಿರವಾಗಿ ಸ್ಥಾಪಿತವಾದುದರ ಬಗ್ಗೆ ನಾವು ಆಶ್ಚರ್ಯಪಡಬೇಕಾಗಿದೆ. ಮಕ್ಕ ಮತ್ತು ಮದೀನದಲ್ಲಿ ಮುಹಮ್ಮದರು ಅಚ್ಚೊತ್ತಿದ್ದ ಶುದ್ಧ ಮತ್ತು ಪರಿಪೂರ್ಣವಾದ ಮುದ್ರೆ ಹನ್ನೆರಡು ಶತಮಾನಗಳ ಕ್ರಾಂತಿಗಳ ನಂತರವೂ ಹಿಂದೂಸ್ತಾನದ, ಆಫ್ರಿಕದ ಮತ್ತು ಟರ್ಕಿಸ್ತಾನದ ಮತಾಂತರಗೊಂಡ ಖುರ್‌ಆನಿನ ಅಭಿಮಾನಿಗಳಿಂದ ಸಂರಕ್ಷಿಸಲ್ಪಟ್ಟಿದೆ. ಕ್ರೈಸ್ತ ಸುವಾರ್ತೆಗಾರರಾದ ಸಂತ ಪೀಟರ್ ಅಥವಾ ಸಂತ ಪೌಲ್ ವ್ಯಾಟಿಕನ್‌ಗೆ ಭೇಟಿ ನೀಡಲು ಸಾಧ್ಯವಿರುವುದಾದರೆ ಅಲ್ಲಿ ಭವ್ಯ ದೇವಾಲಯದಲ್ಲಿ ನಿಗೂಢ ಆರಾಧನಾ ವಿಧಿಗಳಿಂದ ಆರಾಧಿಸಲ್ಪಡುವ ಆರಾಧ್ಯ ಮೂರ್ತಿ ಯಾರೆಂದು ಪ್ರಶ್ನಿಸಬಹುದಾಗಿದೆ.... ಆದರೆ ಸೈಂಟ್ ಸೋಫಿಯದಲ್ಲಿರುವ ಟರ್ಕಿಶ್ ಮಸ್‌ಜಿದಿನ ಗುಮ್ಮಟವು ಗಾತ್ರದಲ್ಲಿಯೂ ವೈಭವದಲ್ಲಿಯೂ ಹಿರಿದಾಗಿದ್ದರೂ ಅದು ಮದೀನದಲ್ಲಿ ಮುಹಮ್ಮದರ ಕೈಗಳಿಂದ ನಿರ್ಮಿಸಲ್ಪಟ್ಟ ಕಿರಿದಾದ ಮಸ್‌ಜಿದನ್ನು ಪ್ರತಿನಿಧಿಸುತ್ತದೆ. ಮುಸ್ಲಿಮರು ತಮ್ಮ ಆರಾಧನೆಯ ಬಿಂಬವಾಗಿ ಯಾವುದಾದರೂ ಮೂರ್ತ ವಸ್ತುವನ್ನು ಸ್ಥಾಪಿಸುವ ಪ್ರೇರಣೆಯನ್ನು ತಿರಸ್ಕರಿಸಿದ್ದಾರೆ. 'ನಾನು ಏಕದೇವನನ್ನು ನಂಬುತ್ತೇನೆ. ಮುಹಮ್ಮದ್ ಅವನ ಸಂದೇಶವಾಹಕ' ಎಂಬುದು ಸರಳವೂ ಬದಲಾಯಿಸಲ್ಪಡದ್ದೂ ಆಗಿರುವ ಮುಸ್ಲಿಮರ ವಿಶ್ವಾಸವಾಗಿದೆ.... ಅಟ್ಲಾಂಟಿಕ್ ಸಾಗರದಿಂದ ಗಂಗಾನದಿ ತನಕ ಖುರ್‌ಆನನ್ನು ಮೂಲಭೂತ ನಿಯಮವೆಂದು ಅಂಗೀಕರಿಸಲಾಗುತ್ತಿದೆ. ಅದು ಧರ್ಮಶಾಸ್ತ್ರಕ್ಕೆ ಸಂಬಂಧಿಸಿ ಮಾತ್ರವಲ್ಲ, ಸಿವಿಲ್ ಮತ್ತು ಕ್ರಿಮಿನಲ್ ವಿಷಯಗಳಿಗೆ ಸಂಬಂಧಿಸಿದ ನಿಯಮಗಳನ್ನು ಒಳಗೊಂಡಿದೆ. ಅದರಲ್ಲಿರುವ ನಿಯಮಗಳು ಜನರ ಕೆಲಸಗಳನ್ನು ಮತ್ತು ಸ್ವತ್ತನ್ನು ನಿಯಂತ್ರಿಸುತ್ತವೆ. ಅವು ದೇವನ ಎಂದೂ ತಪ್ಪುಮಾಡದ ಮತ್ತು ಬದಲಾಯಿಸಲ್ಪಡದ ಇಚ್ಛೆಗೆ ಅನುಸಾರವಾಗಿವೆ ಎಂದು ನಂಬಲಾಗುತ್ತಿದೆ.... "ಮುಹಮ್ಮದ್ ಪ್ರಾಮಾಣಿಕವಾಗಿ ಹೀಗೆ ನಂಬಿದ್ದರು: ತನ್ನ ಧರ್ಮದ ಮೂಲಾಧಾರವು ತನಗಿಂತ ಮೊದಲು ಆಗಮಿಸಿದ ಪ್ರವಾದಿಗಳಿಗೆ ಅವತೀರ್ಣವಾದ ಸತ್ಯವಾದ ದೇವವಾಣಿಗಳೆಂದು. ಆ ಪ್ರವಾದಿಗಳ ಉನ್ನತ ಸ್ವಭಾವ ಗುಣಗಳನ್ನೂ ಅವರು ತೋರಿಸಿದ ಪವಾಡಗಳನ್ನೂ ಅಂಗೀಕರಿಸಲಾಗಿತ್ತು.... ಅವರು ತನ್ನ ಅನುಯಾಯಿಗಳಲ್ಲಿ ದಾನ ಧರ್ಮಗಳನ್ನು ನೀಡುವ ಗುಣವನ್ನೂ ಸ್ನೇಹ ಸಂಬಂಧವನ್ನೂ ಪ್ರೋತ್ಸಾಹಿಸಿದ್ದರು. ಅವರು ಸಾಮಾಜಿಕ ಸದ್ಗುಣಗಳನ್ನು ಉಪದೇಶಿಸಿದ್ದರು. ಅವರು ಸೇಡಿನ ದಾಹವನ್ನು ಮತ್ತು ವಿಧವೆಯರಿಗೂ ಅನಾಥರಿಗೂ ಹಿಂಸೆ ನೀಡುವುದನ್ನು ತಾನು ಜಾರಿಗೊಳಿಸಿದ ನಿಯಮಗಳ ಮತ್ತು ಉಪದೇಶಗಳ ಮೂಲಕ ತಡೆಗಟ್ಟಿದ್ದರು."

**(Gibbon, Edward: The History of the Decline and Fall of the Roman Empire, Chapter 1. J.M. Dent & Sons Ltd., 1931, pp. 207-92)**

**ಡಬ್ಲ್ಯೂ. ಡಬ್ಲ್ಯೂ. ಹಂಟರ್**

"ಇಸ್ಲಾಮ್ ದೇವನ ಬಗ್ಗೆ ಉನ್ನತ ಕಲ್ಪನೆಯನ್ನು ಮತ್ತು ಮಾನವರು ಸಹೋದರರು ಎಂಬ ಭವ್ಯ ತತ್ವವನ್ನು ಪ್ರತಿಪಾದಿಸಿತು."

**(The Times, London, 25-2-1888)**

*~*~*~*~*~*

**ಮುರ್ರೇ ಟಿ. ಟೈಟಸ್**

"ರಾಜಕುಮಾರನೂ ಕಸಗುಡಿಸುವವನೂ ಒಂದೇ ಸಾಲಿನಲ್ಲಿ ನಿಂತು ಮಸ್‌ಜಿದ್‌ನಲ್ಲಿ ಆರಾಧಿಸಲು ಇಸ್ಲಾಮ್ ಧರ್ಮವು ಅನುಮತಿಸುತ್ತದೆ."

**(Titus, Murray T.: Indian Islam, Munshiram Manoharlal, Publishers Private Ltd., New Delhi, India 1958, p. 51)**

*~*~*~*~*~*

**ಲೋರ ವೇಕ್ಯ ವಾಗ್ಲಿಯೇರಿ**

"ನಾವು ಮುಹಮ್ಮದರ ಭವಿಷ್ಯವಾಣಿಗಳ ಕಡೆಗೆ ನೋಡುವುದಾದರೆ ಅಥವಾ ಪ್ರಥಮ ಮುಸ್ಲಿಮ್ ಜಯಗಳ ಬಗ್ಗೆ ನೋಡುವುದಾದರೆ, ಇಸ್ಲಾಮ್ ಖಡ್ಗಬಲದಿಂದ ಹೇರಲಾಯಿತೆಂದು ಆರೋಪಿಸುವುದು ಮತ್ತು ಇಸ್ಲಾಮಿನ ವಿಸ್ತೃತ ಮತ್ತು ವೇಗವಾದ ಹಬ್ಬುವಿಕೆಗೆ ಇದೇ ಕಾರಣವೆಂದು ಹೇಳುವುದು ಸುಳ್ಳಾಗಿದೆ ಎಂದು ಸ್ಪಷ್ಟವಾಗುತ್ತದೆ. ಖುರ್‌ಆನ್ ಹೀಗೆ ಹೇಳುತ್ತದೆ: 'ಧರ್ಮದ ವಿಷಯದಲ್ಲಿ ಯಾವ ಬಲಾತ್ಕಾರವೂ ಇಲ್ಲ.' ಕ್ರೂರ ನಡೆವಳಿಕೆಯ ಆರೋಪದ ಬಗ್ಗೆ ಉತ್ತರ ನೀಡುವುದು ಸುಲಭವಾಗಿದೆ. ಮುಹಮ್ಮದರು ಒಂದು ದೇಶದ ಮುಖ್ಯ ಆಡಳಿತೆಗಾರನಾಗಿ ತನ್ನ ದೇಶದ ಜನರ ಜೀವರಕ್ಷಣೆಯ ಮತ್ತು ಸ್ವಾತಂತ್ರ್ಯ ರಕ್ಷಣೆಯ ಹೊಣೆಗಾರಿಕೆಯನ್ನು ಹೊಂದಿದ್ದರು. ಅವರು ನ್ಯಾಯದಾನ ಮಾಡುವಾಗ ಅಪರಾಧಿಗಳಾದ ವ್ಯಕ್ತಿಗಳನ್ನು ಕಠಿಣವಾಗಿ ಶಿಕ್ಷಿಸಿದರು.. ಆದರೆ ಮುಹಮ್ಮದರು ದೇವನ ಧರ್ಮದ ಉಪದೇಶಕನೆಂಬ ನೆಲೆಯಲ್ಲಿ ತನ್ನ ವೈಯಕ್ತಿಕ ಶತ್ರುಗಳೊಂದಿಗೆ ಕೂಡ ಮೃದುವಾಗಿ ಮತ್ತು ದಯೆಯಿಂದ ವರ್ತಿಸುತ್ತಿದ್ದರು. ಮಾನವರ ಮನಸ್ಸು ಕಲ್ಪಿಸಬಹುದಾದ ಎರಡು ಶ್ರೇಷ್ಠ ಗುಣಗಳಾದ ನ್ಯಾಯಪಾಲನೆ ಮತ್ತು ದಯೆದೋರುವಿಕೆ ಅವರಲ್ಲಿ ಅಡಕವಾಗಿದ್ದವು.... ಇಸ್ಲಾಮಿನ ಶತ್ರುಗಳು ಮುಹಮ್ಮದರನ್ನು ಇಂದ್ರಿಯಾಸಕ್ತನಾದ ನೀತಿಗೆಟ್ಟ ಮನುಷ್ಯನೆಂದು ಚಿತ್ರಿಸುತ್ತಾ ಅದಕ್ಕೆ ಸಾಕ್ಷ್ಯವನ್ನು ಅವರ ಮದುವೆಗಳಲ್ಲಿ ಕಂಡುಹಿಡಿಯಲು ಪ್ರಯತ್ನಿಸಿ ಅವರು ತನ್ನ ಪ್ರವಾದಿತ್ವ ವಾದಕ್ಕೆ ಸರಿಹೊಂದದ ಬಲಹೀನ ಸ್ವಭಾವಗುಣಗಳನ್ನು ಹೊಂದಿದ್ದರೆಂದು ವಾದಿಸುತ್ತಾರೆ. ಇಂತಹ ಜನರು ವಾಸ್ತವಿಕವಾದ ಒಂದು ವಿಷಯವನ್ನು ಪರಿಗಣಿಸಲು ನಿರಾಕರಿಸುತ್ತಾರೆ. ಮುಹಮ್ಮದರು ಜೀವಿಸಿದ ಅರಬ್ ದೇಶದ ಸಮಾಜದಲ್ಲಿ ಮದುವೆ ಎಂಬುದು ಹೆಸರಿಗೆ ಮಾತ್ರ ಇತ್ತು. ಅಲ್ಲಿ ಬಹುಭಾರ್ಯತ್ವವು ವಿಶೇಷವಾಗಿ ಜಾರಿಯಲ್ಲಿತ್ತು. ವಿವಾಹ ವಿಚ್ಛೇದನೆಯು ಬಹಳ ಸುಲಭವಾಗಿತ್ತು. ಇಂತಹ ಸಮಾಜದಲ್ಲಿ ಅವರ ಲೈಂಗಿಕ ಆಸಕ್ತಿ ನೈಸರ್ಗಿಕವಾಗಿ ಬಲಿಷ್ಠವಾಗಿದ್ದ ಅವರ ಯೌವ್ವನದ ಕಾಲದಲ್ಲಿ ಅವರು ಖದೀಜ ಎಂಬ ಅವರಿಗಿಂತ ಹೆಚ್ಚು ಪ್ರಾಯದ ವಿಧವೆಯನ್ನು ಮದುವೆಯಾಗಿ ಅನಂತರ ಆಕೆ ಜೀವಿಸಿದ್ದ ಇಪ್ಪತ್ತೈದು ವರ್ಷಗಳ ಕಾಲದಲ್ಲಿ ಪ್ರಾಮಾಣಿಕನೂ ಪ್ರೀತಿಸುವವನೂ ಆಗಿರುವ ಪತಿಯಾಗಿ ಜೀವಿಸಿದರು. ಆ ಮಹಿಳೆ ಮೃತಳಾದ ನಂತರ ಅವರು ಐವತ್ತು ವರ್ಷದ ಪ್ರಾಯದಲ್ಲಿ ಒಂದಕ್ಕಿಂತ ಹೆಚ್ಚು ಮದುವೆಗಳನ್ನು ಮಾಡಿದರು. ಅವರು ಮಾಡಿದ ಪ್ರತಿಯೊಂದು ಮದುವೆಗೆ ಸಾಮಾಜಿಕ ಅಥವಾ ರಾಜಕೀಯ ಕಾರಣಗಳಿದ್ದುವು. ಅವರು ಮದುವೆಯಾಗುವ ಮೂಲಕ ಭಕ್ತೆಯರಾದ ಮಹಿಳೆಯರಿಗೆ ಗೌರವ ನೀಡಲು ಉದ್ದೇಶಿಸಿದರು. ಅವರು ಬೇರೆ ಗೋತ್ರಗಳೊಂದಿಗೆ ವಿವಾಹ ಸಂಬಂಧ ಸ್ಥಾಪಿಸಿ ಆ ಗೋತ್ರಗಳಲ್ಲಿ ಇಸ್ಲಾಮಿನ ಪ್ರಚಾರದ ಮಾರ್ಗವನ್ನು ತೆರೆಯಲು ಬಯಸಿದರು. ಆಯಿಶಾರವರನ್ನು ಹೊರತುಪಡಿಸಿ ಅವರು ಮದುವೆಯಾದ ಇತರ ಮಹಿಳೆಯರು ಕನ್ಯೆಯರೋ ಯುವತಿಯರೋ ಸುಂದರಿಯರೋ ಆಗಿರಲಿಲ್ಲ. ಇದು ವಿಷಯ ಲೋಲುಪತೆಯೋ?"

**(Vaglieri, Laura Veccia: An Interpretation of Islam, Volume III, Chapter 30, The American Fazl Mosque, 1958, pp. 24-68)**

(**AHMADIYYA GAZETTE CANADA-February** 2009ರ ಸಂಚಿಕೆಯಿಂದ)

**ಭಾಷಾಂತರ: ಎಮ್. ಉಬೈದುಲ್ಲಾ**

# ಸಾಮಾಜಿಕ ಶಾಂತಿ

♦ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಂ ಜಮಾಅತಿನ ನಾಲ್ಕನೇ ಖಲೀಫ

## ಬಹುಭಾರ್ಯತ್ವ

ಪಶ್ಚಿಮ ದೇಶಗಳಲ್ಲಿ ಇಸ್ಲಾಮ್ ಬಗ್ಗೆ ಭಾಷಣ ಮಾಡುವವನನ್ನು ಸಾಮಾನ್ಯ ಕೇಳುವ ಪ್ರಶ್ನೆ ಹೀಗಿರುತ್ತದೆ: ಇಸ್ಲಾಮ್ ನಾಲ್ಕು ಸಾರಿ ಮದುವೆಯಾಗಲು ಮತ್ತು ನಾಲ್ಕು ಪತ್ನಿಯರನ್ನು ಒಂದೇ ಸಮಯದಲ್ಲಿ ಇಟ್ಟುಕೊಳ್ಳಲು ಅನುಮತಿಸುತ್ತಿದೆಯೋ? ಪಶ್ಚಿಮದ ದೇಶಗಳಲ್ಲಿ ಸಾರ್ವಜನಿಕ ಸಭೆಗಳನ್ನೂ ಆಯ್ಕೆ ಮಾಡಿದ ಸಭಿಕರನ್ನೂ ಸಂಬೋಧಿಸಲು ನನಗೆ ಸಂದರ್ಭ ಲಭಿಸಿದೆ. ಈ ಪ್ರಶ್ನೆ ಕೇಳಿರದ ಒಂದು ಸಂದರ್ಭವೂ ನನಗೆ ನೆನಪಿಲ್ಲ.

ಕೆಲವು ಸಾರಿ ಒಬ್ಬ ಮಹಿಳೆ ಎದ್ದು ನಿಂತು ಕ್ಷಮೆ ಕೇಳಿ ನಿಷ್ಕಳಂಕ ರೂಪದಲ್ಲಿ ಕೇಳುತ್ತಾಳೆ – ಇಸ್ಲಾಮ್ ನಾಲ್ಕು ಪತ್ನಿಯರನ್ನು ಹೊಂದಲು ಅನುಮತಿಸುತ್ತಿದೆಯೋ ಇಲ್ಲವೋ? ಎಂದು. ಆದರೆ ಪ್ರಶ್ನೆಗೆ ಉತ್ತರ ಎಲ್ಲರಿಗೂ ತಿಳಿದಿರುತ್ತದೆ. ಪ್ರಾಯಶಃ ಇಸ್ಲಾಮಿಗೆ ಸಂಬಂಧಿಸಿ ಈ ವಿಷಯ ಮಾತ್ರ ಪಶ್ಚಿಮದಲ್ಲಿ ಚೆನ್ನಾಗಿ ತಿಳಿದಿದೆ. ಇನ್ನೊಂದು ವಿಷಯ ಭೀಕರವಾದವಾಗಿದೆ. ಆದರೆ ಭೀಕರವಾದಕ್ಕೆ ಇಸ್ಲಾಮಿನೊಂದಿಗೆ ಯಾವ ಸಂಬಂಧವೂ ಇಲ್ಲ.*

ಇನ್ನೊಂದು ರೀತಿ ಇದೇ ಪ್ರಶ್ನೆಯನ್ನು ಹೀಗೆ ಕೇಳುತ್ತಾರೆ: ಪುರುಷನಿಗೆ ನಾಲ್ಕು ಪತ್ನಿಯರು ಮತ್ತು ಮಹಿಳೆಗೆ ಒಬ್ಬ ಪತಿಯನ್ನು ಅನುಮತಿಸುವ ಇಸ್ಲಾಮ್ ಪುರುಷ ಮತ್ತು ಮಹಿಳೆ ಮಧ್ಯೆ ಇರುವುದೆಂದು ಹೇಳುವ ಸಮತ್ವ ಯಾವ ರೀತಿಯದು? ಭಾಷಣ ಮಾಡಿದವರು ಇಸ್ಲಾಮಿನ ಬಗ್ಗೆ ಜನರಲ್ಲಿ ಯಾವುದಾದರೂ ಒಳ್ಳೆಯ ಪ್ರಭಾವ ಉಂಟುಮಾಡಿದ್ದರೆ ಅದನ್ನು ಅಳಿಸಿಬಿಡಲು ಈ ಪ್ರಶ್ನೆ ಕೇಳುತ್ತಾರೆ. ಬೇರೆ ಕೆಲವು ಸಭೆಗಳಲ್ಲಿ ಶಿಷ್ಟಾಚಾರ ರಹಿತವಾಗಿ ಪ್ರಶ್ನೆಯು ಪರಿಹಾಸದ ರೂಪದಲ್ಲಿರುತ್ತದೆ.

ಹಲವು ದಶಕಗಳ ಹಿಂದೆ ನಾನು SOAS (ಸ್ಕೂಲ್ ಆಫ್ ಓರಿಯಂಟಲ್ ಆ್ಯಂಡ್ ಆಫ್ರಿಕನ್ ಸ್ಟಡೀಸ್), ಲಂಡನ್ ಯುನಿವರ್ಸಿಟಿ ವಿದ್ಯಾರ್ಥಿಯಾಗಿದ್ದಾಗ ಒಬ್ಬ ಪಾಕಿಸ್ತಾನಿ ವಿದ್ಯಾರ್ಥಿಯನ್ನು ಒಬ್ಬ ಇಂಗ್ಲಿಷ್ ವಿದ್ಯಾರ್ಥಿ ಈ ಪ್ರಶ್ನೆಯನ್ನು ಪದೇ ಪದೇ ಕೇಳಿ ಪೀಡಿಸುತ್ತಿದ್ದನು. ಆಗ ಎಲ್ಲರೂ ನಗುತ್ತಿದ್ದರು. ಒಂದು ಸಾರಿ ಆ ಪಾಕಿಸ್ತಾನಿ ವಿದ್ಯಾರ್ಥಿ ತುಂಬಾ ಕೋಪಗೊಂಡು ಹೇಳಿದನು: ನಿಮಗೆ fore fathers ಬಗ್ಗೆ ಆಕ್ಷೇಪ ಇಲ್ಲದಿರುವಾಗ ನಮಗೆ ನಾಲ್ಕು ತಾಯಂದಿರಿರುವ ಬಗ್ಗೆ ಏಕೆ ಆಕ್ಷೇಪಿಸುತ್ತಿರುವಿರಿ. ಅವನು fore ಎಂಬ ಪದವನ್ನು four (ನಾಲ್ಕು) ಎಂದು ಉಚ್ಚರಿಸಿ ದ್ವಯಾರ್ಥ ಪ್ರಯೋಗ ನಡೆಸಿದ್ದನು. ಆ ಮೂಲಕ ಅವನು ಪ್ರಶ್ನೆ ಕೇಳುವವನನ್ನು ನಿರುತ್ತರನನ್ನಾಗಿ ಮಾಡಿದನು.

ಪಾಕಿಸ್ತಾನಿ ವಿದ್ಯಾರ್ಥಿ ತಮಾಷೆಗಾಗಿ ಹೇಳಿದ್ದರೂ ಅದು ಹಿಂದಿನ ಕಾಲದ ಸಮಾಜದಲ್ಲಿದ್ದ ದಾರುಣ ಸ್ಥಿತಿಯನ್ನು ಸೂಚಿಸುತ್ತದೆ. ಇಸ್ಲಾಮಿನ ನಿಲುವು ಇಂದಿನ ಸಮಾಜದೊಂದಿಗೆ ಹೋಲಿಸಿ ನೋಡಲು ಯೋಗ್ಯ ವಿಷಯವನ್ನು ಒದಗಿಸುತ್ತದೆ. ಜವಾಬ್ದಾರಿ ರಹಿತ ವಿದ್ಯಾರ್ಥಿಗಳು ಮಾತ್ರವಲ್ಲ ಗೌರವಾನ್ವಿತ ವ್ಯಕ್ತಿಗಳು ಸಹ ಇಸ್ಲಾಮಿನ ಈ ಆಜ್ಞೆಯನ್ನು ಅಪಹಾಸ್ಯ ಮಾಡುತ್ತಾರೆ.

ಸ್ವಲ್ಪ ಸಮಯದ ಹಿಂದೆ ಫ್ರಾಂಕ್‌ಫರ್ಟ್‌ನಿಂದ ಒಬ್ಬ ಹಿರಿಯ ನ್ಯಾಯಾಧೀಶರಿಂದ ಒಂದು ಪತ್ರ ನನಗೆ ಬಂತು. ನಾನು ಅವರನ್ನು ವೈಯಕ್ತಿಕವಾಗಿ ಬಲ್ಲೆನು. ಅವರು ಬುದ್ಧಿಶಾಲಿಗಳೂ ವಿಶಾಲ ಮನೋಭಾವದವರೂ ಆಗಿದ್ದರು. ಅವರು ಸಹ ಇಸ್ಲಾಮಿನ ಬಹುಭಾರ್ಯತ್ವದ ಉಪದೇಶದ ಬಗ್ಗೆ ಒಂದು ನಗೆಹನಿ ಮೂಲಕ ಅಭಿಪ್ರಾಯ ಸೂಚಿಸಿದ್ದರು. ನಾನು ಅದಕ್ಕೆ ಇನ್ನೊಂದು ನಗೆಹನಿ ಮೂಲಕ ಉತ್ತರ ನೀಡಲು ಒಂದು ಕ್ಷಣಕಾಲ ಯೋಚಿಸಿದೆ. ಆದರೆ ನಾನು ಇನ್ನಷ್ಟು ಯೋಚಿಸಿ ಹಾಗೆ ಉತ್ತರ ನೀಡಲಿಲ್ಲ.

ನಾನು ನೀಡಿದ ಸಂಕ್ಷಿಪ್ತ ಉತ್ತರ ಹೀಗಿತ್ತು: ಇಸ್ಲಾಮಿನ ಈ ಆಜ್ಞೆ ಎಲ್ಲರಿಗೂ ಅನ್ವಯಿಸುವಂತಹದಲ್ಲ. ಕೆಲವೊಂದು ವಿಶಿಷ್ಟ ಕಾಲದಲ್ಲಿ ಸಮಾಜದ ಆರೋಗ್ಯವನ್ನೂ ಮಹಿಳೆಯರ ಹಕ್ಕುಗಳನ್ನೂ ಕಾಪಾಡಲು ಈ ಆಜ್ಞೆ ನೀಡಲಾಗಿದೆ.

ಪವಿತ್ರ ಖುರ್‌ಆನ್ ತರ್ಕಬದ್ಧ ಆಜ್ಞೆಗಳನ್ನು ನೀಡುವ ಗ್ರಂಥವಾಗಿದೆ. ಅಸಾಧ್ಯವಾದುದನ್ನು ಮಾಡಲು ಇಸ್ಲಾಮ್ ಎಂದೂ ಆಜ್ಞಾಪಿಸಲಾರದು. ದೇವನು ಲೋಕದಲ್ಲಿ ಪುರುಷರನ್ನೂ ಮಹಿಳೆಯರನ್ನೂ ಸಾಮಾನ್ಯವಾಗಿ ಸಮಾನ ಸಂಖ್ಯೆಯಲ್ಲಿ ಸೃಷ್ಟಿಸಿರುವನು. ಕೆಲವು ಕಡೆಗಳಲ್ಲಿ ಮಾತ್ರ ಪುರುಷರು ಮತ್ತು ಮಹಿಳೆಯರು ಹೆಚ್ಚು ಕಡಿಮೆ ಸಂಖ್ಯೆಯಲ್ಲಿರಬಹುದು. ವಿಚಾರಬದ್ಧ ಧರ್ಮವಾದ ಇಸ್ಲಾಮ್ ದೇವನ ಕೆಲಸ ಮತ್ತು ದೇವನ ವಚನ ಮಧ್ಯೆ ಯಾವ ಅಸಮಂಜತೆಯೂ ಇಲ್ಲ ಎಂದು ಘೋಷಿಸುವಾಗ ಸ್ಪಷ್ಟವಾಗಿ ಅಸಾಮಾನ್ಯವೂ ಅವಾಸ್ತವಿಕವೂ ಆದ ಆಜ್ಞೆ ನೀಡಲು ಹೇಗೆ ತಾನೆ ಸಾಧ್ಯ? ಇದರಂತೆ ಮಾಡಲು ಪ್ರಯತ್ನಿಸಿದರೆ ಸಮಾಜದಲ್ಲಿ ಪರಿಹರಿಸಲು ಸಾಧ್ಯವಿಲ್ಲದ ಕಷ್ಟಗಳು, ನಿರಾಶೆಗಳು ಉಂಟಾಗುವುವು. ಉದಾಹರಣೆಗೆ, ಒಂದು ಚಿಕ್ಕ ದೇಶದಲ್ಲಿ ಹತ್ತು ಲಕ್ಷ ವಿವಾಹ ಪ್ರಾಯದ ಯುವಕರಿದ್ದಾರೆಂದು ಊಹಿಸಿರಿ. ಅಲ್ಲಿ ಹತ್ತು ಲಕ್ಷ ವಿವಾಹ ಪ್ರಾಯದ ತರುಣಿಯರೂ ಇರಬಹುದು. ಅಲ್ಲಿರುವ ಯುವಕರು ನಾಲ್ಕು ಮಹಿಳೆಯರನ್ನು ವಿವಾಹವಾಗಲು ಪ್ರಾರಂಭಿಸಿದರೆ ಕೇವಲ ಎರಡು ಲಕ್ಷದ ಐವತ್ತು ಸಾವಿರ ಯುವಕರು ಮಾತ್ರ ವಿವಾಹವಾಗಬಲ್ಲರು. ಉಳಿದ ಏಳು ಲಕ್ಷದ ಐವತ್ತು ಸಾವಿರ ಯುವಕರಿಗೆ ವಿವಾಹವಾಗಲು ಸಾಧ್ಯವಾಗದು. ಇಂತ ಪರಿಸ್ಥಿತಿಯನ್ನು ಇಸ್ಲಾಮ್ ಅನುಮತಿಸಲಾರದು.

ಲೋಕದ ಧರ್ಮಗಳಲ್ಲಿ ಇಸ್ಲಾಮ್ ಮಾತ್ರ ಪ್ರತಿಯೊಬ್ಬ ಪುರುಷ ಮತ್ತು ಮಹಿಳೆ ವಿವಾಹವಾಗಬೇಕೆಂದು ಒತ್ತಿ ಹೇಳುತ್ತದೆ. ಪವಿತ್ರ ಖುರ್‌ಆನ್ ಪತ್ನಿ ಮತ್ತು ಪತಿ ಸಂಬಂಧ ಪರಸ್ಪರ ಪ್ರೇಮದ ಮೇಲೆ ಪ್ರಕೃತಿ ಸ್ಥಾಪಿಸಿದೆಯೆಂದೂ ಅದು ಪರಸ್ಪರರಿಗೆ ನೆಮ್ಮದಿದಾಯಕವೆಂದೂ ಹೇಳಿದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ನೋಡಿರಿ.

* ಇದೇ ಲೇಖಕರು ಬರೆದ "ಧರ್ಮದ ನಾಮದಲ್ಲಿ ರಕ್ತಪಾತ" ಓದಿರಿ.

**“ಸತ್ಯವಿಶ್ವಾಸಿಗಳಾದ ಚಾರಿತ್ರ್ಯವತಿಯರೂ ನಿಮಗಿಂತ ಮುಂಚೆ ಗ್ರಂಥ ನೀಡಲ್ಪಟ್ಟವರ ಪೈಕಿ ಚಾರಿತ್ರ್ಯವತಿಯರೂ ಅವರ ವಿವಾಹ ಧನವನ್ನು ನೀವು ಅವರಿಗೆ ನೀಡುವಿರಾದರೆ (ವಿವಾಹ ಮಾಡಿಕೊಳ್ಳುವುದು ನಿಮಗೆ ಅನುಮತಿಸಲ್ಪಟ್ಟಿದೆ) ಚಾರಿತ್ರ್ಯವಂತರಾಗಿದ್ದುಕೊಂಡು, ವ್ಯಭಿಚಾರ ಅಥವಾ ಗುಪ್ತ ಅನೈತಿಕ ಸಂಬಂಧವಿರಿಸಿಕೊಂಡವರಾಗದೆ ಇದ್ದರೆ.”** (5:6).

ಪವಿತ್ರ ಖುರ್‌ಆನ್ ಸನ್ಯಾಸವನ್ನು ತಿರಸ್ಕರಿಸಿ ಅದು ಮನುಷ್ಯರೇ ಸ್ಥಾಪಿಸಿದ ವ್ಯವಸ್ಥೆ ಎಂದು ಈ ಕೆಳಗಿನ ವಚನದಲ್ಲಿ ಹೇಳಿದೆ:

**“ಆದರೆ ಅವರೇ ಹೊಸದಾಗಿ ಆಚರಣೆಗೆ ತಂದ ಸನ್ಯಾಸವನ್ನು ನಾವು ಅವರಿಗೆ ಆಜ್ಞಾಪಿಸಿರಲಿಲ್ಲ.” (57:28).**

ತನ್ನನ್ನು ಲೋಕದಿಂದ ದೂರವಿರಿಸಿಕೊಳ್ಳುವುದರಿಂದ ಅಥವಾ ತನ್ನ ಸಹಜ ಆಶೆಗಳನ್ನು ಹತ್ತಿಕ್ಕುವುದರಿಂದ ಯಾವ ಪ್ರಯೋಜನವೂ ಲಭಿಸಲಾರದು. ವಿವಾಹ ಸಂಪ್ರದಾಯವು ಇಸ್ಲಾಮಿನಲ್ಲಿ ಚೆನ್ನಾಗಿ ಸ್ಥಾಪಿಸಲ್ಪಟ್ಟಿದೆ. ವಿವಾಹಕ್ಕೆ ವಧುವರರನ್ನು ಹೇಗೆ ಆಯ್ಕೆ ಮಾಡಬೇಕು, ಅದಕ್ಕಿರುವ ಪರಿಹಾರ ಮಾರ್ಗಗಳು, ವಿವಾಹ ವಿಚ್ಛೇದನೆ ಮೊದಲಾದುವುಗಳ ಬಗ್ಗೆ ವಿವರಿಸಲು ಈಗ ಸಮಯವಿಲ್ಲ.

ಬಹುಭಾರ್ಯತ್ವದ ಬಗ್ಗೆ ಹೇಳುವುದಾದರೆ, ಪವಿತ್ರ ಖುರ್‌ಆನ್ ಅಧ್ಯಯನ ಮಾಡಿದರೆ, ಯುದ್ಧ ಸಂಭವಿಸಿದ ನಂತರದ ವಿಶಿಷ್ಟ ಸನ್ನಿವೇಶಕ್ಕೆ ಸಂಬಂಧಿಸಿ ಅದರ ಬಗ್ಗೆ ಆಜ್ಞೆ ನೀಡಲಾಗಿದೆ ಎಂದು ತಿಳಿಯುತ್ತದೆ. ಆಗ ಬಹಳ ಸಂಖ್ಯೆಯಲ್ಲಿ ಅನಾಥ ಮಕ್ಕಳೂ ತರುಣಿಯರಾದ ವಿಧವೆಯರೂ ಇದ್ದು ಸಮಾಜದ ಸಮತೋಲನಾವಸ್ಥೆಗೆ ಭಂಗ ಉಂಟಾಗಿತ್ತು. ದ್ವಿತೀಯ ಮಹಾಯುದ್ಧದ ನಂತರ ಜರ್ಮನಿಯಲ್ಲಿ ಇಂತಹ ಪರಿಸ್ಥಿತಿ ಇತ್ತು. ಇಸ್ಲಾಮ್ ಜರ್ಮನಿಯ ಮುಖ್ಯ ಧರ್ಮವಾಗಿರದ ಕಾರಣ ಜರ್ಮನಿಯಲ್ಲಿ ಈ ಸಮಸ್ಯೆಗೆ ಪರಿಹಾರವಿರಲಿಲ್ಲ. ಏಕಭಾರ್ಯ ತತ್ವವನ್ನು ಕಟ್ಟುನಿಟ್ಟಾಗಿ ಪ್ರತಿಪಾದಿಸುವ ಕ್ರೈಸ್ತ ಧರ್ಮದ ತತ್ವಗಳು ಇದಕ್ಕೆ ಪರಿಹಾರ ನೀಡಲು ಸಮರ್ಥವಾಗಿರಲಿಲ್ಲ. ಆದುದರಿಂದ ಜರ್ಮನಿ ಈ ಸಾಮಾಜಿಕ ಅಸಮತೋಲನಾವಸ್ಥೆಗೆ ಗುರಿಯಾಗಿ ಕಷ್ಟ ಅನುಭವಿಸಿತು. ಅಲ್ಲಿ ಅನೇಕ ಕನ್ಯೆಯರಾದ ಯುವತಿಯರೂ ನಿರಾಶರಾದ ಅವಿವಾಹಿತೆಯರೂ ಯುವತಿಯರಾದ ವಿಧವೆಯರೂ ಇದ್ದರು. ಅವರಿಗೆ ವಿವಾಹವಾಗಲು ಅಸಾಧ್ಯವಾಗಿತ್ತು.

ಯುರೋಪಿನ ವಿಶಾಲ ಭೂಖಂಡದಲ್ಲಿ ಇಂತಹ ಸಾಮಾಜಿಕ ಅಸಮತೋಲನಾವಸ್ಥೆಗೆ ಗುರಿಯಾದುದು ಜರ್ಮನಿ ಮಾತ್ರವಾಗಿರಲಿಲ್ಲ. ಅತ್ಯಂತ ಅಪಾಯಕಾರಿಯಾದ ಈ ಬೃಹತ್ ಸಮಸ್ಯೆಯಿಂದ ಬಾಧಿತವಾದ ದೇಶಗಳಿಗೆ ಇದು ಬಹಳ ದೊ–ಡ್ಡದಾದೊಂದು ಪಂಥಾಹ್ವಾನವಾಗಿತ್ತು – ಈ ಅಸಮತೋಲನ ಸ್ಥಿತಿಯಿಂದ ಸಂಭವಿಸಿದ ನೈತಿಕ ಅಧಃಪತನ ಮತ್ತು ಲೈಂಗಿಕ ಅನಿಯಂತ್ರಣಾವಸ್ಥೆಯನ್ನು ತಡೆಯಲು.

ಪೂರ್ವಗ್ರಹ ಪೀಡಿತನಾಗದ ಪ್ರತಿಯೊಬ್ಬನು ಇಂತಹ ಸಮಸ್ಯೆಗೆ ಪರಿಹಾರವಿರುವುದು ಒಂದಕ್ಕಿಂತ ಹೆಚ್ಚು ಸಾರಿ ವಿವಾಹವಾಗಲು ಅನುಮತಿಸುವುದಾಗಿದೆ ಎಂದು ಕಾಣಬಹುದು. ಬಹುಭಾರ್ಯತ್ವದ ಉಪದೇಶ ನೀಡಿದುದು ಲೈಂಗಿಕ ಆಶೆಗಳನ್ನು ಈಡೇರಿಸಲಿಕ್ಕೋಸ್ಕರವಾಗಿರಲಿಲ್ಲ. ಬಹುಸಂಖ್ಯೆಯಲ್ಲಿರಬಹುದಾದ ಅವಿವಾಹಿತ ಮಹಿಳೆಯರ ಸಮಸ್ಯೆಯನ್ನು ನಿವಾರಿಸಲು ಈ ಆಜ್ಞೆ ನೀಡಲಾಗಿದೆ. ತರ್ಕಬದ್ಧವಾದ ಮತ್ತು ವಾಸ್ತವಿಕವಾದ ಈ ಪರಿಹಾರ ಮಾರ್ಗವನ್ನು ತಿರಸ್ಕರಿಸುವುದಾದರೆ ಸಮಾಜವು ಬೇಗನೆ ಭ್ರಷ್ಟ ಮತ್ತು ಸ್ವಚ್ಛಂದ ಕಾಮ ವ್ಯವಸ್ಥೆ ಇರುವ ಸಮಾಜವಾಗಿ ಅವನತಿ ಹೊಂದುವುದು.

ಅಯ್ಯೋ! ಪಶ್ಚಿಮ ದೇಶಗಳು ಇದನ್ನೇ ಆಯ್ಕೆ ಮಾಡಿದೆ ಎಂದು ತೋಚುತ್ತದೆ. ನೀವು ಈ ಪ್ರಶ್ನೆ ಬಗ್ಗೆ ಯಾವುದೇ ಭಾವೋದ್ವೇಗಕ್ಕೆ ಒಳಗಾಗದೆ ಶಾಂತಚಿತ್ತರಾಗಿ ಪರಿಶೀಲಿಸುವುದಾದರೆ ಇದರಲ್ಲಿ ಪುರುಷ ಮತ್ತು ಮಹಿಳೆಯ ಸಮತೆಯ ಪ್ರಶ್ನೆ ಇಲ್ಲ. ಜವಾಬ್ದಾರಿ ಹೊಂದುವಿಕೆ ಮತ್ತು ಬೇಜವಾಬ್ದಾರಿಯ ಪ್ರಶ್ನೆ ಮಾತ್ರ ಇದಾಗಿದೆ.

ಇಸ್ಲಾಮ್ ಒಂದಕ್ಕಿಂತ ಹೆಚ್ಚು ವಿವಾಹವಾಗುವುದನ್ನು ಅನುಮತಿಸಿರುವುದು ಮೇಲೆ ವಿವರಿಸಿದಂತಹ ಕಷ್ಟಕರವಾದ ಮತ್ತು ವಿಶಿಷ್ಟ ಸನ್ನಿವೇಶಗಳ ಪಂಥಾಹ್ವಾನಗಳನ್ನು ಅಂಗೀಕರಿಸಲಿಕ್ಕಾಗಿದೆ. ಅದರೊಂದಿಗೆ ಎರಡನೆಯ, ಮೂರನೆಯ, ನಾಲ್ಕನೆಯ ಪತ್ನಿಯರೊಂದಿಗೆ ಸಮಾನವಾಗಿ ವರ್ತಿಸಿ ನ್ಯಾಯಪಾಲನೆ ಮಾಡಬೇಕೆಂಬ ನಿಬಂಧನೆಯೊಂದಿಗಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**“ಅನಾಥರ ವಿಚಾರದಲ್ಲಿ ನ್ಯಾಯಪಾಲಿಸಲಾರಿರೆಂದು ನಿಮಗೆ ಭಯವಿದ್ದರೆ ನಿಮಗೆ ಉಚಿತವೆನಿಸುವ (ಬೇರೆ) ಸ್ತ್ರೀಯರ ಪೈಕಿ ಇಬ್ಬರನ್ನೋ ಮೂವರನ್ನೋ ನಾಲ್ವರನ್ನೋ ನೀವು ವಿವಾಹ ಮಾಡಿಕೊಳ್ಳಿರಿ. ಆದರೆ ನ್ಯಾಯಪಾಲಿಸಲಾರಿರೆಂದು ನಿಮಗೆ ಭಯವಿದ್ದರೆ ಒಬ್ಬಳನ್ನು (ಮಾತ್ರ ವಿವಾಹವಾಗಿರಿ). ಅಥವಾ ನಿಮ್ಮ ಅಧೀನದಲ್ಲಿರುವ ದಾಸಿಯರಿಂದ (ವಿವಾಹ ಮಾಡಿಕೊಳ್ಳಿರಿ). ನೀವು ಅನ್ಯಾಯವಾಗಿ ವರ್ತಿಸದಿರಲು ಅತಿ ನಿಕಟವಾದ ಮಾರ್ಗ ಇದೇ ಆಗಿದೆ.” (4:4).**

ಬಹುಭಾರ್ಯತ್ವಕ್ಕೆ ಅನುಮತಿ ನೀಡದಿದ್ದರೆ ಅದರ ಪರಿಣಾಮ ಅತ್ಯಂತ ಕುರೂಪವಾಗಿರುವುದು. ಮದುವೆಯಾಗದೆ ಅತ್ಯಧಿಕ ಮಹಿಳೆಯರು ಸಮಾಜದಲ್ಲಿರುವಾಗ ಅವರು ತಮ್ಮ ಸಮಾಜದ ವಿವಾಹಿತ ಪುರುಷರನ್ನು ಆಕರ್ಷಿಸಲು ಮತ್ತು ವಶೀಕರಿಸಲು ಪ್ರಯತ್ನಿಸುವುದಾದರೆ ಧಾರ್ಮಿಕ ನಿಷ್ಠೆಯಲ್ಲಿ ಸಮಾಜದಲ್ಲಿ ಅವರನ್ನು ನಿಂದಿಸಲಾಗದು. ಮಹಿಳೆಯರು ಮನುಷ್ಯರೇ ಅಲ್ಲವೇ? ಅವರಿಗೆ ಅವರದೇ ಆದ ಭಾವನೆಗಳೂ ಈಡೇರದ ಆಕಾಂಕ್ಷೆಗಳೂ ಇರುತ್ತವೆ. ಯುದ್ಧದಿಂದ ಸಂಭವಿಸಿದ ಮಾನಸಿಕ ಯಾತನೆಯೊಂದಿಗೆ ಸಾಂತ್ವನ ಪಡೆಯಲು ಜೊತೆಯನ್ನು ಆಶಿಸುವುದು ವರ್ಧಿಸುತ್ತದೆ. ವಿವಾಹದಿಂದ ದೊರೆಯುವ ಭದ್ರತೆ ಮತ್ತು ಮನೆಯಿಂದ ವಂಚಿತರಾಗಿ ವಿವಾಹ ಮೂಲಕ ಮಕ್ಕಳನ್ನು ಪಡೆಯುವ ಆಶೆಯು ನೆರವೇರದೆ ಇರುವಾಗ ಜೀವನವು ಶೂನ್ಯವಾಗುತ್ತದೆ. ಅವರ ಭಾವೀ ಜೀವಿತ ಶೂನ್ಯವಾಗಿರುತ್ತದೆ – ಈಗಿನ ಜೀವನ ಶೂನ್ಯವಾಗಿರುವ ಹಾಗೆ.

ಇಂತಹ ಮಹಿಳೆಯರಿಗೆ ನ್ಯಾಯಬದ್ಧವಾಗಿ ವ್ಯವಸ್ಥೆ ಮಾಡದಿದ್ದರೆ ಅವರು ಸಮಾಜದ ಶಾಂತಿಗೆ ಹಾನಿಕಾರಕರಾಗುವರು. ಅವರು ವಿವಾಹಿತ ಮಹಿಳೆಯರ ಪುರುಷರ ಸಂಪರ್ಕ ನ್ಯಾಯಬಾಹಿರವಾಗಿ ಹೇಗಾದರೂ ಹೊಂದುವರು. ಇದರ ಪರಿಣಾಮ ಬಹಳ ಕೆಟ್ಟದಾಗುವುದು. ನಿಷ್ಠೆಗೆ ಭಂಗವುಂಟಾಗುವುದು. ವಿವಾಹಿತ

ಮಹಿಳೆಯರು ತಮ್ಮ ಪತಿಯಂದಿರ ಬಗ್ಗೆ ವಿಶ್ವಾಸ ಕಳೆದುಕೊಳ್ಳುವರು. ಸಂಶಯಗಳು ವರ್ಧಿಸುವುವು. ಪತಿ–ಪತ್ನಿಯರ ಪರಸ್ಪರ ವಿಶ್ವಾಸದ ಕೊರತೆಯಿಂದ ಅನೇಕ ಕುಟುಂಬಗಳ ಅಸ್ತಿಭಾರ ಅಲುಗಾಡುವುದು. ತಮ್ಮ ಪತ್ನಿಯರೊಂದಿಗೆ ವಿಶ್ವಾಸರಹಿತ ಸಂಬಂಧ ಹೊಂದಿರುವ ಪುರುಷರು ತಾವು ತಪ್ಪು ಮಾಡುವುದಾಗಿ ಮನವರಿಕೆ ಮಾಡಿಕೊಂಡು ಮಾನಸಿಕವಾಗಿ ರೋಗಗ್ರಸ್ತರಾಗಿ ಹೆಚ್ಚು ಅಪರಾಧ ಮಾಡಲು ತೊಡಗುವರು. ಪ್ರೀತಿ ಮತ್ತು ನಿಷ್ಠೆ ಎಂಬ ಉನ್ನತ ಸ್ವಭಾವ ಗುಣಗಳು ನಾಶ ಹೊಂದುವುವು. ಪ್ರೇಮಭಾವವು ಅದರ ಉನ್ನತ ಸ್ಥಾನದಿಂದ ಕೆಳಗಿಳಿದು ತಾತ್ಕಾಲಿಕ ಮೋಹದ ಸ್ಥಾನ ಪಡೆಯುವುದು.

ಎಲ್ಲ ಕ್ಷೇತ್ರಗಳಲ್ಲೂ ಸಮಾನತೆ ಬಗ್ಗೆ ಮಾತನಾಡುವವರು ಪುರುಷ ಮತ್ತು ಮಹಿಳೆ ಬೇರೆಯೇ ದೇಹ ಪ್ರಕೃತಿ ಹೊಂದಿದುದನ್ನು ಮರೆತು ಬಿಡುತ್ತಾರೆ.

ಮಹಿಳೆ ಮಾತ್ರ ಮಗುವಿಗೆ ಜನನ ನೀಡಲು ಸಾಧ್ಯ. ಮಹಿಳೆ ಮಾತ್ರ ಒಂಬತ್ತು ತಿಂಗಳ ಕಾಲ ಮುಂದಿನ ಹುಟ್ಟಿಗೆ ಕಾರಣವಾಗುವ ಮನುಷ್ಯ ಬೀಜವನ್ನು ಗರ್ಭದಲ್ಲಿ ಪೋಷಿಸಬಲ್ಲಳು. ಮಗುವನ್ನು ಅದರ ಶೈಶವಾವಸ್ಥೆಯಲ್ಲಿ ಮತ್ತು ಬಾಲ್ಯಕಾಲದಲ್ಲಿ ಮಹಿಳೆಗೆ ಮಾತ್ರ ಚೆನ್ನಾಗಿ ಬೆಳೆಸಲು ಸಾಧ್ಯ. ಅದು ಪುರುಷನಿಂದ ಅಸಾಧ್ಯ. ದೀರ್ಘವಾದ ಮತ್ತು ಅತ್ಯಂತ ನಿಕಟ ರಕ್ತಸಂಬಂಧದ ಕಾರಣ ತಾಯಿ ತನ್ನ ಮಗುವಿನೊಂದಿಗೆ ತಂದೆಗಿಂತ ಹೆಚ್ಚು ಶಕ್ತಿಶಾಲಿ ಮಾನಸಿಕ ಸಂಬಂಧವನ್ನು ಹೊಂದಿರುತ್ತಾಳೆ.

ಪುರುಷ ಮತ್ತು ಮಹಿಳೆಯ ದೇಹ ರಚನೆಯಲ್ಲಿರುವ ವ್ಯತ್ಯಾಸವನ್ನು ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳು ಕಡೆಗಣಿಸುವುದಾದರೆ ಮತ್ತು ಅವರು ವಹಿಸಬೇಕಾದ ಕೆಲಸಗಳಲ್ಲಿರುವ ವ್ಯತ್ಯಾಸವನ್ನು ಪರಿಗಣಿಸುವುದಿಲ್ಲವಾದರೆ ಅಂತಹ ವ್ಯವಸ್ಥೆ ಆರೋಗ್ಯಕರ ಸಮತೋಲನವನ್ನು ಸಮಾಜದಲ್ಲಿ ಸೃಷ್ಟಿಸುವುದರಲ್ಲಿ ಖಂಡಿತವಾಗಿಯೂ ಸೋತು ಹೋಗುವುದು. ಪುರುಷ ಮತ್ತು ಮಹಿಳೆಯರ ದೇಹ ರಚನೆಗಳಲ್ಲಿರುವ ವ್ಯತ್ಯಾಸಗಳ ಕಾರಣದಿಂದಲೇ ಇಸ್ಲಾಮ್ ಪುರುಷ ಮತ್ತು ಮಹಿಳೆಗೆ ಬೇರೆ ಬೇರೆ ಪಾತ್ರಗಳನ್ನು ವಹಿಸಬೇಕೆಂದು ಪ್ರತಿಪಾದಿಸುತ್ತದೆ.

ಮಹಿಳೆಯನ್ನು ಸಾಧ್ಯವಿರುವಷ್ಟು ಮಟ್ಟಿಗೆ ಕುಟುಂಬ ಪೋಷಣೆಗೆ ಸಂಪಾದನೆ ಮಾಡುವ ಜವಾಬ್ದಾರಿಯಿಂದ ಸ್ವತಂತ್ರಳನ್ನಾಗಿರಿಸಬೇಕು. ಸೈದ್ಧಾಂತಿಕವಾಗಿ ಮನೆ ಖರ್ಚು ಮಾಡುವ ಹೊಣೆಗಾರಿಕೆ ಪುರುಷನ ಮೇಲೆ ಇರಿಸಲಾಗಿದೆ. ಆದರೆ ಮಹಿಳೆಗೆ ತನ್ನ ಮುಖ್ಯ ಜವಾಬ್ದಾರಿಯಾದ ವಂಶ ವೃದ್ಧಿ, ಮಕ್ಕಳ ಆರೈಕೆ ಮತ್ತು ಅವರೊಂದಿಗೆ ಸೇರಿದ ಮುಖ್ಯ ಕೆಲಸಗಳನ್ನು ಕಡೆಗಣಿಸದೆ ಇತರ ಕೆಲಸಗಳನ್ನು ಮಾಡಲು ಅವಕಾಶವಿದ್ದರೆ ಆಕೆ ಆ ಕೆಲಸಗಳನ್ನು ಮಾಡಿ ಆರ್ಥಿಕ ಚಕ್ರವನ್ನು ಚಲಾಯಿಸುವುದರಲ್ಲಿ ತನ್ನ ಪಾಲು ವಹಿಸುವುದರಿಂದ ಆಕೆಯನ್ನು ತಡೆಗಟ್ಟಬಾರದು. ಇಸ್ಲಾಮ್ ಪ್ರತಿಪಾದಿಸುವುದು ಇದನ್ನೇ ಆಗಿದೆ.

ಇನ್ನೊಂದು ವಿಷಯವೇನೆಂದರೆ, ಮಹಿಳೆಯರು ಸಾಮಾನ್ಯವಾಗಿ ಬಲಹೀನ ಮತ್ತು ಕೋಮಲ ಶರೀರ ಪ್ರಕೃತಿಯನ್ನು ಹೊಂದಿರುತ್ತಾರೆ. ಹೀಗಿದ್ದರೂ ಅವರ ಶರೀರದ ಕೆಲವು ಅಂಗಗಳಲ್ಲಿ ಹೆಚ್ಚುವರಿ ಶಕ್ತಿ ಸಾಮರ್ಥ್ಯಗಳನ್ನು ದೇವನಿರಿಸಿರುತ್ತಾನೆ. ಇದು ಅವರ ಕೋಶಗಳಲ್ಲಿ ಹೆಚ್ಚುವರಿಯಾಗಿ ಅರ್ಧ ಕ್ರೋಮೋಸೋಮ್ ಇರುವುದರಿಂದಾಗಿದೆ. ಪುರುಷ ಮತ್ತು ಮಹಿಳೆಯ ವ್ಯತ್ಯಾಸ ಇದೇ ಕಾರಣದಿಂದಾಗಿದೆ. ಗರ್ಭಾವಸ್ಥೆ, ಶಿಶು ಜನನ ಮತ್ತು ಹಾಲೂಡಿಸುವಿಕೆಯ ಕಾಲದಲ್ಲಿ ಮಹಿಳೆ ಎದುರಿಸಬೇಕಾದ ಹೆಚ್ಚಿನ ಜವಾಬ್ದಾರಿಯ ನಿರ್ವಹಣೆಗೋಸ್ಕರ ಇದನ್ನು ಒದಗಿಸಲಾಗಿದೆ ಎಂದು ಸ್ಪಷ್ಟವಾಗುತ್ತದೆ. ಹೀಗಿದ್ದರೂ ಬಾಹ್ಯವಾಗಿ ಮಹಿಳೆ ಶಕ್ತಿವಂತಳಾಗಿರುವುದಿಲ್ಲ. ಪುರುಷನೊಂದಿಗೆ ಸಮಾನತೆ ಅಥವಾ ಬೇರೆ ಯಾವುದಾದರೂ ಕಾರಣ ಹೇಳಿ ಮಹಿಳೆಯರಿಗೆ ಕಠಿಣ ಶಾರೀರಿಕ ದುಡಿಮೆಯ ಕೆಲಸಗಳನ್ನು ವಹಿಸಿಕೊಡಬಾರದು. ಅವರೊಂದಿಗೆ ಮೃದುವಾಗಿಯೂ ದಯೆಯಿಂದಲೂ ವರ್ತಿಸಬೇಕು. ಮಹಿಳೆಯರಿಗೆ ಜೀವಿತದಲ್ಲಿ ಹಗುರವಾದ ಹೊರೆಯನ್ನು ಹೊರಿಸಬೇಕು ಮತ್ತು ಪುರುಷನಿಗೆ ಸಮಾನವಾದ ಹೊರೆಯನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಹೊಂದುವಂತೆ ಬಲಾತ್ಕರಿಸಬಾರದು.

ಮನೆಯೊಳಗಿನ ಜವಾಬ್ದಾರಿ ಹೊರಲು ಪುರುಷನನ್ನು ಮತ್ತು ಮಹಿಳೆಯನ್ನು ಪರಿಗಣಿಸುವಾಗ ಮಹಿಳೆಗೆ ಅದರ ಬಗ್ಗೆ ಹೆಚ್ಚು ಅರ್ಹತೆ ಇದೆ ಎಂದು ಮೇಲೆ ವಿವರಿಸಿದುದರಿಂದ ಸ್ಪಷ್ಟವಾಗುತ್ತದೆ. ಮಕ್ಕಳ ಆರೈಕೆಯನ್ನು ಮಾಡುವ ಹೊಣೆಗಾರಿಕೆ ನಿಸರ್ಗವು ಮಹಿಳೆಗೆ ವಹಿಸಿಕೊಟ್ಟಿದೆ. ಪುರುಷನು ಆ ಕೆಲಸದಲ್ಲಿ ಭಾಗಶಃ ಭಾಗಿಯಾಗಬಲ್ಲನು.

ಮಹಿಳೆಗೆ ಮನೆಯಲ್ಲಿರುವ ಹಕ್ಕನ್ನು ಪುರುಷನಿಗಿಂತ ಹೆಚ್ಚಿನ ಮಟ್ಟದಲ್ಲಿ ನೀಡಬೇಕಾಗಿದೆ. ಮನೆ ಖರ್ಚಿಗೆ ಹಣ ಸಂಪಾದನೆ ಮಾಡುವ ಜವಾಬ್ದಾರಿಯಿಂದ ಅವರಿಗೆ ವಿನಾಯಿತಿ ನೀಡಲಾಗಿದೆ. ಅವರಿಗೆ ದೊರಕುವ ಬಿಡುವಿನ ಕಾಲವನ್ನು ಅವರು ತಮ್ಮ ಸ್ವಂತ ಪ್ರಯೋಜನಕ್ಕೋಸ್ಕರ ಮತ್ತು ಸಮಾಜದ ಪ್ರಯೋಜನಕ್ಕಾಗಿ ಉಪಯೋಗಿಸಬಹುದು. ಈ ಕಾರಣದಿಂದ "ಮಹಿಳೆಯ ಸ್ಥಾನ ಮನೆ" ಎಂಬ ಕಲ್ಪನೆ ಜನಿಸಿದೆ. ಅವರನ್ನು ಅಡಿಗೆ ಮನೆಯಲ್ಲಿ ದೇಹದ ಮುಂದುಗಡೆಯ ಬಟ್ಟೆಗೆ ಕಟ್ಟುವ ಅಥವಾ ನಾಲ್ಕು ಗೋಡೆಗಳೊಳಗೆ ಬಂಧಿಸಲ್ಪಡುವ ಪ್ರಶ್ನೆಯೇ ಉದಿಸುವುದಿಲ್ಲ. ಮಹಿಳೆಯರು ತಮ್ಮ ಮುಖ್ಯ ಜವಾಬ್ದಾರಿಯಾದ ಮಕ್ಕಳ ಪಾಲನೆ ಪೋಷಣೆಗೆ ಭಂಗ ಬರದ ರೀತಿಯಲ್ಲಿ ತಮ್ಮ ಬಿಡುವಿನ ಸಮಯದಲ್ಲಿ ಹೊರಗೆ ಹೋಗಿ ಯಾವುದಾದರೂ ಆರೋಗ್ಯಕರವಾದ ಚಟುವಟಿಕೆಯಲ್ಲಿ ಭಾಗವಹಿಸುವುದನ್ನು ಇಸ್ಲಾಮ್ ತಡೆಗಟ್ಟುವುದಿಲ್ಲ. ಬೇರೆ ಕಾರಣಗಳೊಂದಿಗೆ ಈ ಕಾರಣದಿಂದ ಪುರುಷರು ಮಹಿಳೆಯರು ಸ್ವತಂತ್ರವಾಗಿ ಜಮಾಯಿಸುವುದನ್ನು ನಿರುತ್ಸಾಹಪಡಿಸಲಾಗಿದೆ. ಮಹಿಳೆಯ ಚಟುವಟಿಕೆಗಳ ಕೇಂದ್ರ ಮನೆ ಎಂದು ಇಸ್ಲಾಮ್ ಪ್ರತಿಪಾದಿಸಿದುದು ಇಂದಿನ ಕಾಲದ ಕೆಡುಕುಗಳಿಗೆ ವಿವೇಕಭರಿತವೂ ಪ್ರಾಯೋಗಿಕವೂ ಆದ ಪರಿಹಾರವಾಗಿದೆ. ಮಹಿಳೆಯರು ತಮ್ಮ ಮನೆಗಳ ಹೊರಗಿನ ಚಟುವಟಿಕೆಗಳಲ್ಲಿ ಆಸಕ್ತರಾಗುವುದಾದರೆ ಅದು ಕೌಟುಂಬಿಕ ಜೀವಿತಕ್ಕೂ ಮಕ್ಕಳ ಆರೈಕೆಗೂ ಹಾನಿಕರವಾಗುವುದು.

ತಾಯಿಯನ್ನು ಕೇಂದ್ರೀಕರಿಸಿ ರಚಿಸಲ್ಪಡುವ ಕೌಟುಂಬಿಕ ಜೀವಿತದಲ್ಲಿ ಇತರ ರಕ್ತ ಸಂಬಂಧಗಳನ್ನು ಬಲಪಡಿಸುವುದು

**31ನೇ ಪುಟಕ್ಕೆ**

# ದೇವಾಸ್ತಿತ್ವದ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯಗಳು

* ಪ್ರೊಫೆಸರ್ ಡಾಕ್ಟರ್ ಸಾಲಿಹ್ ಮುಹಮ್ಮದ್ ಅಲ್ಲಾದ್ದೀನ್



ಸರ್ವಶಕ್ತನಾದ ದೇವನ ಅಸ್ತಿತ್ವದ ವಿಷಯವು ಅತ್ಯಂತ ಮುಖ್ಯವಾಗಿದೆ. ಧರ್ಮದ ಕೇಂದ್ರ ಬಿಂದು ಸರ್ವಶಕ್ತನಾದ ದೇವನಾಗಿದ್ದಾನೆ. ಧಾರ್ಮಿಕ ಸೌಹಾರ್ದವನ್ನು ಬೆಳೆಸಲು, ವಿವಿಧ ಧರ್ಮಗಳ ಜನರನ್ನು ಒಗ್ಗೂಡಿಸಲು, ಎಲ್ಲರೂ ಸೇರಿಕೊಂಡು ನಾಸ್ತಿಕವಾದವನ್ನು ಖಂಡಿಸಲು, ಸರ್ವಶಕ್ತನಾದ ದೇವನ ಬಗ್ಗೆ ವಿಶ್ವಾಸವನ್ನು ವರ್ಧಿಸಲು ಮತ್ತು ನಮ್ಮ ಜೀವಿತದ ಉದ್ದೇಶಲಕ್ಷ್ಯವನ್ನು ಗಳಿಸಲು ಈ ವಿಷಯದ ಬಗ್ಗೆ ಜ್ಞಾನ ಗಳಿಸುವುದು ಆವಶ್ಯಕವಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

**ಹೇಳು: "ಎಲೈ ಗ್ರಂಥದವರೇ, ನಮಗೂ ನಿಮಗೂ ಮಧ್ಯೆ ಒಪ್ಪಿಗೆಯಿರುವ ವಿಚಾರದೆಡೆಗೆ (ಎಂದರೆ) ಏಕದೇವನಲ್ಲದೆ ಯಾರನ್ನೂ ಆರಾಧಿಸುವುದಿಲ್ಲ, ಅವನಿಗೆ ಯಾರನ್ನೂ ಸಹಭಾಗಿಯಾಗಿ ಭಾವಿಸಲಿಕ್ಕಿಲ್ಲ, ಅವನ ಹೊರತು ನಮ್ಮಲ್ಲಿ ಕೆಲವರು ಬೇರೆ ಕೆಲವರನ್ನು ಒಡೆಯರನ್ನಾಗಿ ಪರಿಗಣಿಸಲಿಕ್ಕಿಲ್ಲ ಎಂಬ ವಿಚಾರದೆಡೆಗೆ ಬನ್ನಿರಿ." (3:65).**

ಲೋಕದಲ್ಲಿ ಅಪರಾಧಗಳು ವರ್ಧಿಸುವ ಮತ್ತು ಗಲಭೆ ಗೊಂದಲಗಳ ಮೂಲಕಾರಣ ಜನರ ಹೃದಯಗಳಲ್ಲಿ ದೇವನ ಅಸ್ತಿತ್ವದ ಬಗ್ಗೆ ವಿಶ್ವಾಸವಿಲ್ಲದಿರುವುದಾಗಿದೆ. ಆದುದರಿಂದ ಈ ವಿಷಯವು ಲೋಕದಲ್ಲಿ ಶಾಂತಿ ಸ್ಥಾಪನೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ಪವಿತ್ರಖುರ್‌ಆನ್ ಹೇಳುವ ಹಾಗೆ, **ದೇವನು ಶಾಂತಿಯ ಸಾಮ್ರಾಟನೂ ಭದ್ರತೆ ದಯಪಾಲಿಸುವವನೂ ಆಗಿದ್ದಾನೆ. (ಪವಿತ್ರಖುರ್‌ಆನ್ 59:24).**

ನಮ್ಮ ನೇತಾರರಾದ ಹಝ್ರತ್ ಮುಹಮ್ಮದ್ ಪೈಗಂಬರ್[ಸ] (ಅವರ ಮೇಲೆ ಅಲ್ಲಾಹನ ಶಾಂತಿಯೂ ಅನುಗ್ರಹವೂ ಸುರಿಸಲ್ಪಡಲಿ) ಅವರ ಆಗಮನದ ಉದ್ದೇಶಲಕ್ಷ್ಯ ಲೋಕದ ಜನರನ್ನು, ಸರ್ವಶಕ್ತನಾದ ದೇವನ ಕಡೆಗೆ ಆಗಮಿಸಲು ಕರೆ ನೀಡುವುದಾಗಿತ್ತು. ಹಝ್ರತ್ ಪೈಗಂಬರರನ್ನು[ಸ] ಸಂಬೋಧಿಸಿ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

**ಹೇಳು: "ಇದು ನನ್ನ ಮಾರ್ಗವಾಗಿದೆ. ನಾನು ಅಲ್ಲಾಹನ ಕಡೆಗೆ ನಿಮ್ಮನ್ನು ಆಮಂತ್ರಿಸುತ್ತೇನೆ. ನಾನು ಮತ್ತು ನನ್ನನ್ನು ಅನುಸರಿಸುವವರು ಸಂಶಯಾತೀತ ಜ್ಞಾನವನ್ನು ಹೊಂದಿರುವೆವು. ನಾನು ಅಲ್ಲಾಹನ ಪಾವಿತ್ರ್ಯವನ್ನು ಕೊಂಡಾಡುತ್ತೇನೆ. ನಾನು ಬಹುದೇವಾರಾಧಕರಲ್ಲಿ ಸೇರಿದವನಲ್ಲ." (12:109).**

ಲೋಕದ ಅಂತಿಮ ಕಾಲಘಟ್ಟದಲ್ಲಿ ವಾಗ್ದತ್ತ ಮಹ್‌ದೀ ಮಸೀಹ್ (ಧರ್ಮೋದ್ಧಾರಕ) ಆಗಮಿಸುವರೆಂದೂ ಅವರ ಮುಖ್ಯ ಕೆಲಸ ಲೋಕದಲ್ಲಿ ನೈಜ ಇಸ್ಲಾಮ್ ಧರ್ಮ ವಿಶ್ವಾಸ ಸ್ಥಾಪನೆ ಮಾಡುವುದಾಗಿದೆ ಎಂದೂ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಭವಿಷ್ಯ ನುಡಿದಿರುವರು. ಧಾರ್ಮಿಕ ವಿಶ್ವಾಸವು ಲೋಕದಿಂದ ಮೇಲೇರಿ ಸುರಯ್ಯಾ (ಕೃತಿಕಾ) ನಕ್ಷತ್ರವನ್ನು ತಲಪಿದರೂ ವಾಗ್ದತ್ತ ಮಸೀಹರು ಅದನ್ನು ಭೂಮಿಗೆ ಮರಳಿ ತರುವರು ಎಂದು ಸಹ ಹಝ್ರತ್ ಪೈಗಂಬರರು[ಸ] ಹೇಳಿದುದಾಗಿ ಹದೀಸು ಗ್ರಂಥಗಳಲ್ಲಿ ವರದಿಯಾಗಿದೆ. (ಬುಖಾರಿ ಮತ್ತು ಮುಸ್ಲಿಮ್ ನೋಡಿರಿ).

ಪಂಜಾಬ್ ರಾಜ್ಯದ ಖಾದಿಯಾನ್ ಎಂಬಲ್ಲಿ ಜನಿಸಿದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] (ಅವರ ಮೇಲೆ ಶಾಂತಿ ಇರಲಿ) ವಾಗ್ದತ್ತ ಮಸೀಹರೆಂದು ನಾವು ನಂಬುತ್ತೇವೆ. ಅಹ್ಮದಿಯಾ ಜಮಾಅತನ್ನು ಸ್ಥಾಪಿಸಿದ ಅವರ ಮೂಲಕವೇ ಲೋಕದಲ್ಲಿ ಧಾರ್ಮಿಕ ಪುನಶ್ಚೇತನವು ಲೋಕದ ಅಂತಿಮ ಕಾಲಘಟ್ಟದಲ್ಲಿ ಈಡೇರುವುದು ದೇವನಿಂದ ನಿಗದಿಪಡಿಸಲಾಗಿದೆ. ಆದುದರಿಂದ ದೇವನ ಅಸ್ತಿತ್ವ ಸಾಬೀತುಗೊಳಿಸುವ ವಿಷಯ ಅಹ್ಮದಿಯಾ ಜಮಾಅತ್‌ಗೆ ಅತ್ಯಂತ ಪ್ರಿಯವಾದುದಾಗಿದೆ. ಇದನ್ನು ಅಹ್ಮದಿಯಾ ಜಮಾಅತ್‌ನ ದ್ವಿತೀಯ ಖಲೀಫರಾಗಿದ್ದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್[ರ] ಹೀಗೆ ಒಂದು ಉರ್ದು ಪದ್ಯದಲ್ಲಿ ಸುಂದರವಾಗಿ ಪ್ರಕಟಿಸಿರುವರು:

**ಮೆರೀ ರಾತ್ ದಿನ್ ಬಸ್ ಯಹೀ ಏಕ್ ಸದಾ ಹೈ**
**ಕೆ ಇಸ್ ಆಲಮೇ ಕೌನ್ ಕಾ ಏಕ್ ಖುದಾ ಹೈ**

ಅರ್ಥ: ರಾತ್ರಿ ಹಗಲು ನಾನು ಹೇಳುವುದು ಹೀಗೆಯೇ ಆಗಿದೆ– ಈ ವಿಶ್ವಕ್ಕೋರ್ವ ದೇವನಿರುವನೆಂದು.

ವಿಶ್ವವು ದೇವನ ಅಸ್ತಿತ್ವದ ಬಗ್ಗೆ ಇರುವ ಸಾಕ್ಷಾಧಾರವಾಗಿದೆ ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ.

**ಆಕಾಶಗಳ ಮತ್ತು ಭೂಮಿಯ ಸೃಷ್ಟಿಯಲ್ಲೂ ರಾತ್ರಿ – ಹಗಲುಗಳ ರೂಪಾಂತರದಲ್ಲೂ ದಿಟವಾಗಿಯೂ ಬುದ್ಧಿಶಾಲಿಗಳಿಗೆ (ಹಲವು) ದೃಷ್ಟಾಂತಗಳಿವೆ. (3:191).**

**ಆಕಾಶಗಳ ಮತ್ತು ಭೂಮಿಯ ಸೃಷ್ಟಿ ಹಾಗೂ ನಿಮ್ಮ ಭಾಷೆ ಮತ್ತು ವರ್ಣಗಳ ವೈವಿಧ್ಯ – ಇದು ಸಹ ಅವನ ದೃಷ್ಟಾಂತಗಳಲ್ಲಿ ಸೇರಿದೆ. ಜ್ಞಾನಿಗಳಿಗೆ ಅದರಲ್ಲಿ ನಿಜವಾಗಿಯೂ ದೃಷ್ಟಾಂತಗಳಿವೆ. (30:23).**

**ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನಾದ ಅಲ್ಲಾಹನ ಕುರಿತು ನಿಮಗೆ ಸಂಶಯವೇ? (14:11).**

ಆಕಾಶಗಳ ಮತ್ತು ಭೂಮಿಯ ಸೃಷ್ಟಿಯ ಬಗ್ಗೆ ಅಧ್ಯಯನ ನಡೆಸಿದರೆ ಅವುಗಳ ಸೃಷ್ಟಿಕರ್ತನ ಅಸ್ತಿತ್ವದ ಬಗ್ಗೆ ಮನವರಿಕೆ ಆಗುವುದೆಂದು ಮೇಲಿನ ಪವಿತ್ರ ಖುರ್‌ಆನ್ ವಚನಗಳು ಸೂಚಿಸುತ್ತವೆ. ವಿಜ್ಞಾನ ಮತ್ತು ವಿಜ್ಞಾನಿಗಳು ಈ ವಿಷಯದ ಬಗ್ಗೆ ಪ್ರಕಟಿಸಿದ ಕೆಲವು ಅಭಿಪ್ರಾಯಗಳನ್ನು, ನಾನು ದೇವನ ಸಹಾಯವನ್ನು ಬೇಡಿಕೊಂಡು ನಿಮ್ಮ ಮುಂದೆ ಇರಿಸುತ್ತೇನೆ.

## ವಿಜ್ಞಾನ ಮತ್ತು ಧರ್ಮ

ವಿಶಿಷ್ಟವಾಗಿ ಗಮನಿಸಬೇಕಾದುದೇನೆಂದರೆ, ಹಝ್ರತ್

ಮುಹಮ್ಮದ್ ಪೈಗಂಬರರ(ಸ) ಆಗಮನದ ನಂತರ ಮುಸ್ಲಿಮರು ಬಹಳ ವೈಜ್ಞಾನಿಕ ಸಂಶೋಧನೆಗಳನ್ನು ನಡೆಸಿ ವಿಜ್ಞಾನವನ್ನು ಬಹಳ ಅಭಿವೃದ್ಧಿಗೊಳಿಸಿದರು. ಅವರು ದೇವನ ಅಸ್ತಿತ್ವವನ್ನು ನಂಬುವವರಾಗಿದ್ದರು ಮತ್ತು ಅವರು ವಿಜ್ಞಾನದ ಮೂಲಕ ದೇವನ ಬಗ್ಗೆ ತಳಸ್ಪರ್ಶಿ ಜ್ಞಾನಗಳಿಸಿದರು. ಉದಾರಣೆಗೆ, ವಿಖ್ಯಾತ ಅರಬಿ ಗಗನಶಾಸ್ತ್ರಜ್ಞರಾಗಿದ್ದ ಅಬ್ದುಲ್ಲಾ ಮುಹಮ್ಮದ್ ಇಬ್ನು ಜರೀರ್ ಅಲ್ ಬತ್ತಾನೀ ಆಕಾಶಕಾಯಗಳ ಬಗ್ಗೆ ಕ್ರಿ.ಶ. 878ರಿಂದ 918ರ ತನಕ ನಲ್ವತ್ತು ವರ್ಷಗಳ ಕಾಲ ಸಂಶೋಧನೆ ನಡೆಸಿದ್ದರು. ಅವರು ಹೀಗೆ ಹೇಳಿದ್ದರು:

ನಕ್ಷತ್ರಗಳ ಬಗ್ಗೆ ಮಾಡಿದ ವೈಜ್ಞಾನಿಕ ಸಂಶೋಧನೆಗಳು ದೇವನ ಏಕತ್ವವನ್ನೂ ಅತ್ಯುನ್ನತ ದೇವ ಜಾಣ್ಮೆಯನ್ನೂ ಮನವರಿಕೆ ಮಾಡಿಸಿಕೊಡುತ್ತವೆ. (ಹಿಸ್ಟರಿ ಆಫ್ ಎಸ್ಟ್ರೋನೊಮಿ, ಲೇಖಕ: A. PENNEKOEK, INTER SCIENCE, NEW YORK 1961.)

ಅನಂತರ ಕ್ರಿಸ್ತಶಕ ಹದಿನೇಳನೇ ಶತಮಾನದಲ್ಲಿ ಭೂಮಿ ವಿಶ್ವದ ಕೇಂದ್ರವಲ್ಲ ಎಂದು ವಿಜ್ಞಾನಿಗಳು ಪ್ರತಿಪಾದಿಸಿದಾಗ, ಯುರೋಪಿನ ಕ್ರೈಸ್ತ ಪಾದರಿಗಳು ಆ ಅಭಿಪ್ರಾಯವನ್ನು ಖಂಡಿಸಿದರು. ಧರ್ಮ ಮತ್ತು ವಿಜ್ಞಾನ ಪರಸ್ಪರ ವಿರುದ್ಧಾಭಿಪ್ರಾಯಗಳನ್ನು ಹೊಂದಿವೆ ಎಂದು ಸಾಮಾನ್ಯವಾಗಿ ನಂಬಲಾಗಿತ್ತು. ಆದರೆ ಇಂದಿನ ಕಾಲಘಟ್ಟದಲ್ಲಿ, ಅನೇಕ ವಿಜ್ಞಾನಿಗಳು ಧರ್ಮ ಮತ್ತು ವಿಜ್ಞಾನ ಪರಸ್ಪರ ವಿರುದ್ಧವಾಗಿವೆ ಎಂದು ನಂಬುವುದಿಲ್ಲ. ಅನೇಕ ವಿಜ್ಞಾನಿಗಳು ವಾಸ್ತವಿಕವಾಗಿಯೂ ದೇವನಿದ್ದಾನೆಂದು ನಂಬುತ್ತಾರೆ.

ಎವಿಡೆನ್ಸ್ (EVIDENCE – ಸಾಕ್ಷ್ಯಾಧಾರಗಳು) ಎಂಬ ಪುಸ್ತಕ 1959ರಲ್ಲಿ ಯು.ಎಸ್.ಎ.ದಲ್ಲಿ ಪ್ರಕಟವಾಗಿದೆ.

ವಿಜ್ಞಾನದ ವಿವಿಧ ಕ್ಷೇತ್ರಗಳ ಪ್ರಸಿದ್ಧರಾದ ನಲ್ವತ್ತು ವಿಜ್ಞಾನಿಗಳು ಆ ಪುಸ್ತಕದಲ್ಲಿ ದೇವನು ಅಸ್ತಿತ್ವದಲ್ಲಿರುವನೆಂಬ ತಮ್ಮ ಅಭಿಪ್ರಾಯಗಳನ್ನು ತಮ್ಮ ಪ್ರಬಂಧಗಳಲ್ಲಿ ವಿವರಿಸಿದ್ದಾರೆ. ಈ ಪುಸ್ತಕದ ಪೂರ್ಣ ಶೀರ್ಷಿಕೆ The Evidence of God in an Expanding Universe (ವಿಸ್ತಾರಗೊಳ್ಳುತ್ತಿರುವ ವಿಶ್ವದಲ್ಲಿ ದೇವನ ಅಸ್ತಿತ್ವದ ಬಗ್ಗೆ ಸಾಕ್ಷ್ಯಾಧಾರಗಳು). ಈ ಪುಸ್ತಕ ಭಾರತದಲ್ಲಿ 1968ರಲ್ಲಿ ಪ್ರಕಟಗೊಂಡಿತು. (ವಿತರಕರು: POCKETS DISTRIBUTING CO. 11 OAK LANE, FORT, BOMBAY -1) ಈ ಪುಸ್ತಕದ ಸಂಪಾದಕ ಮಿಸ್ಟರ್ ಜಾನ್ ಕ್ಲೋವರ್ ಮೊನ್‌ಸ್ಮ ತನ್ನ ಮುನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ:

**"ಈ ಪುಸ್ತಕದ ಮೂಲಭೂತ ಪ್ರತಿಪಾದನೆ, ಅದು ಪ್ರತಿಪಾದಿಸುವ ಮುಖ್ಯ ಅಂಶ ಹೀಗಿದೆ: ನೈಸರ್ಗಿಕ ವಾಸ್ತವಾಂಶಗಳನ್ನು ವೀಕ್ಷಿಸುವ ಮೂಲಕ, ವೈಜ್ಞಾನಿಕ ಸಾಕ್ಷ್ಯಾಧಾರಗಳ ಮೂಲಕ ಒಂದು ಅತಿಮಾನುಷ ಮಹಾಶಕ್ತಿ ಇದೆ ಎಂದು ವಿಜ್ಞಾನವು ಸಾಬೀತುಗೊಳಿಸಬಲ್ಲುದು. ಈ ಮಹಾಶಕ್ತಿ ಏನೆಂದು ಸ್ಪಷ್ಟವಾಗಿ ಅದು ವಿವರಿಸಲಾರದು. ಅದರ ವಾಸ್ತವಿಕ ಗುರುತನ್ನು ಗೊತ್ತು ಹಚ್ಚಲು ವಿಶಿಷ್ಟ ದೇವವಾಣಿ (ಬೈಬಲ್) ಆವಶ್ಯಕವಾಗಿದೆ. ಆದರೆ ಒಂದು ಮೂಲ ಪ್ರತಿಪಾದನೆಯಿಂದ ಮುಂದುವರಿದ ವಿಜ್ಞಾನಿಗಳು ನಾಸ್ತಿಕವಾದದ ಹೃದಯವನ್ನು ಬಲಯುತವಾಗಿ ಛೇದಿಸಿದ್ದಾರೆ."**

ನಾನು ಮೇಲೆ ಉಲ್ಲೇಖಿಸಿದ ಪುಸ್ತಕದಿಂದ ಉದ್ಧರಣೆಗಳನ್ನು ನೀಡಲು ಬಯಸುತ್ತೇನೆ. ಏಕೆಂದರೆ, ನಮಗೆ ಅತ್ಯಂತ ಪ್ರಿಯರಾದ ನಮ್ಮ ಗುರುವರ್ಯರಾದ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹೀಗೆ ನಮಗೆ ಉಪದೇಶಿಸಿರುವರು:

**ಜಾಣ್ಮೆಯ ಮಾತು ಸತ್ಯವಿಶ್ವಾಸಿಯ ಕಳೆದು ಹೋದ ವಸ್ತುವಾಗಿದೆ. ಅದನ್ನು ಕಂಡರೆ ಅದನ್ನು ತೆಗೆದುಕೊಳ್ಳುವ ಅಧಿಕಾರ ಆತನಿಗಿದೆ.**

(ತಿರ್ಮಿದಿ).

ಆದುದರಿಂದ ವಿವೇಕಭರಿತ ಮಾತು ನಮಗೆ ಎಲ್ಲಿಂದ ದೊರೆತರೂ ನಾವು ಅದನ್ನು ತೆಗೆದುಕೊಳ್ಳುತ್ತೇವೆ.

ಮ್ಯಾಕ್ಸ್ ಪ್ಲಾಂಕ್ (MAX PLANCK) ಇಪ್ಪತ್ತನೆಯ ಶತಮಾನದ ಪ್ರಖ್ಯಾತ ವಿಜ್ಞಾನಿಯಾಗಿದ್ದರು. ಅಣು ಬಗ್ಗೆ ಸಂಶೋಧನೆ ನಡೆಸಿದ ಅವರಿಗೆ 1920ರಲ್ಲಿ ನೋಬೆಲ್ ಪ್ರೈಝ್ ಲಭಿಸಿತ್ತು. ಧರ್ಮ ಮತ್ತು ವಿಜ್ಞಾನ ಪರಸ್ಪರ ಸಹಕರಿಸಿ ಸರ್ವಶಕ್ತ ದೇವನ ಅಸ್ತಿತ್ವದ ಜ್ಞಾನದ ಕಡೆಗೆ ಒಯ್ಯುತ್ತವೆ ಎಂದು ಅವರು ಅಭಿಪ್ರಾಯ ಸೂಚಿಸಿದ್ದರು. ಅವರು ಹೀಗೆ ಹೇಳಿದರು:

"ಧರ್ಮ ಮತ್ತು ನೈಸರ್ಗಿಕ ವಿಜ್ಞಾನ ಜೊತೆಗೂಡಿ ಸಂದೇಹ ವಾದ, ಧಾರ್ಮಿಕ ದುರಭಿಮಾನ ಮತ್ತು ಅಂಧವಿಶ್ವಾಸದ ವಿರುದ್ಧ ನಿರಂತರವಾಗಿಯೂ ಅವಿರಾಮವಾಗಿಯೂ ಹೋರಾಟ ನಡೆಸುತ್ತಿವೆ. ಹೋರಾಟ ನಡೆಸುವಾಗ ಘೋಷಣೆ 'ದೇವನ ಕಡೆಗೆ' ಎಂದಾಗಿತ್ತು ಮತ್ತು ಇದೇ ಘೋಷಣೆಯೊಂದಿಗೆ ಮುಂದೆ ಸಾಗುವುದು."

(ಎವಿಡೆನ್ಸ್ – ಪುಟ 247).

ಡಾಕ್ಟರ್ ಜೋರ್ಜ್ ಅರ್ಲ್ ಡೇವಿಸ್, ಫಿಸಿಸಿಸ್ಟ್ (ಭೌತಶಾಸ್ತ್ರಜ್ಞ), ಅಮೇರಿಕದ ಮಿನ್ನೆಸೋಟ ಯುನಿವರ್ಸಿಟಿ ಹೀಗೆ ಬರೆಯುತ್ತಾರೆ:

"ವಿಜ್ಞಾನದ ವಲಯದಲ್ಲಿ ನಾಸ್ತಿಕತೆ ಇರುವುದನ್ನು ಅಲ್ಲಗಳೆಯಲಾಗದು. ವಿಜ್ಞಾನಿಗಳಲ್ಲದವರಿಗಿಂತ ವಿಜ್ಞಾನಿಗಳಾದವರಲ್ಲಿ ಹೆಚ್ಚು ವ್ಯಾಪಕವಾಗಿ ನಾಸ್ತಿಕವಾದ ಇದೆ ಎಂಬ ಜನರ ಅಭಿಪ್ರಾಯ ಎಂದೂ ಸಾಬೀತಾಗಿಲ್ಲ. ಅನೇಕ ವಿಜ್ಞಾನಿಗಳು ಸ್ವತಃ ಮೊದಲು ಹೊಂದಿದ್ದ ಕಲ್ಪನೆಗೆ ವಿರುದ್ಧವಾಗಿರುವ ವಾಸ್ತವಿಕತೆಯಾಗಿದೆ ಇದು."

(ಎವಿಡೆನ್ಸ್– ಪುಟ 70)

ಡಾಕ್ಟರ್, ಎಚ್.ಟಿ. ಸ್ಟೆಟ್‌ಸನ್, ಅಮೇರಿಕದ ಓಹೈಯೋದ ಪರ್ಕಿನ್ಸ್ ಒಬ್‌ಸರ್‌ವೇಟರಿಯ ಮಾಜಿ ಡೈರೆಕ್ಟರ್ ಹೀಗೆ ಬರೆದಿದ್ದಾರೆ:

"ವಿಜ್ಞಾನ ಕ್ಷೇತ್ರದ ಪ್ರಮುಖರಲ್ಲಿ ಹಲವರು ಧರ್ಮದ ನಿಷ್ಠಾವಂತ ಅನುಯಾಯಿಗಳಾಗಿದ್ದಾರೆಂಬುದು ಗಮನಾರ್ಹವಾಗಿದೆ. ಗೆಲಿಲಿಯೋ, ನ್ಯೂಟನ್, ಫೆರಡೇ, ಕೆಲ್‌ವಿನ್ ಮತ್ತು ಪ್ಯಾಶ್ಚರ್ ಮೊದಲಾದವರು ಅವರಲ್ಲಿ ಸೇರಿದ್ದಾರೆ."

(ಮ್ಯಾನ್ ಆ್ಯಂಡ್ ದಿ ಸ್ಟಾರ್ಸ್ – ಲೇಖಕ: H.T. STETSON – ಪುಟ 214).

ಅಹ್ಮದಿಯಾ ಜಮಾಅತಿನ ಸ್ಥಾಪಕರ ಪುತ್ರರಾದ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ತನ್ನ ಉರ್ದು ಪುಸ್ತಕ "ಹಮಾರಾ ಖುದಾ"ದಲ್ಲಿ ಹೀಗೆ ಬರೆದಿರುವರು:

"ದೇವನ ಅಸ್ತಿತ್ವದ ಬಗೆಗಿನ ವಿಶ್ವಾಸದ ಕುರಿತು ಹೇಳುವುದಾದರೆ, ಅನೇಕ ವಿಜ್ಞಾನಿಗಳು ದೇವನನ್ನು ನಂಬುತ್ತಿದ್ದರೆಂದು ತಿಳಿದು ಬರುತ್ತದೆ. ಬಹಳ ಕಡಿಮೆ ಸಂಖ್ಯೆಯ ವಿಜ್ಞಾನಿಗಳು ದೇವನ ಅಸ್ತಿತ್ವವನ್ನು ನಿರಾಕರಿಸುತ್ತಾರೆ. ದೇವನ ಅಸ್ತಿತ್ವವನ್ನು ನಿರಾಕರಿಸದವರ ಸಂಖ್ಯೆ ಹೆಚ್ಚಾಗಿದೆ."

ಅನೇಕ ವಿಜ್ಞಾನಿಗಳು ದೇವನ ಅಸ್ತಿತ್ವದಲ್ಲಿ ನಂಬಿಕೆ ಹೊಂದಿರುವವರೆಂದು ನನಗೆ ನನ್ನ ಸ್ವಂತ ಅನುಭವದಿಂದ ತಿಳಿದಿದೆ. ಉಸ್ಮಾನಿಯಾ ಯುನಿವರ್ಸಿಟಿಯ ಪ್ರೊಫೆಸರ್ ಆಫ್ ಫಿಸಿಕ್ಸ್ (ಭೌತಶಾಸ್ತ್ರದ ಪ್ರೊಫೆಸರ್) ಮತ್ತು ಅದರ ವೈಸ್‌ಚಾನ್ಸಿಲರ್ ಆಗಿದ್ದ ಡಾಕ್ಟರ್ ರಾವಡ ಸತ್ಯನಾರಾಯಣ ಅವರ ಮಾರ್ಗದರ್ಶನದಲ್ಲಿ ನಾನು ಸಂಶೋಧನೆ ಪ್ರಾರಂಭಿಸಿದೆ ಮತ್ತು ಪ್ರೊಫೆಸರ್ ನೆಲ್‌ಸನ್ ಲಿಂಬರ್ ಅವರ ನೇತೃತ್ವದಲ್ಲಿ ನಾನು ಪಿಎಚ್.ಡಿ.ಗೆ ಸಂಶೋಧನೆ ಮುಂದುವರಿಸಿದೆ. ಇವರಿಬ್ಬರೂ ದೇವನ ಬಗ್ಗೆ ದೃಢವಿಶ್ವಾಸ ಹೊಂದಿದವರಾಗಿದ್ದರು.

## ವಿಶ್ವದ ಉದ್ಭವ

ವಿಶ್ವದ ಉದ್ಭವ ಹೇಗೆ ಸಂಭವಿಸಿತು ಎಂಬುದರ ಬಗ್ಗೆ ಮೂರು ಸಾಧ್ಯತೆಗಳಿವೆ:

(1) ವಿಶ್ವ ಅನಾದಿಯಿಂದಲೇ ಅಸ್ತಿತ್ವದಲ್ಲಿತ್ತು.

(2) ವಿಶ್ವವು ನಾಸ್ತಿಯಿಂದ ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬಂತು.

(3) ವಿಶ್ವವು ಬುದ್ಧಿಶಾಲಿಯಾದ ಸರ್ವೋಚ್ಚ ಸರ್ವಶಕ್ತ ಅಸ್ತಿತ್ವದಿಂದ ಸೃಷ್ಟಿಸಲ್ಪಟ್ಟಿತು. ಆ ಸರ್ವಶಕ್ತನನ್ನು ನಾವು ದೇವನೆಂದು ಕರೆಯುತ್ತೇವೆ.

ವಿಜ್ಞಾನವು ಮೇಲೆ ಪ್ರಸ್ತಾಪಿಸಿದ ಮೂರು ಸಾಧ್ಯತೆಗಳಲ್ಲಿ ಮೊದಲಿನ ಎರಡು ಸಾಧ್ಯತೆಗಳನ್ನು ಬೆಂಬಲಿಸುವುದಿಲ್ಲ ಎಂದೂ ಮೂರನೆಯದನ್ನು ಬೆಂಬಲಿಸುತ್ತದೆ ಎಂದೂ ಸಾಕ್ಷ್ಯಾಧಾರಗಳ ಮೂಲಕ ವಿವರಿಸುವೆನು.

## ವಿಶ್ವವು ಅನಾದಿಕಾಲದಿಂದ ಅಸ್ತಿತ್ವದಲ್ಲಿರಲಿಲ್ಲ

ಇಪ್ಪತ್ತನೆಯ ಶತಮಾನದಲ್ಲಿ ಖಗೋಳಶಾಸ್ತ್ರದ ಎಷ್ಟು ಪ್ರಗತಿ ಉಂಟಾಯಿತೆಂದರೆ ವಿಶ್ವದ ಪ್ರಾಯವನ್ನು ಅಂದಾಜುಮಾಡಲಾಗಿದೆ. ಹೊಸ ವೀಕ್ಷಣೆಗಳ ಫಲವಾಗಿ ಈ ಪ್ರಾಯದ ಅಂದಾಜನ್ನು ಪರಿಷ್ಕರಿಸಬಹುದಾಗಿದೆ. ಆದರೆ ನೈಸರ್ಗಿಕ ನಿಯಮಗಳ ವೀಕ್ಷಣೆಗಳಿಂದ ವಿಶ್ವದ ಪ್ರಾಯವನ್ನು ಅಂದಾಜು ಮಾಡಲು ಸಾಧ್ಯವಾದುದು ಇಪ್ಪತ್ತನೆಯ ಶತಮಾನದ ಸಂಶೋಧನೆಗಳಲ್ಲಿ ಅತ್ಯಂತ ಮಹತ್ವಪೂರ್ಣವಾದುದಾಗಿದೆ. ಇದು ಪವಿತ್ರ ಖುರ್‌ಆನಿನಲ್ಲಿ ಉಲ್ಲೇಖಿಸಲಾದ ಭವಿಷ್ಯವಾಣಿಯ ಭವ್ಯ ಈಡೇರಿಕೆಯೂ ಆಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: "ಆಕಾಶದ ಚರ್ಮ ಸುಲಿಯಲ್ಪಡುವಾಗ" (81:12).

ಇದು ಖಗೋಳಶಾಸ್ತ್ರದ ಪ್ರಗತಿಯನ್ನು ಸೂಚಿಸುತ್ತದೆ. ಹಿಂದಿನ ಶತಮಾನಗಳಲ್ಲಿ ವಿಶ್ವದ ಪ್ರಾಯವನ್ನು ಕಂಡುಹಿಡಿಯಲು ಸಾಧ್ಯವಿರಲಿಲ್ಲ. ವಾಸ್ತವಿಕ ಸಂಗತಿ ಏನೆಂದರೆ, ಹತ್ತೊಂಬತ್ತನೆಯ ಶತಮಾನದ ತನಕ ಖಗೋಳಶಾಸ್ತ್ರಜ್ಞರಿಗೆ ಗ್ಯಾಲಕ್ಸಿ (ಆಕಾಶಗಂಗೆ) ಏನೆಂದು ತಿಳಿದಿರಲಿಲ್ಲ.

ಇಂದಿನ ಕಾಲದಲ್ಲಿ ನಮಗೆ ಲಭಿಸಿದ ಜ್ಞಾನದ ಪ್ರಕಾರ, ವಿಶ್ವದ ಪ್ರಾಯ ಹದಿನೈದು ಬಿಲಿಯನ್ ವರ್ಷಗಳಾಗಿವೆ. ಒಂದು ವಸ್ತುವಿನ ಪ್ರಾಯವನ್ನು ಗೊತ್ತುಹಚ್ಚಬಹುದಾದರೆ ಆ ವಸ್ತು ಅನಾದಿಯಿಂದ ಅಸ್ತಿತ್ವದಲ್ಲಿರಲಿಲ್ಲ ಎಂದು ಸ್ಪಷ್ಟವಾಗುತ್ತದೆ. ಆದುದರಿಂದ ನಮ್ಮ ವಿಶ್ವ ಸಹ ಅನಾದಿಯಿಂದ ಅಸ್ತಿತ್ವದಲ್ಲಿರಲಿಲ್ಲ.

ವಿಶ್ವದ ಪ್ರಾಯವನ್ನು ನಿರ್ಧರಿಸಿರುವುದು ಗಗನ ವೀಕ್ಷಣೆಗಳಿಂದಾಗಿದೆ. ನಮ್ಮ ವಿಶ್ವವು ಅಸಂಖ್ಯಾತ ಗ್ಯಾಲಕ್ಸಿಗಳನ್ನು ಹೊಂದಿವೆ ಎಂದು ಕಂಡುಕೊಳ್ಳಲಾಗಿದೆ. ಪ್ರತಿಯೊಂದು ಗ್ಯಾಲಕ್ಸಿಯಲ್ಲಿ ಬಿಲಿಯನ್‌ಗಟ್ಟಲೆ ನಕ್ಷತ್ರಗಳು ನಮ್ಮ ಸೂರ್ಯನ ಹಾಗೆ ಇವೆ. 1929ರಲ್ಲಿ ಪ್ರೊಫೆಸರ್ ಎಲ್ವಿನ್‌ಹಬ್ಲ್ ಗ್ಯಾಲಕ್ಸಿಗಳ ಗುಂಪುಗಳನ್ನು ವೀಕ್ಷಿಸಿದಾಗ ಗ್ಯಾಲಕ್ಸಿಗಳು ಪರಸ್ಪರ ಅತಿವೇಗದಿಂದ ಅವುಗಳು ಪರಸ್ಪರ ಹೊಂದಿರುವ ದೂರದ ಪ್ರಮಾಣಕ್ಕೆ ಸರಿಯಾಗಿ ದೂರಕ್ಕೆ ಚಲಿಸುವುದಾಗಿ ಕಂಡುಹಿಡಿದರು. ಇದರಿಂದ ಸ್ಪಷ್ಟವಾಗುವುದೇನೆಂದರೆ, ಬಹಳ ಪುರಾತನ ಕಾಲದಲ್ಲಿ ಅವು ಪರಸ್ಪರ ಬಹಳ ಸಮೀಪವಾಗಿ ಇದ್ದುವು. ಸಾಮಾನ್ಯವಾಗಿ ಅಂಗೀಕರಿಸಲ್ಪಡುವ ಒಂದು ಅಭಿಪ್ರಾಯವೇನೆಂದರೆ, ಅಂದಾಜು ಹದಿನೈದು ಬಿಲಿಯನ್ ವರ್ಷಗಳ ಹಿಂದೆ ಗ್ಯಾಲಕ್ಸಿಗಳ ನಿರ್ಮಾಣಗಳಿಗೆ ಕಾರಣವಾದ ಪದಾರ್ಥವು ಒಂದೇ ಸ್ಥಳದಲ್ಲಿ ಇತ್ತು. ಅದು ಅತ್ಯಂತ ತಾಪಭರಿತವೂ ಗಾಢವೂ ಆಗಿತ್ತು. ಆಗ ಒಂದು ಮಹಾಸ್ಫೋಟ ಉಂಟಾಯಿತು. ಆಗ ಆ ಪದಾರ್ಥವು ಅನೇಕ ಭಾಗಗಳಾಗಿ ಚದುರಿಹೋದುವು ಮತ್ತು ಆ ಭಾಗಗಳು ಒಂದು ಇನ್ನೊಂದರಿಂದ ದೂರ ಸರಿದುವು. ಈ ಭಾಗಗಳಿಂದ ಗ್ಯಾಲಕ್ಸಿಗಳು ಮತ್ತು ನಕ್ಷತ್ರಗಳು ಅಸ್ತಿತ್ವಕ್ಕೆ ಬಂದವು. 1965ರಲ್ಲಿ ಪೆಂಜಿಯಸಿನ್‌ದ್ ವಿಲ್ಸನ್ ಒಂದು ರೇಡಿಯೋ ರೇಡಿಯೇಶನನ್ನು ಕಂಡುಹಿಡಿದರು. ಅದರ ತಾಪದ ಬ್ಲ್ಯಾಕ್‌ಬೋಡಿ ರೇಡಿಯೇಶನ್ ಮೂರು ಕೆಲ್‌ವಿನ್ ಡಿಗ್ರಿಗಳಷ್ಟಿತ್ತು. ಈ ಕಂಡುಹಿಡಿತವು ಮೇಲಿನ ವಾದವನ್ನು ಪುರಸ್ಕರಿಸುತ್ತದೆ.

ಅಮೇರಿಕದ ವಿಜ್ಞಾನಿ ಡಾಕ್ಟರ್ ಹ್ಯಾರಿ ಎಲ್. ಶಿಪ್‌ಮ್ಯಾನ್ (ಯುನಿವರ್ಸಿಟಿ ಆಫ್ ಡೆಲವರೆ) ಬ್ಲ್ಯಾಕ್ ಹೋಲ್ಸ್, ಕ್ವಸಾರ್ಸ್ ಆ್ಯಂಡ್ ಯೂನಿವರ್ಸ್ (BLACK HOLES, QUASARS AND UNIVERSE) ಎಂಬ ಪುಸ್ತಕದಲ್ಲಿ ಕೊನೆಯದಾಗಿ ಹೀಗೆ ಹೇಳುತ್ತಾರೆ:

"ಬಿಗ್ ಬ್ಯಾಂಗ್ ತಿಯರಿ (ಮಹಾಸ್ಫೋಟ ಸಿದ್ಧಾಂತ) ಒಂದು ಪ್ರಶ್ನೆಗೆ ಉತ್ತರ ಕೊಡದೆ ಬಿಟ್ಟಿದೆ. ಮಹಾಸ್ಫೋಟ ಸಂಭವಿಸಲು ಕಾರಣವಾದ ಪದಾರ್ಥವನ್ನು ಯಾರು ಸೃಷ್ಟಿಸಿದರು? ಇದಕ್ಕೆ ಖಗೋಳ ಶಾಸ್ತ್ರಜ್ಞರಲ್ಲಿ ಉತ್ತರವಿಲ್ಲ. ವಿಶ್ವದ ಉದ್ಭವದ ಪ್ರಾರಂಭಿಕ ಕ್ಷಣಗಳ ಕಡೆಗೆ ನಾವು ಹಿಂದಿರುಗಿ ನೋಡಬಹುದು. ಆದರೆ ನಮ್ಮ ನೋಟ ಅಲ್ಲಿಯೇ ನಿಲ್ಲುತ್ತದೆ. ಈ ಪುಸ್ತಕ ದಾರ್ಶನಿಕನಿಗೂ ಧರ್ಮಶಾಸ್ತ್ರಜ್ಞನಿಗೂ ಸೃಷ್ಟಿಯ ಬಗ್ಗೆ ಒಂದು ಸಮಸ್ಯೆಯನ್ನು ಪರಿಹರಿಸಲು ಸಹಾಯ ನೀಡುತ್ತದೆ." (ಪುಟ 288).

ಪವಿತ್ರ ಖುರ್‌ಆನ್ ಸರ್ವಶಕ್ತನಾದ ದೇವನ ಅಸ್ತಿತ್ವದ ಬಗ್ಗೆ ಹೀಗೆ ಹೇಳುತ್ತದೆ: "ಕೊನೆಗೆ ಎಲ್ಲವೂ ನಿನ್ನ ಪ್ರಭುವಿನ ಬಳಿಗೆ ಬಂದು ಸೇರುವುವು." (53:43).

ಪವಿತ್ರ ಖುರ್‌ಆನ್ ದೇವನ ಅಸ್ತಿತ್ವದ ಬಗ್ಗೆ ಬಹಳ ಸ್ಪಷ್ಟವಾಗಿ

ಹೀಗೆ ಹೇಳುತ್ತದೆ: **"ಅವಿಶ್ವಾಸಿಗಳು ಕಾಣುವುದಿಲ್ಲವೇ – ಆಕಾಶಗಳೂ ಭೂಮಿಯೂ ಅನ್ಯೋನ್ಯ ಒಟ್ಟುಗೂಡಿಕೊಂಡಿದ್ದುವು. ಮತ್ತೆ ನಾವು ಅವುಗಳನ್ನು ಬೇರ್ಪಡಿಸಿದೆವು. ಪ್ರತಿಯೊಂದು ಜೀವಿಯನ್ನು ನಾವು ನೀರಿನಿಂದ ಸೃಷ್ಟಿಸಿದೆವು. ಅವರು ನಂಬುವುದಿಲ್ಲವೇ?"** (21:31).

(ಈ ವಚನದ ಬಗ್ಗೆ ಅತ್ಯುತ್ತಮ ವ್ಯಾಖ್ಯಾನಕ್ಕೋಸ್ಕರ The Bible, the Quran and Science, ಲೇಖಕ: MAURICE BUCAILLE ನೋಡಿರಿ).

ಭೌತಶಾಸ್ತ್ರದ ಎಂಟ್ರೊಪಿ ನಿಯಮದಿಂದ ವಿಶ್ವವು ಅನಾದಿಯಿಂದ ಅಸ್ತಿತ್ವದಲ್ಲಿರಲಿಲ್ಲ ಎಂದು ನಿಷ್ಕರ್ಷಿಸಲಾಗಿದೆ. ಈ ನಿಯಮ ಹೀಗೆ ಪ್ರತಿಪಾದಿಸುತ್ತದೆ: ಬಿಸಿ ಪದಾರ್ಥಗಳು ಮತ್ತು ಅದಕ್ಕಿಂತ ತಣ್ಣಗಿರುವ ಪದಾರ್ಥಗಳು ಪರಸ್ಪರ ತಾಗಿಕೊಂಡಿದ್ದರೆ ಶಕ್ತಿಯು ಬಿಸಿ ಪದಾರ್ಥದಿಂದ ತಣ್ಣಗಿರುವುದಕ್ಕೆ ಹರಿಯುವುದು. ಕೊನೆಗೆ ಎಲ್ಲ ಪದಾರ್ಥಗಳ ತಾಪಮಾನ ಸಾರ್ವತ್ರಿಕವಾಗಿ ಸಮಾನವಾಗಿರುವುದು, ಪ್ರಯೋಜನಕರವಾದ ಶಕ್ತಿಯು ಇಲ್ಲದಾಗುವುದು ಮತ್ತು ಜೀವನವೇ ಇಲ್ಲದಾಗುವುದು. ಎಂಟ್ರೊಪಿ ನಿಯಮ ಮತ್ತು ಮಹಾಸ್ಫೋಟಕ್ಕೆ ಸಂಬಂಧಿಸಿ ಡಾಕ್ಟರ್ ಎಡ್ವಿನ್ ಲೂತರ್ ಕೆಸ್ಸೆಲ್ (ಪ್ರೊಫೆಸರ್ ಆಫ್ ಬಯೋಲಜಿ, ಯುನಿವರ್ಸಿಟಿ ಆಫ್ ಸಾನ್ ಫ್ರಾನ್ಸಿಸ್ಕೋ) ಹೀಗೆ ಬೆಳಕು ಬೀರಿರುವರು:

"ಇಲ್ಲಿ ವಿವರಿಸಲಾದ ವೈಜ್ಞಾನಿಕ ಸಾಕ್ಷ್ಯಗಳನ್ನು ಎಲ್ಲ ವಿಜ್ಞಾನಿಗಳು ಪ್ರಾಮಾಣಿಕವಾಗಿ, ಪೂರ್ವಗ್ರಹವಿಲ್ಲದೆ ತಮ್ಮ ಸ್ವಂತ ಸಂಶೋಧನೆಗಳನ್ನು ಮೌಲ್ಯ ಮಾಪನ ಮಾಡುವ ಹಾಗೆ ಮೌಲ್ಯ ಮಾಪನ ಮಾಡಲು ಸಿದ್ಧರಾಗುವುದಾದರೆ; ಅವರು ತಮ್ಮ ಭಾವೋದ್ವೇಗಗಳ ಮೇಲೆ ತಮ್ಮ ವಿವೇಕ ಅಧಿಕಾರ ಚಲಾಯಿಸುವಂತೆ ಮಾಡುವುದಾದರೆ; ಅವರು ಒಬ್ಬ ದೇವನಿದ್ದಾನೆ ಎಂದು ನಂಬಲು ನಿರ್ಬಂಧಿಸಲ್ಪಡುವರು. ವಾಸ್ತವಿಕಾಂಶಗಳಿಗೆ ಅನುಯೋಜ್ಯವಾದ ತೀರ್ಪು ಇದೇ ಆಗಿರುತ್ತದೆ. ತೆರೆದ ಮನಸ್ಸಿನಿಂದ ವಿಜ್ಞಾನವನ್ನು ಅಧ್ಯಯನ ಮಾಡುವುದಾದರೆ ಪ್ರಥಮ ಕಾರಣದ ಆವಶ್ಯಕತೆಯನ್ನು ಸೂಚಿಸುವುದು. ಇದನ್ನೇ ನಾವು ದೇವನೆಂದು ಹೇಳುತ್ತೇವೆ." (ಎವಿಡೆನ್ಸ್ – ಪುಟ 52).

ನಮ್ಮ ವಿಶ್ವ ಅನಾದಿಕಾಲದಿಂದ ಅಸ್ತಿತ್ವದಲ್ಲಿತ್ತೆಂಬ ಅಭಿಪ್ರಾಯವನ್ನು ರಸಾಯನಶಾಸ್ತ್ರ ಸಹ ವಿರೋಧಿಸುತ್ತದೆ. ರಸಾಯನ ಶಾಸ್ತ್ರಜ್ಞ ಡಾಕ್ಟರ್ ಜಾನ್ ಕ್ಲೀವ್‌ಲೇಂಡ್ (ಪ್ರೊಫೆಸರ್ ಆಫ್ ಕೆಮಿಸ್ಟ್ರಿ) ಹೀಗೆ ಬರೆದಿದ್ದಾರೆ:

"ಪದಾರ್ಥವು ಅಸ್ತಿತ್ವರಹಿತವಾಗುತ್ತಾ ಇದೆ, ಕೆಲವು ಅತ್ಯಂತ ನಿಧಾನವಾಗಿಯೂ ಬೇರೆ ಕೆಲವು ಅತ್ಯಂತ ವೇಗವಾಗಿಯೂ ಎಂದು ರಸಾಯನ ಶಾಸ್ತ್ರ ಬಹಿರಂಗಪಡಿಸುತ್ತದೆ. ಆದುದರಿಂದ ಪದಾರ್ಥದ ಅಸ್ತಿತ್ವ ಅನಾದಿ ಅಲ್ಲ. ಇದರ ಪರಿಣಾಮವಾಗಿ ಸ್ಪಷ್ಟವಾಗುವುದೇನೆಂದರೆ ಪದಾರ್ಥಕ್ಕೆ ಒಂದು ಪ್ರಾರಂಭವಿರಬೇಕಾಗಿದೆ.

(ಎವಿಡೆನ್ಸ್ – ಪುಟ 41).

ವಿಶ್ವದಲ್ಲಿ ರೇಡಿಯೋ ಏಕ್ಟಿವ್ ಮೂಲವಸ್ತುಗಳು ಇರುವುದರಿಂದ ವಿಶ್ವವು ಅನಾದಿಕಾಲದಿಂದ ಅಸ್ತಿತ್ವದಲ್ಲಿರಲಿಲ್ಲ ಎಂದು ಸೂಚಿಸಲ್ಪಡುತ್ತದೆ.

ಡಾಕ್ಟರ್ ಡೊನಾಲ್ಡ್ ರೋಬರ್ಟ್‌ಕಾರ್ (ಜಿಯೋ ಕೆಮಿಸ್ಟ್) ಹೀಗೆ ಬರೆಯುತ್ತಾರೆ: "ವಿಶ್ವವು ಅನಾದಿಯಾಗಿದ್ದುದಾದರೆ ಅದರಲ್ಲಿ ರೇಡಿಯೋ ಆಕ್ಟಿವ್ ವಸ್ತುಗಳು ಬಾಕಿಯಾಗಿ ಉಳಿಯುತ್ತಿರಲಿಲ್ಲ."

(ಎವಿಡೆನ್ಸ್ – ಪುಟ 134).

ಸಂಕ್ಷಿಪ್ತವಾಗಿ ಹೇಳುವುದಾದರೆ, ಖಗೋಳಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಭೂಗರ್ಭಶಾಸ್ತ್ರ ಇವೆಲ್ಲವೂ ವಿಶ್ವವು ಅನಾದಿಯಿಂದ ಇತ್ತೆಂಬ ಅಭಿಪ್ರಾಯವನ್ನು ಒಮ್ಮತದೊಂದಿಗೆ ತಿರಸ್ಕರಿಸುತ್ತವೆ.

ದೇವನ ಅಸ್ತಿತ್ವವನ್ನು ನಂಬದ ವಿಜ್ಞಾನಿಗಳು ಏನು ಹೇಳುತ್ತಾರೆ? ಎಂಬ ಪ್ರಶ್ನೆ ಕೇಳಬಹುದಾಗಿದೆ. ಡಾಕ್ಟರ್ ವಿ. ಎನ್. ಕೊಮೊರೋವ್ (Dr. V. N. KOMOROV) ತನ್ನ ಫ್ಯಾಸ್ಸಿನೇಟಿಂಗ್ ಎಸ್ಟ್ರೋನೊಮೀ – (FASCINATING ASTRONO-MY) ಎಂಬ ಪುಸ್ತಕದಲ್ಲಿ ಸೋವಿಯಟ್ ಯೂನಿಯನಿನ ಒಬ್ಬ ಪ್ರಮುಖ ದಾರ್ಶನಿಕ Pyotr Fedoseyev ಹೇಳಿದ ಮಾತುಗಳನ್ನು ಹೀಗೆ ಉಲ್ಲೇಖಿಸುತ್ತಾರೆ:

"ಲೌಕಿಕ ದರ್ಶನಶಾಸ್ತ್ರ, ಭೌತಿಕ ಲೋಕದ ಸೃಷ್ಟಿ ಒಂದು ಸರ್ವಶ್ರೇಷ್ಠ ಪ್ರಜ್ಞೆ ಅಥವಾ ಶಕ್ತಿಯಿಂದ ಸೃಷ್ಟಿಸಲ್ಪಟ್ಟಿತೆಂದು ಒಪ್ಪುವುದಿಲ್ಲ. ಈ ವಿಶ್ವವು ಇಪ್ಪತ್ತು ಬಿಲಿಯನ್ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿತು ಎಂದು ನಾವು ಅಂಗೀಕರಿಸುವುದಾದರೆ, ದಾರ್ಶನಿಕ ನಿಲುವು ಅನುಸರಿಸಿ ಮುಖ್ಯವಾಗಿ ತಿಳಿದುಕೊಳ್ಳಬೇಕಾದುದೇನೆಂದರೆ, ಇದರ ಮೂಲ ಪದಾರ್ಥವು ಬೃಹತ್ ಗಾತ್ರದಲ್ಲಿ ಸ್ವಯಂ ಸೃಷ್ಟಿಗೊಂಡಿತು. ಇದನ್ನು ಭೌತಿಕಶಾಸ್ತ್ರವು ಸ್ಪಷ್ಟರೂಪದಲ್ಲಿ ವಿಶದೀಕರಿಸಬೇಕಾಗಿದೆ. ಹಲವು ವಿಶ್ವಗಳು ಸಂಕೀರ್ಣ ವ್ಯವಸ್ಥೆಯೊಂದಿಗೆ ಅಸ್ತಿತ್ವಕ್ಕೆ ಬಂದುದನ್ನು ಸಹ ಕಲ್ಪಿಸಬಹುದಾಗಿದೆ. ಪ್ರಕೃತಿ ವಿಜ್ಞಾನಿಗಳು ಇಷ್ಟರವರೆಗೆ ಸಂಗ್ರಹಿಸಿದ ಮಾಹಿತಿಗಳನ್ನು ಆಧಾರವಾಗಿಟ್ಟುಕೊಂಡು ಮಾಡುವ ಕಲ್ಪನೆಗಳಿಂದ ದಾರ್ಶನಿಕ ಕಲ್ಪನೆಗಳನ್ನು ಬೇರೆಯಾಗಿ ತಿಳಿದುಕೊಳ್ಳಬೇಕಾಗಿದೆ. ದಾರ್ಶನಿಕ ಕಲ್ಪನೆಗಳಲ್ಲಿ ವಿಶ್ವದ ಅಧ್ಯಯನ ಮಾಡುವಾಗ ಪ್ರಕೃತಿಶಾಸ್ತ್ರ ಮುಂದೆ ಕಂಡುಹಿಡಿಯಬಹುದಾದ ಎಲ್ಲ ರಹಸ್ಯಗಳೂ ಅಡಕವಾಗಿವೆ."

(The Fascinating Astronomy - Page 137).

ಮೇಲಿನ ಉಲ್ಲೇಖದಿಂದ ಸ್ಪಷ್ಟವಾಗುವುದೇನೆಂದರೆ, ದೇವನ ಅಸ್ತಿತ್ವವನ್ನು ನಿರಾಕರಿಸುವವರ ಬಳಿಯಲ್ಲಿ ತಮ್ಮ ವಾದವನ್ನು ಬೆಂಬಲಿಸುವ ಯಾವ ಸಾಕ್ಷ್ಯಾಧಾರವೂ ಇಲ್ಲ. ಅವರು ತಮ್ಮ ಸಿದ್ಧಾಂತಗಳಿಗನುಸಾರವಾಗಿ ಮಾತ್ರ ವಾದಿಸುತ್ತಾರೆ. ವಿಶ್ವದ ನಿರ್ಮಾಣಕ್ಕೆ ಕಾರಣವಾದ ಮೂಲ ಪದಾರ್ಥ ಎಲ್ಲಿಂದ ಅಸ್ತಿತ್ವಕ್ಕೆ ಬಂತು ಎಂದು ಅವರಿಗೆ ತಿಳಿದಿಲ್ಲ. ಅವರು ತಮ್ಮ ದಾರ್ಶನಿಕ ಮನೋಭಾವದ ಕಾರಣದಿಂದ ಪ್ರತೀಕ್ಷೆ ಮಾಡುವುದೇನೆಂದರೆ, ವಿಜ್ಞಾನವು ಮುಂದಿನ ಕಾಲದಲ್ಲಿ ಇದಕ್ಕೆ ಉತ್ತರವನ್ನು ಒದಗಿಸಿಕೊಡುವುದು. ಮುಂದಿನಕಾಲದಲ್ಲಿ ವಿಜ್ಞಾನವು ಮೂಲ ಪದಾರ್ಥವು ಉದ್ಭವಿಸಿದ ಮೂಲವನ್ನು ಕಂಡು ಹಿಡಿದರೆ, ದೇವ ವಿಶ್ವಾಸಿಗಳು, ಆ ಮೂಲವು ಹೇಗೆ ಅಸ್ತಿತ್ವಕ್ಕೆ ಬಂತು? ಎಂದು ಕೇಳುವರು.

ಪವಿತ್ರ ಖುರ್‌ಆನಿನ "ಎಲ್ಲ ಕಾರ್ಯಕಾರಣ ಸರಣಿಗಳು ನಿನ್ನ ಪ್ರಭುವಿನಲ್ಲಿ ಕೊನೆಗೊಳ್ಳುತ್ತವೆ" (53:54) ಇದರ ವ್ಯಾಖ್ಯಾನವಾಗಿ ವಾಗ್ದತ್ತ ಮಸೀಹ್(ಅ) ಹೀಗೆ ಹೇಳುತ್ತಾರೆ:

"ಈ ಬ್ರಹ್ಮಾಂಡದಲ್ಲಿ ಗೋಚರಾಗೋಚರಗಳಾದ ಎಲ್ಲವೂ

**48ನೇ ಪುಟಕ್ಕೆ**

# ಮುಹಮ್ಮದ್ ಪೈಗಂಬರ್$^{(ಸ)}$ ಸರ್ವಶ್ರೇಷ್ಠ ಮಾದರಿ ಪುರುಷ

**ಸಂ. : ಮುಹಮ್ಮದ್ ಯೂಸುಫ್**

ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ **"ನಿಮಗೆ ಅಲ್ಲಾಹನ ಸಂದೇಶವಾಹಕನಲ್ಲಿ ಖಂಡಿತವಾಗಿಯೂ ಉತ್ತಮ ಮಾದರಿ ಇದೆ" ಎಂದು ಹೇಳುತ್ತಾನೆ.** (33:22)

ಅಲ್ಲಾಹನು ಮುಹಮ್ಮದ್ ಪೈಗಂಬರ್$^{(ಸ)}$ರವರನ್ನು ಸಂಬೋಧಿಸಿ ಪವಿತ್ರ ಖುರ್‌ಆನಿನಲ್ಲಿ **"ನೀನು ಅತ್ಯುತ್ಕೃಷ್ಟವಾದ ಗುಣಸ್ವಭಾವವನ್ನು ಹೊಂದಿರುವೆ" ಎಂದು ಸಹ ಹೇಳಿದ್ದಾನೆ.** (68:5)

ಹಝ್ರತ್ ಮುಹಮ್ಮದ್ ಪೈಗಂಬರ್$^{(ಸ)}$ ಅವರ ಸ್ವಭಾವದ ಬಗ್ಗೆ ಅವರ ಧರ್ಮಪತ್ನಿಯಾದ ಹಝ್ರತ್ ಆಯಿಶ(ರಝಿಯಲ್ಲಾಹು ಅನ್‌ಹಾ)ರವರೊಡನೆ ಕೇಳಿದಾಗ ಅವರು ನೀಡಿದ ಉತ್ತರ: "ಅವರ ಸ್ವಭಾವ ಖುರ್‌ಆನೇ ಆಗಿತ್ತು" ಎಂದಾಗಿದೆ. ಅಂದರೆ ಒಬ್ಬ ಪರಿಪೂರ್ಣ ಮನುಷ್ಯನಿಗೆ ಇರಬೇಕಾದ, ಪವಿತ್ರ ಖುರ್‌ಆನಿನಲ್ಲಿ ವಿವರಿಸಲಾದ ಎಲ್ಲ ಸದ್ಗುಣಗಳು ಸಂಪೂರ್ಣವಾಗಿಯೂ ಮುಹಮ್ಮದ್ ಪೈಗಂಬರ್$^{(ಸ)}$ ಅವರಲ್ಲಿ ಸಮ್ಮಿಳಿತವಾಗಿದ್ದವು ಎಂದಾಗಿದೆ.

ಒಬ್ಬ ಮನುಷ್ಯನು ಇತರ ಮನುಷ್ಯರಿಗೆ ಮಾದರಿ ಪುರುಷನಾಗಬೇಕಿದ್ದರೆ ಆ ಮಾದರಿ ಪುರುಷನಿಗೆ ಮನುಷ್ಯ ಜೀವಿತದ ವಿವಿಧ ಸಂದರ್ಭಗಳು ಒದಗಿ ಬರಬೇಕಾಗಿದೆ. ಇಲ್ಲವಾದರೆ ಆ ಮನುಷ್ಯನ ಸ್ವಭಾವವನ್ನು ತಿಳಿಯಲು ಅಸಾಧ್ಯ. ಉದಾಹರಣೆಗೆ, ಜೀವಮಾನವೆಲ್ಲ ಬಡತನದಲ್ಲಿ ಕಳೆದವನು ಶ್ರೀಮಂತನಿಗೆ ಮಾದರಿಯಾಗಲಾರ. ಹಾಗೆಯೇ ಜೀವಮಾನವಿಡೀ ಶ್ರೀಮಂತಿಕೆಯಲ್ಲಿ ಕಳೆದವನು ಬಡವರಿಗೆ ಮಾದರಿಯಾಗಲಾರ. ಆದರೆ ಮುಹಮ್ಮದ್ ಪೈಗಂಬರ್$^{(ಸ)}$ ಅವರಿಗೆ ಮಾನವ ಜೀವನದ ಎಲ್ಲ ಸಂದರ್ಭಗಳು ಒದಗಿ ಬಂದು ಅವರು ಮಾನವರೆಲ್ಲರಿಗೂ ಮಾದರಿ ಪುರುಷರಾದರು. ಅವರು ತಬ್ಬಲಿಗಳಿಗೂ ಯುವಕರಿಗೂ ವೃದ್ಧರಿಗೂ ಅವಿವಾಹಿತರಿಗೂ ವಿವಾಹಿತರಿಗೂ ಹೆತ್ತವರಿಗೂ ಬಂಧುಬಳಗದವರಿಗೂ ಒಡನಾಡಿಗಳಿಗೂ ನೆರೆಹೊರೆಯವರಿಗೂ ಬಡವರಿಗೂ ಶ್ರೀಮಂತರಿಗೂ ಸೇವಕರಿಗೂ ಮಾಲಿಕರಿಗೂ ಪ್ರಜೆಗಳಿಗೂ ರಾಜರಿಗೂ ಜಯಾಪಜಯ ಹೊಂದುವ ಯೋಧರಿಗೂ ಸಂತರಿಗೂ ಧರ್ಮಸುಧಾರಕರಿಗೂ ಸಾಮಾನ್ಯ ಮನುಷ್ಯರಿಗೂ ಮಾದರಿ ಪುರುಷರಾಗಿದ್ದರು. ಎಲ್ಲ ವಿಧದಲ್ಲೂ ತಾನೊಬ್ಬ ಪರಿಪೂರ್ಣ ಮಾನವ ಎಂದು ಅವರು ಜಗತ್ತಿಗೆ ತೋರಿಸಿಕೊಟ್ಟರು.

## ಬಾಲ್ಯಕಾಲ

ಮುಹಮ್ಮದ್ ಪೈಗಂಬರ್$^{(ಸ)}$ ಜನ್ಮತಾಳುವುದಕ್ಕೆ ಸುಮಾರು ಮೂರು ತಿಂಗಳಿಗೆ ಮುಂಚೆಯೇ ಅವರ ತಂದೆ ಮೃತಪಟ್ಟಿದ್ದರು. ಪೈಗಂಬರರಿಗೆ 6 ವರ್ಷ ಪ್ರಾಯವಾದಾಗ ಅವರ ತಾಯಿ ಇಹಲೋಕ ತ್ಯಜಿಸಿದರು. ಹಾಗೆ ತಬ್ಬಲಿಯಾಗಿದ್ದರೂ ಪೈಗಂಬರರು ತನ್ನ ಉತ್ತಮ ಸ್ವಭಾವದಿಂದ ಎಲ್ಲರ ಪ್ರೀತಿಗೆ ಪಾತ್ರನಾದ ಬಾಲಕರಾದರು. ಬಾಲ್ಯಕಾಲದಲ್ಲಿ ಅವರು ತನ್ನ ಚಿಕ್ಕಪ್ಪನ ಪಾಲನೆ ಪೋಷಣೆಯಲ್ಲಿ ಬೆಳೆದರು. ಚಿಕ್ಕಪ್ಪ ಅಬೂತಾಲಿಬ್ ಬಡವರಾಗಿದ್ದರು. ಊಟದ ಸಮಯದಲ್ಲಿ ಚಿಕ್ಕಪ್ಪನ ಮಕ್ಕಳು ತಮ್ಮ ತಾಯಿಯ ಸುತ್ತುಮುತ್ತು ಸೇರಿಕೊಂಡು ಹೆಚ್ಚು ಆಹಾರವನ್ನು ಪಡೆಯಲು ಹುರುಡು ಮಾಡುತ್ತಿದ್ದರು. ಆದರೆ ಬಾಲಕ ಮುಹಮ್ಮದ್ ಒಮ್ಮೆಯಾದರೂ ಊಟಕ್ಕಾಗಿ ಹಾಗೆ ಪೈಪೋಟಿ ನಡೆಸಿದವರಲ್ಲ ಎಂದು ಅಬೂತಾಲಿಬರ ಪರಿಚಾರಿಕೆ ಹೇಳುತ್ತಿದ್ದಳು. ಕೆಲವು ಸಂದರ್ಭಗಳಲ್ಲಿ ಚಿಕ್ಕಮ್ಮ ತನ್ನ ಮಕ್ಕಳಿಗೆ ಊಟ ಬಡಿಸಿಕೊಟ್ಟ ಬಳಿಕ ಬಾಲಕ ಮುಹಮ್ಮದರಿಗೆ ಏನೂ ಉಳಿಯುತ್ತಿರಲಿಲ್ಲ. ಆದರೆ ಬಾಲಕ ಮುಹಮ್ಮದ್ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ತನ್ನ ಪಾಡಿಗೆ ನಿಶ್ಚಿಂತೆಯಿಂದ ಇರುತ್ತಿದ್ದರು.

## ಯೌವ್ವನ

ಪೈಗಂಬರರಿಗೆ ಸುಮಾರು 20 ವರ್ಷ ಪ್ರಾಯವಾದಾಗ ಅವರು ಮಕ್ಕದಲ್ಲಿರುವ ಒಂದು ಸಂಘದ ಸದಸ್ಯರಾಗಿ ಸೇರ್ಪಡೆಗೊಂಡರು. ಅನ್ಯಾಯಕ್ಕೊಳಗಾದ ಯಾರಿಗೇ ಆಗಲಿ, ನ್ಯಾಯ ದೊರಕುವ ತನಕ ಆತನಿಗೆ ನೆರವಾಗುವುದಾಗಿ ಆ ಸಂಘದ ಪ್ರತಿಯೊಬ್ಬ ಸದಸ್ಯ ಪ್ರತಿಜ್ಞೆ ಮಾಡಬೇಕಿತ್ತು. ಆ ಸಂಘದ ಸದಸ್ಯರಾಗಿದ್ದ ಪೈಗಂಬರರು ಯಾರಾದರೂ ಅನ್ಯಾಯ, ಅಕ್ರಮ, ದೌರ್ಜನ್ಯಗಳಿಗೆ ಈಡಾಗಿದ್ದಾರೆಂದು ತಿಳಿದ ಕೂಡಲೇ ಅವರ ಸಹಾಯಕ್ಕೆ ಸನ್ನದ್ಧರಾಗುತ್ತಿದ್ದರು.

ಅರೇಬಿಯಾದ ಹವಾಮಾನವನ್ನನುಸರಿಸಿ ಜನರು ಅಲ್ಲಿ ಬೇಗನೇ ಪ್ರೌಢಾವಸ್ಥೆಯನ್ನು ಪಡೆದು ಲೈಂಗಿಕಾಸಕ್ತಿಯನ್ನು ಹೊಂದುತ್ತಾರೆ. ಆದರೆ ಯುವಕನಾದ ಮುಹಮ್ಮದ್ ಪೈಗಂಬರ್$^{(ಸ)}$ ತನ್ನ 25 ವರ್ಷ ಪ್ರಾಯದ ವರೆಗೆ ಲೈಂಗಿಕವಾದ ಯಾವುದೇ ಕಳಂಕಕ್ಕೆ ಗುರಿಯಾಗದೆ ಪರಿಶುದ್ಧನಾದ ಜೀವನವನ್ನು ನಡೆಸಿದರು.

## ವೈವಾಹಿಕ ಜೀವನ

ಅವರ ಸತ್ಯಸಂಧತೆಯೂ ಪ್ರಾಮಾಣಿಕತೆಯೂ ಬಹಳ ಪ್ರಸಿದ್ಧವಾಗಿತ್ತು. ಜನರು ಅವರನ್ನು ಸಿದ್ದೀಖ್ (ಸತ್ಯಸಂಧ) ಎಂದೂ ಅಮೀನ್ (ವಿಶ್ವಾಸಯೋಗ್ಯ, ಪ್ರಾಮಾಣಿಕ) ಎಂದೂ ಕರೆಯುತ್ತಿದ್ದರು. ಪೈಗಂಬರರ ಖ್ಯಾತಿಯನ್ನು ಕೇಳಿದ ಮಕ್ಕದ ಕುಲೀನ ಸ್ತ್ರೀಯಾದ ಹಝ್ರತ್ ಖದೀಜ$^{(ರ)}$ ಲಾಭದಲ್ಲಿ ಪಾಲು ನೀಡುವ ಶರತ್ತಿನಲ್ಲಿ ಅವರನ್ನು ಸಿರಿಯಾ ದೇಶಕ್ಕೆ ವ್ಯಾಪಾರಕ್ಕೆ ಕಳುಹಿಸಿದರು. ಖದೀಜರವರ ಒಬ್ಬ ಸೇವಕ ಸಹ ಆ ಯಾತ್ರೆಯಲ್ಲಿ ಪೈಗಂಬರರ ಜೊತೆಗಿದ್ದನು. ಪೈಗಂಬರರ ಸತ್ಯಸಂಧತೆ, ಪರಿಶುದ್ಧ ಸ್ವಭಾವ, ಸಾತ್ವಿಕತೆ ಎಂಬೀ ಗುಣಗಳ ಕಾರಣದಿಂದ ವ್ಯಾಪಾರದಲ್ಲಿ ಖದೀಜರಿಗೆ ಮೊದಲೆಂದೂ ಸಿಗದಷ್ಟು ಅಧಿಕ ಲಾಭ ದೊರಕಿತು. ಪೈಗಂಬರರ ಸತ್‌ಸ್ವಭಾವ ಮತ್ತು ಸದ್ವರ್ತನೆ ಪೈಗಂಬರರ ಜೊತೆಗಿದ್ದ ಖದೀಜರವರ ಸೇವಕನಿಗೆ ತುಂಬಾ ಮೆಚ್ಚಿಗೆಯಾಯಿತು. ಯಾತ್ರೆಯ ವಿವರ ಮತ್ತು ವ್ಯಾಪಾರದಲ್ಲಿ ದೊರೆತ ಲಾಭದ ಬಗ್ಗೆ ತನ್ನ ಸೇವಕನ ಮೂಲಕ ಅರಿತ ಖದೀಜರಿಗೆ ಪೈಗಂಬರರ ಮೇಲೆ ಬಹಳ ಗೌರವ ಮೂಡಿಬಂತು. ಪೈಗಂಬರರು ತನ್ನನ್ನು ಧರ್ಮಪತ್ನಿಯಾಗಿ ಸ್ವೀಕರಿಸಬೇಕೆಂಬ ಕೋರಿಕೆಯನ್ನು ಮಕ್ಕದ

ಆ ಕುಲೀನ ಸ್ತ್ರೀಯಾದ ಹಝ್ರತ್ ಖದೀಜ[ರ] ಬಡವರಾಗಿದ್ದ ಹಝ್ರತ್ ಮುಹಮ್ಮದ್ ಪೈಗಂಬರ್[ಸ]ರವರ ಮುಂದಿಟ್ಟರು. ಪೈಗಂಬರರು ಆ ಅಪೇಕ್ಷೆಯನ್ನು ಸ್ವೀಕರಿಸಿದರು. ಆಗ ಹಝ್ರತ್ ಖದೀಜರವರ ವಯಸ್ಸು 40 ವರ್ಷ ಹಾಗೂ ಹಝ್ರತ್ ಪೈಗಂಬರರ ಪ್ರಾಯ 25 ವರ್ಷವಾಗಿತ್ತು. 25 ವರ್ಷಗಳ ಕಾಲದ ಆ ದಾಂಪತ್ಯ ಜೀವನ ಬಹಳ ಆದರ್ಶಕರವಾಗಿತ್ತು.

ಹಝ್ರತ್ ಖದೀಜರವರ ಮರಣದ ಬಳಿಕ ಹಝ್ರತ್ ಪೈಗಂಬರರು ಬೇರೆಯೂ ವಿವಾಹವಾಗಿದ್ದರು. ಹಝ್ರತ್ ಆಯಿಶ[ರ] ಹೊರತು ಅವರು ಮದುವೆಯಾದ ಮಹಿಳಾ ಮಣಿಗಳೆಲ್ಲರೂ ವಿಧವೆಯರು ಅಥವಾ ವಿವಾಹ ವಿಚ್ಛೇದ ಹೊಂದಿದವರಾಗಿದ್ದರು. ಮಹಿಳೆಯರನ್ನು ಚರಸೊತ್ತುಗಳಂತೆ ಪರಿಗಣಿಸುತ್ತಿದ್ದ ಅರಬಿ ಜನತೆಯ ಮಧ್ಯದಲ್ಲಿದ್ದ ಪೈಗಂಬರರು ತನ್ನ ಪತ್ನಿಯರೊಡನೆ ಬಹಳ ಪ್ರೀತಿ ಮತ್ತು ಗೌರವದಿಂದಲೂ ಸಮಾನವಾಗಿಯೂ ವರ್ತಿಸಿದರು.

**"ನಿಮ್ಮ ಪೈಕಿ ತನ್ನ ಧರ್ಮಪತ್ನಿಯೊಡನೆ ಉತ್ತಮವಾದ ರೀತಿಯಲ್ಲಿ ವರ್ತಿಸುವವನೇ ಉತ್ತಮನು. ನಾನು ನನ್ನ ಧರ್ಮಪತ್ನಿಯೊಡನೆ ಉತ್ತಮವಾದ ರೀತಿಯಲ್ಲಿ ವರ್ತಿಸುತ್ತೇನೆ"** ಎಂದು ಹಝ್ರತ್ ಪೈಗಂಬರರು ಬೋಧಿಸಿದರು.

## ಸ್ತ್ರೀಯರಿಗೆ ಸ್ಥಾನಮಾನ

ಸಮುದಾಯದಲ್ಲಿ ಸ್ತ್ರೀಯರಿಗೆ ಸ್ಥಾನಮಾನ ನೀಡುವ ವಿಚಾರದಲ್ಲಿ ಮತ್ತು ಪಕ್ಷಪಾತರಹಿತವಾದ ನ್ಯಾಯ ದೊರಕಿಸಿಕೊಡುವುದರಲ್ಲಿ ಪೈಗಂಬರರು ಬಹಳ ಶ್ರದ್ಧೆವಹಿಸಿದ್ದರು. ಸ್ತ್ರೀಯರಿಗೆ ವಾರಸು ಹಕ್ಕನ್ನು ದೊರಕಿಸಿಕೊಟ್ಟ ಮೊತ್ತ ಮೊದಲಿನ ಧರ್ಮ ಇಸ್ಲಾಂ ಆಗಿದೆ. ಇಸ್ಲಾಮಿಗೆ ಮೊದಲು ಯಾವುದೇ ಧರ್ಮ ಸ್ತ್ರೀಯರಿಗೆ ವಾರಸು ಹಕ್ಕನ್ನೂ ಆಕೆಯ ಸೊತ್ತಿನ ಮೇಲೆ ಆಕೆಗೆ ಪೂರ್ಣಾಧಿಕಾರವನ್ನೂ ನೀಡಿಲ್ಲ.

ಯಾತ್ರೆಯಲ್ಲಿ ಸ್ತ್ರೀಯರಿದ್ದರೆ, ಅವರಿಗೆ ದಣಿವು ಮತ್ತು ಕ್ಲೇಶ ಉಂಟಾಗದಂತೆ ಸವಾರಿ ಮೃಗಗಳನ್ನು ನಡೆಸಬೇಕೆಂದು ಪೈಗಂಬರ್ ನಿರ್ದೇಶಿಸುತ್ತಿದ್ದರು. ಪುರುಷರು ಶೀಘ್ರವಾಗಿ ಸವಾರಿ ಮೃಗಗಳನ್ನು ಓಡಿಸುವಾಗ, **"ಗಾಜುಗಳ ಬಗ್ಗೆ ಗಮನಿಸಿರಿ"** ಎಂದು ಪೈಗಂಬರರು ಹೇಳುತ್ತಿದ್ದರು. ಅಂದರೆ, ಸ್ತ್ರೀಯರು ಯಾತ್ರಾ ತಂಡದಲ್ಲಿದ್ದರೆ, ಸವಾರಿಯ ಒಂಟೆಗಳನ್ನೂ ಕುದುರೆಗಳನ್ನೂ ವೇಗವಾಗಿ ಓಡಿಸಿದರೆ ಅವುಗಳ ಕುಲುಕಾಟದಿಂದ ಸ್ತ್ರೀಯರಿಗೆ ತೊಂದರೆಯಾದೀತು ಎಂದು ತಾತ್ಪರ್ಯ.

ಒಮ್ಮೆ ಒಂದು ಯುದ್ಧದಲ್ಲಿ ಕುದುರೆ ಮತ್ತು ಒಂಟೆಗಳ ಮೇಲೆ ಕುಳಿತು ಯುದ್ಧ ಮಾಡುತ್ತಿದ್ದ ಭಟರಿಗೆ ಏನೂ ಗಲಿಬಿಲಿಯುಂಟಾಗಿ ಮೃಗಗಳು ನಿಯಂತ್ರಣಾತೀತವಾದುವು. ಪೈಗಂಬರರು ಕುದುರೆಯ ಮೇಲಿಂದ ಕೆಳಗೆ ಬಿದ್ದುಬಿಟ್ಟರು. ಅದೇ ಸಂದರ್ಭದಲ್ಲಿ ಕೆಲವು ಮಹಿಳೆಯರು ಸಹ ಅವರ ಸವಾರಿ ಮೃಗಗಳ ಮೇಲಿನಿಂದ ಕೆಳಗೆ ಬಿದ್ದಿದ್ದರು. ಪೈಗಂಬರರ ಹಿಂದೆ ಇದ್ದ ಒಬ್ಬ ಶಿಷ್ಯ, ಪ್ರವಾದಿಯ ಸಮೀಪಕ್ಕೆ ಬಂದು ಪೈಗಂಬರರಿಗೆ ಸಹಾಯ ಮಾಡಲಿಕ್ಕೆ ಯತ್ನಿಸಿದರು. ಆಗಲೂ ಪೈಗಂಬರರ ಪಾದ ಕುದುರೆಯ ಜೀನಿಗೆ ಅಳವಡಿಸಿದ್ದ ರಿಕಾಪಿಗೆ ಸಿಕ್ಕಿಕೊಂಡಿತ್ತು. ತನ್ನ ಪಾದವನ್ನು ರಿಕಾಪಿನಿಂದ ಬಿಡಿಸಿಕೊಂಡು ಪೈಗಂಬರರು ಶಿಷ್ಯನೊಡನೆ, "ನನ್ನ ಬಗ್ಗೆ ಚಿಂತೆ ಬೇಡ. ಬೇಗ ಹೋಗಿ ಆ ಮಹಿಳೆಯರಿಗೆ ಸಹಾಯ ಮಾಡು" ಎಂದು ನುಡಿದರು.

**"ನೀವು ಸ್ತ್ರೀಯರೊಡನೆ ಬಹಳ ದಯಾಪೂರ್ವಕವಾಗಿ ವರ್ತಿಸಬೇಕು"** ಎಂದಾಗಿತ್ತು ಪೈಗಂಬರರು ತನ್ನ ಮರಣಕ್ಕೆ ತುಸು ಸಮಯ ಮುಂಚೆ ನೀಡಿದ ಉಪದೇಶ. **"ಒಬ್ಬನಿಗೆ ಹೆಣ್ಣು ಮಕ್ಕಳಿದ್ದು ಅವರಿಗೆ ವಿದ್ಯಾಭ್ಯಾಸ ನೀಡುವ ಏರ್ಪಾಡು ಮಾಡಿ ಅವರನ್ನು ಪರಿಪಾಲಿಸಲಿಕ್ಕೋಸ್ಕರ ಕಷ್ಟಪಟ್ಟರೆ ಅಲ್ಲಾಹನು ಆತನನ್ನು ನರಕಾಗ್ನಿಯ ಶಿಕ್ಷೆಯಿಂದ ಬಿಡುಗಡೆಗೊಳಿಸುವನು"** ಎಂದು ಪೈಗಂಬರರು ಪದೇ ಪದೇ ಬೋಧಿಸುತ್ತಿದ್ದರು.

## ಗುಲಾಮರ ವಿಮೋಚನ

ಹಝ್ರತ್ ಖದೀಜ[ರ] ಪೈಗಂಬರರನ್ನು ವಿವಾಹವಾದ ಬಳಿಕ ತನ್ನ ಸಂಪತ್ತನ್ನೆಲ್ಲ ಪತಿಯ ಸನ್ನಿಧಿಯಲ್ಲಿ ಸಮರ್ಪಿಸಿದರು. ತನ್ನ ಅಧೀನದಲ್ಲಿದ್ದ ಗುಲಾಮರನ್ನೆಲ್ಲ ಪೈಗಂಬರರ ವಶಕ್ಕೆ ಕೊಟ್ಟರು. ಪೈಗಂಬರರು ತನ್ನ ವಶಕ್ಕೆ ಬಂದ ಎಲ್ಲ ಗುಲಾಮರನ್ನು ಸ್ವತಂತ್ರಗೊಳಿಸಿದರು. ಇತಿಹಾಸದಲ್ಲಿ ಅಷ್ಟರ ವರೆಗೆ ಯಾರೂ ಮಾಡದಿದ್ದ ಒಂದು ಮಹಾಕ್ರಾಂತಿಯನ್ನು ಅವರು ಮಾಡಿದರು.

ಗುಲಾಮರೊಂದಿಗೆ ಕರುಣೆಯಿಂದ ವರ್ತಿಸಬೇಕೆಂದು ಪೈಗಂಬರರು ಬೋಧಿಸಿದರು. ಯಾರಾದರೂ ತನ್ನ ಗುಲಾಮನಿಗೆ ಥಳಿಸಿದರೆ ಅಥವಾ ಬೈದರೆ, ಅದಕ್ಕೆ ಪ್ರಾಯಶ್ಚಿತ್ತವೇನೆಂದರೆ ಆ ಗುಲಾಮನನ್ನು ಸ್ವತಂತ್ರಗೊಳಿಸುವುದು ಎಂದು ಪೈಗಂಬರರು ಉಪದೇಶಿಸಿದರು. **"ಯಾರಾದರೂ ತನ್ನ ವಶದಲ್ಲಿರುವ ಗುಲಾಮನನ್ನು ಬಿಡುಗಡೆಗೊಳಿಸಿದರೆ, ಅದರ ಪ್ರತಿಫಲವಾಗಿ ಅಲ್ಲಾಹನು ಆತನ ದೇಹದ ಪ್ರತಿಯೊಂದು ಅಂಗವನ್ನು ಆ ಗುಲಾಮನ ಅಂಗಗಳ ಬದಲಿಗೆ ಎಂಬಂತೆ ನರಕಾಗ್ನಿಯಿಂದ ಪಾರುಮಾಡುವನು"** ಎಂದು ಅವರು ಶುಭವಾರ್ತೆ ಅರುಹಿಸಿದರು. ಸುಲಭವಾಗಿ ಮಾಡಿ ಮುಗಿಸಲು ಸಾಧ್ಯವಾಗುವ ರೀತಿಯಲ್ಲಿರುವ ಕೆಲಸಗಳಿಗೆ ಮಾತ್ರ ಗುಲಾಮರನ್ನು ನಿಯೋಜಿಸಬೇಕೆಂದೂ ಹೆಚ್ಚು ಶ್ರಮಕರವಾದ ಕೆಲಸವಾದರೆ ಅವನ ಯಜಮಾನ ಸಹ ಆ ಕೆಲಸದಲ್ಲಿ ಅವನಿಗೆ ನೆರವಾಗಬೇಕೆಂದೂ ಆಗ ಆ ಗುಲಾಮನಿಗೆ ತಾನು ಮಾಡುವ ಕೆಲಸ ಅಪಮಾನಕರವೆಂದಾಗಲಿ, ಕಷ್ಟಕರವೆಂದಾಗಲಿ ತೋಚದೆಂದು ಪೈಗಂಬರರು ಕಲಿಸಿದರು. ಒಬ್ಬ ಯಜಮಾನ ತನ್ನ ಗುಲಾಮನೊಂದಿಗೆ ಪ್ರಯಾಣ ಮಾಡುವುದಾದರೆ ಆ ಪ್ರಯಾಣಕ್ಕೆ ಉಪಯೋಗಿಸುವ ಸವಾರಿ ಮೃಗದ ಮೇಲೆ ಒಟ್ಟಿಗೆ ಕುಳಿತು, ಅಥವಾ ಒಮ್ಮೆ ಯಜಮಾನ, ಒಮ್ಮೆ ಗುಲಾಮ ಎಂಬ ರೀತಿಯಲ್ಲಿ ಬದಲಿಸಿ ಬದಲಿಸಿ ಕುಳಿತುಕೊಂಡು ಪ್ರಯಾಣಿಸಬೇಕೆಂದು ಪೈಗಂಬರರು ಆದೇಶಿಸಿದರು.

ಮುಸ್ಲಿಮ್ ಆದ ಬಳಿಕ ತನ್ನ ಸಮಯವನ್ನೆಲ್ಲ ಪೈಗಂಬರರೊಂದಿಗೆ ಕಳೆದಿದ್ದ, ಗುಲಾಮರೊಡನೆ ಹೇಗೆ ವರ್ತಿಸಬೇಕು, ಅವರನ್ನು ಹೇಗೆ ಸಾಕಿ ಸಲಹಬೇಕು ಎಂಬ ನಿರ್ದೇಶಗಳನ್ನು ಕೇಳುತ್ತಲಿದ್ದ ಅಬೂ ಹುರೈರ[ರ] ಎಂಬ ಪೈಗಂಬರರ ಶಿಷ್ಯ ಹೀಗೆ ಹೇಳಿದ್ದರು: **"ನನ್ನ ಜೀವ ಯಾರ ವಶವಿದೆಯೋ ಆ ಅಲ್ಲಾಹನ ಆಣೆ ಹಾಕಿ ನಾನು ಹೇಳುತ್ತೇನೆ – ಪವಿತ್ರವಾದ ಧರ್ಮಯುದ್ಧಗಳಲ್ಲಿ ಭಾಗವಹಿಸಲಿಕ್ಕೆ, ಹಜ್ಜ್ ಕರ್ಮ ನಿರ್ವಹಿಸಲಿಕ್ಕೆ ಮತ್ತು ನನ್ನ ವೃದ್ಧೆಯಾದ ಮಾತೆಯ**

**ಆರೈಕೆ ಮಾಡುವುದು ನನಗೆ ಇಲ್ಲದಿರುತ್ತಿದ್ದರೆ, ನಾನು ಒಬ್ಬ ಗುಲಾಮನಾಗಿ ಜೀವಿಸಿ ಮರಣ ಹೊಂದಲು ಬಯಸುತ್ತಿದ್ದೆ. ಕಾರಣವೇನೆಂದರೆ, ಮುಹಮ್ಮದ್ ಪೈಗಂಬರ್[ಸ] ಅಷ್ಟು ಹೆಚ್ಚು ದಯೆಯಿಂದ ಗುಲಾಮರೊಡನೆ ವರ್ತಿಸಬೇಕೆಂದು ಒತ್ತಾಯಿಸುತ್ತಿದ್ದರು."**

ಪೈಗಂಬರರ ಶಿಷ್ಯರಾದ ಹಝ್ರತ್ ಅಬೂದರ್ ಗಫಾರಿ[ರ]ರವರು ತನ್ನ ಗುಲಾಮ ಧರಿಸುವ ಅದೇ ತರದ ಬಟ್ಟೆಗಳನ್ನು ಧರಿಸುತ್ತಿದ್ದರು. ಪೈಗಂಬರರ ಉಪದೇಶದ ಪ್ರಭಾವವೇ ಅದಕ್ಕೆ ಕಾರಣವಾಗಿತ್ತು.

ಪೈಗಂಬರರು ಹೀಗೆ ಉಪದೇಶಿಸಿದರು: **"ಈ ಗುಲಾಮರು ಯಾರು? ಅವರು ನಿಮ್ಮ ಸಹೋದರರು ಹಾಗೂ ನಿಮ್ಮ ಶಕ್ತಿಯ ಮೂಲವಾಗಿದ್ದಾರೆ. ಅಲ್ಲಾಹನು ನಿಮಗೆ ಅವರ ಮೇಲೆ ಒಂದು ತಾತ್ಕಾಲಿಕ ಅಧಿಕಾರವನ್ನು ನೀಡಿದ್ದಾನಷ್ಟೆ. ನೀವು ಅವರನ್ನು ಸಮಾನವಾಗಿ ಕಾಣಬೇಕು. ನೀವು ಉಣ್ಣುವ ಅದೇ ಆಹಾರವನ್ನು ಅವರಿಗೆ ಕೊಡಬೇಕು. ನೀವು ಧರಿಸುವ ಅದೇ ಉಡುಪನ್ನು ಅವರಿಗೆ ನೀಡಬೇಕು. ನಿಮಗೆ ಮಾಡಲು ಅಸಾಧ್ಯವಾದ ಕೆಲಸವನ್ನು ಅವರಿಂದ ಮಾಡಿಸಬಾರದು. ಅವರು ಮಾಡುವ ಕೆಲಸದಲ್ಲಿ ನೀವು ಅವರಿಗೆ ಸಹಾಯ ಮಾಡಬೇಕು."**

ಇನ್ನೊಂದು ಸಂದರ್ಭದಲ್ಲಿ ಪೈಗಂಬರರು ಹೀಗೆ ಹೇಳಿದರು: **"ನಿಮ್ಮ ಸೇವಕನು ನಿಮಗೋಸ್ಕರ ಆಹಾರವನ್ನು ಪಾಕಮಾಡಿ ಬಡಿಸುವಾಗ, ನಿಮ್ಮೊಂದಿಗೆ ಕುಳಿತುಕೊಂಡು ಉಣ್ಣಲು ಅವನೊಡನೆ ಹೇಳಿರಿ. ಕಡಿಮೆ ಪಕ್ಷ, ಅದರಲ್ಲಿ ಒಂದು ಅಂಶವನ್ನಾದರೂ ನಿಮ್ಮೊಂದಿಗೆ ಕುಳಿತು ಉಣ್ಣಲು ಹೇಳಿರಿ. ನಿಮಗೆ ಆಹಾರವನ್ನು ಪಾಕಗೊಳಿಸುವ ಮೂಲಕ ಆ ಆಹಾರದಲ್ಲಿ ಹಕ್ಕನ್ನೂ ಅವನು ಪಡೆದುಬಿಟ್ಟಿದ್ದಾನೆ."**

## ಬಡ ಜನರ ಸಂರಕ್ಷಣೆ

ಸಮುದಾಯದ ಬಡ ಜನರ ಪ್ರಗತಿ ಮತ್ತು ಸಮಾಜದಲ್ಲಿ ಅವರ ಸ್ಥಾನಮಾನಗಳನ್ನು ಉನ್ನತಿಗೇರಿಸುವುದರಲ್ಲಿ ಮುಹಮ್ಮದ್ ಪೈಗಂಬರ್[ಸ] ಯಾವಾಗಲೂ ಆಸಕ್ತರಾಗಿದ್ದರು.

ಬಡವಳಾದ ಓರ್ವ ಮುಸ್ಲಿಂ ಸ್ತ್ರೀ ಮದೀನದ ಮಸೀದಿ ಗುಡಿಸಿ ಶುಚಿಗೊಳಿಸುತ್ತಿದ್ದಳು. ಪೈಗಂಬರರು ಆ ಮಹಿಳೆಯನ್ನು ಕೆಲವು ದಿವಸಗಳಿಂದ ಮಸೀದಿಯಲ್ಲಿ ಕಾಣದಿದ್ದಾಗ ಆಕೆಯ ಬಗ್ಗೆ ವಿಚಾರಿಸಿದರು. ಆ ಸ್ತ್ರೀ ಮೃತಪಟ್ಟಿರುವಳೆಂಬ ಸಂಗತಿ ತಿಳಿದಾಗ ಪೈಗಂಬರರು ಹೇಳಿದರು: **"ಆಕೆ ಮೃತಪಟ್ಟ ವಿಷಯ ನನಗೇಕೆ ತಿಳಿಸಲಿಲ್ಲ? ನಾನು ಆಕೆಯ ಜನಾಝ ನಮಾಝಿನಲ್ಲಿ ಭಾಗವಹಿಸುತ್ತಿದ್ದನಷ್ಟೆ. ಒಂದು ವೇಳೆ, ಆ ಸ್ತ್ರೀ ಬಡವಳಾಗಿದ್ದರಿಂದ, ಯಾವ ಪರಿಗಣನೆಗೂ ಅರ್ಹಳಾಗದವಳಾಗಿ ಗಣಿಸಲ್ಪಟ್ಟಿರಬಹುದು. ಇದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಆಕೆಯ ಗೋರಿಯ ಬಳಿಗೆ ನನ್ನನ್ನು ಕರಕೊಂಡು ಹೋಗಿರಿ."** ಹಾಗೆ ಪೈಗಂಬರರು ಆ ಸ್ತ್ರೀಯ ಗೋರಿಯ ಬಳಿಗೆ ಹೋಗಿ ಆಕೆಗೋಸ್ಕರ ಪ್ರಾರ್ಥಿಸಿದರು.

ಬಡಜನರನ್ನು ಗೌರವಿಸಬೇಕೆಂದೂ ಅವರ ಮನಸ್ಸನ್ನು ನೋಯಿಸಬಾರದೆಂದೂ ಅವರ ಆವಶ್ಯಕತೆಗಳನ್ನು ಪೂರೈಸಿಕೊಡಲಿಕ್ಕೆ ಪ್ರಯತ್ನಿಸಬೇಕೆಂದೂ ಪೈಗಂಬರರು ಅನುಯಾಯಿಗಳಿಗೆ ಉಪದೇಶಿಸುತ್ತಿದ್ದರು. ಹಾಗೆಯೇ, ಬಡ ಜನರು ತಮ್ಮ ವ್ಯಕ್ತಿತ್ವವನ್ನು ಕಾಪಾಡಬೇಕೆಂದೂ ಸಹಾಯಕ್ಕಾಗಿ ಯಾಚಿಸಬಾರದೆಂದೂ ಬೋಧಿಸುತ್ತಿದ್ದರು.

ಪೈಗಂಬರರು ಧನಿಕರಿಗೆ ಹೇಳಿದರು: **"ಧನ, ಪ್ರತಾಪ, ಅಧಿಕಾರ ಇವು ಸ್ವಂತ ಸಾಮರ್ಥ್ಯದಿಂದಾಗಲಿ ಪರಿಶ್ರಮದಿಂದಾಗಲಿ ಲಭ್ಯವಾದವು ಎಂದು ನೀವ್ಯಾರೂ ಭಾವಿಸಬೇಡಿರಿ. ನಿಮ್ಮ ಶಕ್ತಿ, ಸ್ಥಾನಮಾನ ಮತ್ತು ಧನ ಎಲ್ಲವೂ ಬಡವರ ಮೂಲಕ ನೀವು ಗಳಿಸುತ್ತೀರಿ."**

ಅರೇಬಿಯಾದ ಹೆಚ್ಚಿನ ಕಡೆಗಳಲ್ಲಿ ಇಸ್ಲಾಂ ಧರ್ಮ ವಿಶ್ವಾಸ ಅಂಗೀಕರಿಸಲ್ಪಟ್ಟ ಕಾರಣದಿಂದ ಪೈಗಂಬರರಿಗೆ ಧಾರಾಳ ಪಾರಿತೋಷಕಗಳು ಲಭಿಸುತ್ತಿದ್ದವು. ಅವುಗಳನ್ನೆಲ್ಲ ಆಗಾಗಲೇ ಆ ಪುಣ್ಯಪುರುಷ ಅಗತ್ಯವಿದ್ದವರಿಗೆ ಹಂಚುತ್ತಿದ್ದರು.

ಮುಸ್ಲಿಮರು ಪರಸ್ಪರ ಪ್ರೀತಿ ವಿಶ್ವಾಸದಿಂದ ಜೀವಿಸಬೇಕೆಂದೂ ತಮ್ಮ ಮಧ್ಯೆ ಇರುವ ಬಡಬಗ್ಗರಿಗೆ ಬೇಕಾದ ಸಹಾಯ ಸಹಕಾರ ನೀಡಬೇಕೆಂದೂ ಹಾಗಿದ್ದರೆ ಮಾತ್ರ ಯಥಾರ್ಥ ದಾನಧರ್ಮ ಆಗುತ್ತದೆಂದೂ ಪೈಗಂಬರರು ನುಡಿಯುತ್ತಿದ್ದರು.

ಒಮ್ಮೆ ದಾನನೀಡಲಿಕ್ಕೋಸ್ಕರ ಯಾರೋ ಒಬ್ಬರು ಸ್ವಲ್ಪ ಖರ್ಜೂರವನ್ನು ಪೈಗಂಬರರಿಗೆ ಕಳುಹಿಸಿಕೊಟ್ಟರು. ಆ ಸಂದರ್ಭದಲ್ಲಿ ಕೇವಲ ಎರಡೂವರೆ ವರ್ಷ ಪ್ರಾಯದ ಮೊಮ್ಮಗ ಇಮಾಂ ಹಸನ್[ರ] ಪೈಗಂಬರರ ಸಮೀಪದಲ್ಲಿದ್ದರು. ಶಿಶು ಹಸನ್ ಒಂದು ಖರ್ಜೂರವನ್ನು ತೆಗೆದು ಬಾಯಿಗೆ ಹಾಕಿದರು. ಕೂಡಲೇ ಪೈಗಂಬರರು ಮಗುವಿನ ಬಾಯಿಯೊಳಗೆ ಬೆರಳು ಹಾಕಿ ಆ ಖರ್ಜೂರವನ್ನು ಹೊರ ತೆಗೆದು, **"ಮಗೂ, ಇದರಲ್ಲಿ ನಮಗೇನೂ ಹಕ್ಕಿಲ್ಲ. ಇದು ಅಲ್ಲಾಹನ ಸೃಷ್ಟಿಗಳಲ್ಲಿ ಸೇರಿದ ಬಡ ಜನರಿಗೋಸ್ಕರ ಉಳ್ಳದ್ದಾಗಿದೆ"** ಎಂದು ಹೇಳಿದರು.

## ಒಂದು ಹೃದಯಸ್ಪರ್ಶಿ ಘಟನೆ

ಅತ್ಯುಷ್ಣ ಕಾಲದಲ್ಲೊಮ್ಮೆ ಪೈಗಂಬರರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಅತಿ ಬಡವನಾದ ಒಬ್ಬ ಮುಸ್ಲಿಂ ಭಾರವಾದೊಂದು ಹೊರೆಯನ್ನು ಹೊತ್ತುಕೊಂಡು ಹೋಗುವುದನ್ನು ಕಂಡರು. ಆತನ ಮುಖ ಕಳೆಗುಂದಿತ್ತು. ಬೆವರು ಮತ್ತು ಧೂಳಿನಿಂದಾಗಿ ಆತನ ಮುಖ ಹೆಚ್ಚು ಅನಾಕರ್ಷಕವಾಗಿತ್ತು. ಆತನು ತುಂಬಾ ದುಃಖಿತನಾಗಿದ್ದನು. ಪೈಗಂಬರರು ಆತನ ಕಣ್ಣಿಗೆ ಕಾಣದಂತೆ ಆತನ ಹಿಂದಿನಿಂದ ಹೋಗಿ, ಸಣ್ಣ ಮಕ್ಕಳು ವಿನೋದಕ್ಕಾಗಿ ಮಾಡುವ ರೀತಿಯಲ್ಲಿ ತನ್ನ ಎರಡು ಅಂಗೈಗಳಿಂದ ಆತನ ಕಣ್ಣುಗಳನ್ನು ಮುಚ್ಚಿ ಹಿಡಿದುಕೊಂಡರು. ತನ್ನ ಕಣ್ಣುಗಳನ್ನು ಯಾರು ಮುಚ್ಚಿದ್ದೆಂದು ಆತನು ಊಹಿಸಲಿ ಎಂದು ಪೈಗಂಬರರು ಬಯಸಿದ್ದರು. ಆತನು ತನ್ನ ಎರಡು ಕೈಗಳನ್ನು ಹಿಂದಕ್ಕೆ ಸರಿಸಿ ತನ್ನ ಹಿಂದೆ ನಿಂತಿದ್ದ ವ್ಯಕ್ತಿಯನ್ನು ಸವರಿನೋಡಿ ಅದು ಮುಹಮ್ಮದ್ ಪೈಗಂಬರ್[ಸ] ಎಂದು ಗುರುತಿಸಿದನು. ತನ್ನಂಥ ಒಬ್ಬ ದಾರಿದ್ರ್ಯ ಸ್ಥಿತಿಯಲ್ಲಿರುವ ಮನುಷ್ಯನೊಡನೆ ಪೈಗಂಬರರು ಹೊರತು ಬೇರೆ ಯಾರೂ ಇಂಥ ಪ್ರೀತಿಯನ್ನು ತೋರಿಸಲಿಕ್ಕಿಲ್ಲವೆಂದು ಆತನು ಊಹಿಸಿರಬೇಕು. ಆನಂದಾತಿರೇಕದಿಂದ ಆತನು ಪೈಗಂಬರರ ದೇಹಕ್ಕೆ ತನ್ನ ಬೆನ್ನನ್ನು ತಾಗಿಸಿ ತಬ್ಬಿಕೊಂಡನು. ಬೆವರು ಮತ್ತು

ಧೂಳಿನಿಂದ ಕೂಡಿದ ಆತನ ಶರೀರ ಪೈಗಂಬರರ ಶರೀರಕ್ಕೆ ಬಿಗಿಯಾಗಿ ಒತ್ತಿಕೊಂಡಿತು. ಎಷ್ಟು ಹೊತ್ತು ಪೈಗಂಬರರು ತನ್ನನ್ನು ಹೀಗೆ ತೃಪ್ತಿ ಹೊಂದಲು ಬಿಡುವರು ಎಂದು ತಿಳಿಯಲು ಆತನು ಆಶಿಸಿರಬಹುದು. ಪೈಗಂಬರರು ನಗುತ್ತಾ ನಿಂತುಕೊಂಡು ಆ ಬಡ ವ್ಯಕ್ತಿಗೆ ತೃಪ್ತಿಯಾಗುವ ವರೆಗೆ ತನ್ನ ದೇಹವನ್ನು ಅಪ್ಪಿಕೊಳ್ಳಲು ಬಿಟ್ಟುಕೊಟ್ಟರು. ದುಃಖಿತನಾಗಿದ್ದ ಆತನಿಗೆ ಸಾಂತ್ವನದ ಮಾತುಗಳನ್ನು ಹೇಳಿದರು.

## ನೆರೆಹೊರೆಯವರೊಡನೆ

ಪೈಗಂಬರರು ತನ್ನ ನೆರೆಹೊರೆಯವರೊಡನೆ ಬಹಳ ಕರುಣೆ ಮತ್ತು ಪ್ರೀತಿಯಿಂದ ವರ್ತಿಸಿದರು. ನೆರೆಹೊರೆಯವನು ಹಸಿದಿರುವಾಗ ಹೊಟ್ಟೆ ತುಂಬ ತಿನ್ನುವವನು ಮುಸ್ಲಿಮನಲ್ಲವೆಂದು ಪೈಗಂಬರರು ಬೋಧಿಸಿದರು.

ನೆರೆಹೊರೆಯವನನ್ನು ಪೀಡಿಸುವವನು, ಅವರ ಸುರಕ್ಷೆಗೆ ಭಂಗವುಂಟುಮಾಡುವವನು ಸತ್ಯವಿಶ್ವಾಸಿಯಲ್ಲ ಎಂದು ಪೈಗಂಬರರು ಎಚ್ಚರಿಸಿದರು.

ವಿಶಿಷ್ಟ ಆಹಾರವನ್ನು ತಯಾರಿಸಿದರೆ ನೆರೆಹೊರೆಯವರಿಗೂ ಅದರ ಒಂದು ಪಾಲನ್ನು ನೀಡಬೇಕೆಂದು ಪೈಗಂಬರರು ಕಲಿಸಿದರು. **"ಯಾರು ಅಲ್ಲಾಹನಲ್ಲೂ ವಿಧಿನಿರ್ಣಾಯಕ ದಿನದ ಬಗ್ಗೆಯೂ ನಂಬುತ್ತಾನೋ ಆತನು ಎಂದಿಗೂ ನೆರೆಹೊರೆಯುವರಿಗೆ ತೊಂದರೆಯುಂಟಾಗುವ ಏನನ್ನೂ ಮಾಡಲಾರ"** ಎಂದು ಪೈಗಂಬರರು ನುಡಿದರು.

## ಇತರರ ತಪ್ಪನ್ನು ಅವಗಣಿಸುವುದು

ಪೈಗಂಬರರು ಎಂದೂ ಇತರರ ತಪ್ಪನ್ನೂ ಕೊರತೆಗಳನ್ನೂ ಬಹಿರಂಗಪಡಿಸುತ್ತಿರಲಿಲ್ಲ. ಜನರು ತಮ್ಮ ಸ್ವಂತ ತಪ್ಪುಗಳನ್ನು ಇತರರಿಗೆ ತಿಳಿಯಪಡಿಸಬಾರದೆಂದು ಸಹ ಅವರು ಉಪದೇಶಿಸಿದರು.

**"ಒಬ್ಬನು ಮತ್ತೊಬ್ಬನ ತಪ್ಪುಗಳನ್ನು ಮರೆಮಾಚಿ ಇಟ್ಟರೆ ಅಲ್ಲಾಹನು ವಿಧಿನಿರ್ಣಾಯಕ ದಿನದಂದು ಆತನ ತಪ್ಪುಗಳನ್ನು ಮರೆಮಾಚುವನು"** ಎಂದು ಪೈಗಂಬರರು ಬೋಧಿಸಿದರು.

ಪಾಪಕೃತ್ಯಗಳಿಗೆ ವಿರುದ್ಧವಾಗಿ ಮಾತ್ರ ನಿಯಮವನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕೆಂದು ಪೈಗಂಬರರು ಕಲಿಸಿದರು. ಒಮ್ಮೆ ಯುದ್ಧ ಕಾಲದಲ್ಲಿ, ಅಡಗಿ ಕುಳಿತು, ಏಕಾಂಗಿಯಾಗಿ ಸಿಗುವ ಮುಸ್ಲಿಮರನ್ನು ಆಕ್ರಮಿಸಿ ನಿಷ್ಕರುಣೆಯಿಂದ ಹತ್ಯೆಮಾಡುತ್ತಿದ್ದ ಒಬ್ಬ ಅವಿಶ್ವಾಸಿಯನ್ನು ಕೆಲವು ಮುಸ್ಲಿಮರು ಕಂಡರು. ಆಗ ಹಝ್ರತ್ ಉಸಾಮ ಬಿನ್ ಝೈದ್(ರ) ಆತನನ್ನು ಹಿಡಿದು ಕೊಲ್ಲಲಿಕ್ಕಾಗಿ ತನ್ನ ಖಡ್ಗವನ್ನು ಮೇಲೆತ್ತಿದರು. ರಕ್ಷಾಮಾರ್ಗ ಕಾಣದಿದ್ದಾಗ ಆ ಅಮುಸ್ಲಿಂ ಘಾತಕನು ಮುಸ್ಲಿಮರ ಕಲಿಮದ ಮೊದಲ ಅಂಶವನ್ನು ಉಚ್ಚರಿಸಲು ತೊಡಗಿದನು. ಅಂದರೆ **"ಅಲ್ಲಾಹನಲ್ಲದೆ ಆರಾಧನೆಗರ್ಹನು ಬೇರಾರೂ ಇಲ್ಲ"** ಎಂದು ನುಡಿದು ತಾನು ಇಸ್ಲಾಂ ಧರ್ಮವನ್ನು ಸ್ವೀಕರಿಸಿರುವೆನೆಂದು ಸೂಚಿಸಿದನು. ಇದಕ್ಕೇನೂ ಬೆಲೆಕೊಡದೆ ಹಝ್ರತ್ ಉಸಾಮ ಆ ಘಾತಕನನ್ನು ವಧಿಸಿಬಿಟ್ಟರು. ಈ ಸಂಗತಿಯನ್ನು ತಿಳಿದಾಗ ಪೈಗಂಬರರು ಹಝ್ರತ್ ಉಸಾಮರನ್ನು ಕರೆದು, "ಉಸಾಮಾ, ವಿಧಿನಿರ್ಣಾಯಕ ದಿನದಂದು ಆತನ ವಿಶ್ವಾಸ ಘೋಷಣೆ ಆತನ ಪರವಾಗಿ ಸಾಕ್ಷಿ ನೀಡುವುದಾದರೆ (ಅಂದರೆ, ಆ ಮನುಷ್ಯನು ಪ್ರಾಮಾಣಿಕವಾಗಿಯೂ ಪಶ್ಚಾತ್ತಾಪಪಟ್ಟು, ಇಸ್ಲಾಮಿನ ಕಲಿಮವನ್ನು ಉಚ್ಚರಿಸಿದ್ದರೆ) ನಿಮ್ಮ ಸ್ಥಿತಿಯೇನಾಗಿರಬಹುದು?" ಎಂದು ಕೇಳಿದರು. ಹಝ್ರತ್ ಉಸಾಮ ಉತ್ತರಿಸಿದರು: "ಪ್ರವಾದಿವರ್ಯರೆ, ಆತನು ಮುಸ್ಲಿಮರ ಘಾತಕನಾಗಿದ್ದನು. ಆತನ ಆ ಕಲಿಮ ತನ್ನ ಜೀವವನ್ನು ರಕ್ಷಿಸುವ ಒಂದು ತಂತ್ರ ಮಾತ್ರವಾಗಿತ್ತು." ಆದರೆ ಪೈಗಂಬರರು ಪುನಃ ಕೇಳಿದರು: "ಉಸಾಮಾ, ವಿಧಿನಿರ್ಣಾಯಕ ದಿನದಂದು ಆತನ ವಿಶ್ವಾಸ ಘೋಷಣೆ ಆತನ ಪರವಾಗಿ ಸಾಕ್ಷಿ ಹೇಳುವುದಾದರೆ ನಿಮ್ಮ ಸ್ಥಿತಿ ಏನಾಗಿರಬಹುದು?"

ಆ ವ್ಯಕ್ತಿಯ ಮರಣಕ್ಕೆ ಕಾರಣಕರ್ತನಾದ ಉಸಾಮರೊಡನೆ ಅಲ್ಲಾಹನು ಉತ್ತರವನ್ನು ಕೇಳಬಹುದೆಂದಾಗಿತ್ತು ಪೈಗಂಬರರ ಮಾತಿನ ಒಳಾರ್ಥ. ಆತನು ಮುಸ್ಲಿಮರ ಘಾತಕನಾಗಿದ್ದರೂ ಆತನ ಕಲಿಮ ಉಚ್ಚಾರಣೆ ತನ್ನ ದುಷ್ಕೃತ್ಯಗಳ ಬಗ್ಗೆ ತಾನು ಪಶ್ಚಾತ್ತಾಪಪಡುತ್ತೇನೆ ಎಂಬ ಸೂಚನೆಯಾಗಿ ಗಣಿಸಲ್ಪಡಬಹುದು.

ಆ ಘಾತಕನು ಪಶ್ಚಾತ್ತಾಪದಿಂದಲ್ಲ, ಜೀವ ಉಳಿಸಲಿಕ್ಕಾಗಿ ಮಾತ್ರ ಕಲಿಮ ಉಚ್ಚರಿಸಿದ್ದೆಂದು ಉಸಾಮ ಪುನರಾವರ್ತಿಸಿ ಹೇಳಿದರು. ಆಗ ಪೈಗಂಬರರು ಉಸಾಮರೊಡನೆ, "ಆತನು ಹೇಳುವುದು ಪ್ರಾಮಾಣಿಕತೆಯಿಂದಲೋ ಅಲ್ಲವೋ ಎಂದು ತಿಳಿಯಲಿಕ್ಕೆ ನೀವು ಆತನ ಹೃದಯದೊಳಗೆ ಇಣುಕಿ ನೋಡಿದ್ದೀರಾ! ಆತನ ವಿಶ್ವಾಸ ಘೋಷಣೆ ನಿಮ್ಮ ವಿರುದ್ಧ ಸಾಕ್ಷ್ಯವೆಂದಾದರೆ ವಿಧಿನಿರ್ಣಾಯಕ ದಿನದಂದು ಅಲ್ಲಾಹನ ಪ್ರಶ್ನೆಗೆ ನೀವು ನೀಡುವ ಉತ್ತರವೇನು?" ಎಂದು ಕೇಳಿದರು.

ಜನರ ತಪ್ಪುಗಳನ್ನೂ ಅಕೃತ್ಯಗಳನ್ನೂ ಕ್ಷಮಿಸಿಕೊಡಲಿಕ್ಕೆ ಪೈಗಂಬರರು ಸದಾ ಸನ್ನದ್ಧರಾಗಿದ್ದರು. ಪೈಗಂಬರರ ಪತ್ನಿ ಹಝ್ರತ್ ಆಯಿಶ(ರ)ರ ವಿರುದ್ಧ ಅಪವಾದ ಪ್ರಚಾರದ ಹಿಂದೆ ವರ್ತಿಸಿದ ವ್ಯಕ್ತಿ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ (ಅಂದರೆ ಆಯಿಶರವರ ತಂದೆಯ) ಔದಾರ್ಯವನ್ನು ಆಶ್ರಯಿಸಿಕೊಂಡಿರುವ ವ್ಯಕ್ತಿಯಾಗಿದ್ದನು. ಹಝ್ರತ್ ಆಯಿಶ(ರ)ರವರಿಗೆ ವಿರುದ್ಧವಾದ ಆರೋಪ ಆಧಾರ ರಹಿತವೆಂದು ರುಜುವಾದಾಗ ಹಝ್ರತ್ ಅಬೂಬಕರ್(ರ) ಆ ವ್ಯಕ್ತಿಗೆ ನೀಡುತ್ತಿದ್ದ ನೆರವನ್ನು ನಿಲ್ಲಿಸಿದರು. ಈ ಸಂಗತಿಯನ್ನು ತಿಳಿದ ಪೈಗಂಬರರು ಹಝ್ರತ್ ಅಬೂಬಕರ್‌ರವರೊಡನೆ ಮಾತನಾಡಿ, ಆ ವ್ಯಕ್ತಿ ತಪ್ಪೆಸಗಿದ್ದರೂ ಅಬೂಬಕರ್‌ರಂತಹವರು ಆತನ ಜೀವನಾಂಶವನ್ನು ನಿಲ್ಲಿಸಿಬಿಟ್ಟು ಹೀಗೆ ಇನ್ನೊಂದು ತಪ್ಪು ಮಾಡಬಾರದಾಗಿತ್ತು ಎಂದು ಹೇಳಿದರು. ಇದನ್ನು ಕೇಳಿದ ಹಝ್ರತ್ ಅಬೂಬಕರ್(ರ) ತನ್ನ ಸ್ವಂತ ಮಗಳಿಗೆ ವಿರುದ್ಧವಾಗಿ ಅಪವಾದಗಳನ್ನು ಪ್ರಚಾರಮಾಡಿದ ಆ ವ್ಯಕ್ತಿಗೆ ತನ್ನ ನೆರವನ್ನು ಪುನರಾರಂಭಿಸಿದರು.

## ಸರಳ ಜೀವನ

ಆಹಾರ ಪಾನೀಯಾದಿ ವಿಚಾರಗಳಲ್ಲಿ ಪೈಗಂಬರರು ಅತ್ಯಂತ ಮಿತತ್ವವನ್ನು ಪಾಲಿಸಿದ್ದರು. ರುಚಿಕರವಲ್ಲದ ಭಕ್ಷ್ಯವಸ್ತುಗಳ ಬಗ್ಗೆ ಅವರು ಎಂದೂ ಅತೃಪ್ತಿ ತೋರಿಸಿರಲಿಲ್ಲ. ಅಂತಹ ಭಕ್ಷ್ಯವಸ್ತುಗಳನ್ನು ಸಿದ್ಧಪಡಿಸಿದ ವ್ಯಕ್ತಿಯನ್ನು ನಿರಾಶೆಗೊಳಿಸಬಾರದೆಂದು ಭಾವಿಸಿ ಅವು

ಭಕ್ಷ್ಯಯೋಗ್ಯವೆಂದಾದರೆ ಭಕ್ಷಿಸುತ್ತಿದ್ದರು. ಆಹಾರವನ್ನು ತಿನ್ನಲು ಕುಳಿತರೆ ತನ್ನ ಮುಂದೆ ಇರುವ ಆಹಾರ ವಸ್ತುಗಳನ್ನು ಮಾತ್ರ ಗಮನಿಸುತ್ತಿದ್ದರು. ಯಾರಾದರೂ ಭಕ್ಷ್ಯವಸ್ತುಗಳನ್ನು ಪೈಗಂಬರರಿಗೆ ಕಳುಹಿಸಿಕೊಟ್ಟರೆ ಅಲ್ಲಿ ಸನ್ನಿಹಿತರಾಗಿದ್ದ ಎಲ್ಲರಿಗೂ ಅದನ್ನು ಹಂಚಿಕೊಡುತ್ತಿದ್ದರು. ಪೈಗಂಬರರು ಹೊಟ್ಟೆತುಂಬ ತಿನ್ನುತ್ತಿರಲಿಲ್ಲ.

ಒಮ್ಮೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಕೆಲವರು ಪೈಗಂಬರರನ್ನು, ಹುರಿದ ಆಡಿನ ಮಾಂಸವನ್ನು ತಿನ್ನಲು ಆಮಂತ್ರಿಸಿದರು. ಆಡಿನ ಮಾಂಸ ಪೈಗಂಬರರಿಗೆ ಇಷ್ಟಕರವೇ ಆಗಿತ್ತು. ಆದರೆ ಪೈಗಂಬರರು ಆ ಆಹ್ವಾನವನ್ನು ತಿರಸ್ಕರಿಸಿದರು. ರಸ್ತೆಯ ಬದಿಯಲ್ಲಿ, ಆಮಂತ್ರಿಸಲ್ಪಡದ ಜನರ ಮಧ್ಯೆ ಆಹಾರ ಸೇವಿಸುವುದನ್ನು ಅವರು ಇಷ್ಟಪಡಲಿಲ್ಲ.

ಯಾವ ಸಂದರ್ಭದಲ್ಲೂ ಪೈಗಂಬರರು ಆಹಾರ ಸೇವನೆಗೆ ಕುಳಿತರೆ, ಆಹಾರ ಸೇವಿಸುವುದಕ್ಕೆ ಮುಂಚೆ ಅಲ್ಲಾಹನ ನಾಮವನ್ನೂ ಅವನ ಅನುಗ್ರಹಗಳನ್ನೂ ಸ್ಮರಿಸುತ್ತಿದ್ದರು. ಆಹಾರ ತಿಂದು ಮುಗಿಸಿದ ಬಳಿಕ ಆಹಾರ ಒದಗಿಸಿದ ಅಲ್ಲಾಹನಿಗೆ ವಂದನೆ ಸಲ್ಲಿಸುತ್ತಿದ್ದರು. ಯಾವುದೇ ಸತ್ಕಾರ್ಯವನ್ನು ಮಾಡಿ ಮುಗಿಸಿದಾಗಲೂ ಅವರು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುತ್ತಿದ್ದರು.

ಹೊಟ್ಟೆ ತುಂಬುವುದಕ್ಕೆ ಮುಂಚೆ ಉಣ್ಣುವುದನ್ನು ನಿಲ್ಲಿಸಬೇಕೆಂದೂ ಒಬ್ಬನ ಊಟ ಇಬ್ಬರಿಗೆ ಉಣ್ಣಲು ಸಾಧ್ಯವಾಗಬೇಕೆಂದೂ ಪೈಗಂಬರರು ಅನುಯಾಯಿಗಳಿಗೆ ಉಪದೇಶಿಸುತ್ತಿದ್ದರು. ಪೈಗಂಬರರ ಮನೆಯಲ್ಲಿ ವಿಶಿಷ್ಟವಾದ ಆಹಾರವನ್ನೇನಾದರೂ ತಯಾರಿಸಿದರೆ ಅದರಲ್ಲಿ ಒಂದು ಪಾಲನ್ನು ನೆರೆಹೊರೆಯವರಿಗೆ ನೀಡಬೇಕೆಂದು ಅವರು ನಿರ್ದೇಶಿಸುತ್ತಿದ್ದರು.

ಪೈಗಂಬರರು ತನ್ನ ಸಂಗಡ ಇದ್ದವರಲ್ಲಿ ಯಾರಾದರೂ ಹಸಿವೆಗೆ ಈಡಾಗಿದ್ದಾರೆಯೇ ಎಂದು ಅವರ ಮುಖವನ್ನು ನೋಡಿ ತಿಳಿದುಕೊಳ್ಳುತ್ತಿದ್ದರು. ಹಾಗೆ ಅವರಿಗೆ ಆಹಾರವನ್ನು ಒದಗಿಸುವ ಏರ್ಪಾಡು ಮಾಡುತ್ತಿದ್ದರು.

ಪೈಗಂಬರರು ಬಹಳ ಸರಳವಾದ ವಸ್ತ್ರಧಾರಣೆಯನ್ನು ಇಷ್ಟಪಡುತ್ತಿದ್ದರು. ಖಮೀಸ್ (ಉದ್ದ ಅಂಗಿ) ಮತ್ತು ಪೈಜಾಮ ಅವರ ಸಾಮಾನ್ಯ ಉಡುಪಾಗಿತ್ತು.

ಪೈಗಂಬರರಿಗೆ ಹಲವು ರಾಜ್ಯಗಳ ರಾಯಭಾರಿಗಳನ್ನು ಭೇಟಿಯಾಗಲಿಕ್ಕಿರುವ ಕಾರಣ ಅಂಥ ಸಂದರ್ಭಗಳಲ್ಲಿ ಧರಿಸಲಿಕ್ಕೆ ಪೈಗಂಬರರಿಗೆ ವಿಶೇಷತರದ ಉಡುಪನ್ನು ಸಿದ್ಧಪಡಿಸಬೇಕೆಂದು ಒಮ್ಮೆ ಹಝ್ರತ್ ಉಮರ್(ರ) ಸಲಹೆಯಿತ್ತರು. ಆ ಸಲಹೆಯನ್ನು ನಿರಾಕರಿಸಿಕೊಂಡು ಪೈಗಂಬರರು: "ಈ ಕ್ರಮವನ್ನು ಅಲ್ಲಾಹನು ಇಷ್ಟಪಡಲಾರ. ನಾನು ಸಾಮಾನ್ಯವಾಗಿ ಧರಿಸುವ ಉಡುಪಿನಲ್ಲೇ ಅವರನ್ನು ಬರಮಾಡಿಕೊಳ್ಳುವೆನು" ಎಂದು ನುಡಿದರು.

ಪೈಗಂಬರರ ಶಯ್ಯೋಪಕರಣಗಳು ಬಹಳ ಸರಳವಾಗಿದ್ದವು. ಅವರು ಹಾಸಿಗೆಯನ್ನಾಗಲಿ ಮಂಚವನ್ನಾಗಲಿ ಉಪಯೋಗಿಸಲಿಲ್ಲ. ಒಂದು ತುಂಡು ಚರ್ಮ ಅಥವಾ ಒಂಟೆಯ ರೋಮದಿಂದ ತಯಾರಿಸಿದ ಒಂದು ತುಂಡು ಹಾಸು. ಅದರ ಮೇಲೆ ಅವರು ನಿದ್ರಿಸುತ್ತಿದ್ದರು.

ಪೈಗಂಬರರ ಮನೆ ಸಹ ಬಹಳ ಸರಳವಾಗಿತ್ತು. ಒಂದು ಕೋಣೆ ಮತ್ತು ವರಾಂಡ. ಯಾರಾದರೂ ಅತಿಥಿಗಳು ಬಂದರೆ ಕೋಣೆಯನ್ನು ಎರಡು ಪಾಲುಮಾಡಲಿಕ್ಕೆ ಮಧ್ಯದಲ್ಲೊಂದು ಪರದೆ ಇತ್ತು.

ಪೈಗಂಬರರ ಜೀವಿತಕಾಲದಲ್ಲಿ ತಾವು ಹಲವು ಸಲ ಖರ್ಜೂರ ಮತ್ತು ನೀರನ್ನು ಮಾತ್ರ ಸೇವಿಸಿ ದಿನ ಕಳೆಯಬೇಕಾಗಿ ಬಂದಿತ್ತೆಂದೂ ಪೈಗಂಬರರ ನಿಧನ ಸಮಯದಲ್ಲಿ ಆಹಾರ ವಸ್ತುವಾಗಿ ಮನೆಯಲ್ಲಿ ಸ್ವಲ್ಪ ಖರ್ಜೂರ ಹೊರತು ಬೇರೇನೂ ಇರಲಿಲ್ಲವೆಂದೂ ಹಝ್ರತ್ ಆಯಿಶ(ರ) ಹೇಳಿದ್ದರು.

## ದೇವಭಕ್ತಿ

ಅಲ್ಲಾಹನ ಮೇಲೆ ಅಮಿತವಾದ ಪ್ರೀತಿ ಮತ್ತು ಭಕ್ತಿ ಮುಹಮ್ಮದ್ ಪೈಗಂಬರರ ಜೀವಿತವನ್ನು ನಿಯಂತ್ರಿಸುವ ಪ್ರಧಾನ ಅಂಶವಾಗಿತ್ತು. ಭಾರವಾದ ಜವಾಬ್ದಾರಿಕೆಗಳೂ ಹೊಣೆಗಾರಿಕೆಗಳೂ ಅವರ ಮೇಲಿದ್ದರೂ ಹಗಲು ರಾತ್ರಿ ಎಷ್ಟೋ ತಾಸುಗಳನ್ನು ಅವರು ಅಲ್ಲಾಹನನ್ನು ಆರಾಧಿಸಲಿಕ್ಕೂ ಅವನ ಸ್ತುತಿಕೀರ್ತನೆ ಮಾಡಲಿಕ್ಕೂ ವ್ಯಯಿಸುತ್ತಿದ್ದರು. ಮಧ್ಯ ರಾತ್ರಿಯ ಬಳಿಕ ಪೈಗಂಬರರು ನಿದ್ರೆಯಿಂದ ಎದ್ದು ಮುಂಜಾನೆಯ ಸಾಮೂಹಿಕ ಪ್ರಾರ್ಥನೆಗೆ ಮಸೀದಿಗೆ ಹೋಗುವ ವರೆಗೆ ದೇವಾರಾಧನೆಯಲ್ಲಿ ಮಗ್ನರಾಗಿರುತ್ತಿದ್ದರು.

ದೀರ್ಘ ಸಮಯ ನಿಂತು ಪ್ರಾರ್ಥಿಸುವ ಕಾರಣ ಕೆಲವು ಸಲ ಪೈಗಂಬರರ ಕಾಲುಗಳು ಬಾತುಕೊಳ್ಳುತ್ತಿದ್ದವು. ಈ ಸ್ಥಿತಿಯನ್ನು ಕಂಡು ಪತ್ನಿ ಆಯಿಶ(ರ) ಪೈಗಂಬರರೊಡನೆ ಕೇಳಿದರು: "ಅಲ್ಲಾಹನು ತನ್ನ ಅಪಾರವಾದ ಪ್ರೀತಿ–ಸಾಮೀಪ್ಯಗಳಿಂದ ತಮ್ಮನ್ನು ಗೌರವಿಸಿದ್ದಾನೆ. ಹಾಗಿದ್ದರೂ ತಾವೇಕೆ ಸ್ವಯಂ ಪೀಡನೆಗಳನ್ನು ಸಹಿಸಿಕೊಂಡು ಇಷ್ಟು ಕಠಿಣವಾಗಿ ಪ್ರಾರ್ಥಿಸುತ್ತಿದ್ದೀರಿ?" ಪೈಗಂಬರರು ಪ್ರತ್ಯುತ್ತರವಾಗಿ ಹೀಗೆ ನುಡಿದರು: "ಅಲ್ಲಾಹನು ತನ್ನ ಪ್ರೀತಿ ಮತ್ತು ಸಾಮೀಪ್ಯದಿಂದ ನನ್ನನ್ನು ಅನುಗ್ರಹಿಸಿದ್ದರೆ, ನಾನು ಅವನಿಗೆ ಹೆಚ್ಚು ಕೃತಜ್ಞತೆಯನ್ನು ಸಲ್ಲಿಸಬೇಡವೇ? ನಮಗೆ ಲಭಿಸುವ ಅನುಗ್ರಹಗಳ ಪ್ರಮಾಣವನ್ನನುಸರಿಸಿ ಕೃತಜ್ಞತೆಯನ್ನು ಸಹ ಹೆಚ್ಚಿಸಬೇಕಲ್ಲವೇ?"

ಅಲ್ಲಾಹನ ಆಜ್ಞೆಯಾಗಲಿ ಅನುಮತಿಯಾಗಲಿ ಇಲ್ಲದೆ ಪೈಗಂಬರರು ಯಾವುದೇ ಕೆಲಸಕ್ಕೂ ಮುಂದಾಗುತ್ತಿರಲಿಲ್ಲ. ಮಕ್ಕ ನಿವಾಸಿಗಳಿಂದ ಅತಿ ಕಠಿಣವಾದ ದೌರ್ಜನ್ಯಗಳನ್ನು ಸಹಿಸಬೇಕಾಗಿ ಬಂದಾಗಲೂ ಅಲ್ಲಾಹನ ಆಜ್ಞೆ ಪಡೆಯುವ ವರೆಗೆ ಅವರು ಆ ಪಟ್ಟಣವನ್ನು ಬಿಟ್ಟು ಹೋಗಿರಲಿಲ್ಲ. ದೌರ್ಜನ್ಯ ಸಹಿಸಲು ಅಸಾಧ್ಯವಾದಾಗ ಅವರು ತನ್ನ ಅನುಯಾಯಿಗಳಿಗೆ ಮಕ್ಕವನ್ನು ತೊರೆದು ಅಬಿಸೀನಿಯಾದಲ್ಲಿ ಆಶ್ರಯವನ್ನು ಪಡೆಯುವರೆ ಅನುಮತಿ ನೀಡಿದರು. ಆಗ ಅವರಲ್ಲಿ ಕೆಲವರು ಪೈಗಂಬರರು ಸಹ ತಮ್ಮೊಂದಿಗೆ ಬರಬೇಕೆಂದು ಅಪೇಕ್ಷೆಪಟ್ಟರು. ಹಾಗೆ ಮಾಡಲು ದೇವಾನುಮತಿ ಸಿಕ್ಕಿಲ್ಲವೆಂಬ ಕಾರಣದಿಂದ ಆ ಕೋರಿಕೆಯನ್ನು ಪೈಗಂಬರರು ನಿರಾಕರಿಸಿದರು. ಸಾಮಾನ್ಯವಾಗಿ ಅತ್ಯಂತ ವಿಷಮಕರವಾದ ಸಂದರ್ಭಗಳಲ್ಲಿ ಬಹಳ ಪೀಡನೆಗಳಿಗೆ ಗುರಿಯಾಗುವಾಗ ತಮ್ಮ ನಿಕಟ ಬಂಧುಗಳನ್ನೂ ಸ್ನೇಹಿತರನ್ನೂ ತಮ್ಮ ಸಂರಕ್ಷಣೆಗೋಸ್ಕರ

ತಮ್ಮೊಂದಿಗೆ ಜನಸಾಮಾನ್ಯರು ನಿಲ್ಲಿಸುತ್ತಾರೆ. ಆದರೆ ಪೈಗಂಬರರು ಮಕ್ಕ ಬಿಟ್ಟು ಹೋಗಲು ಅಲ್ಲಾಹನು ತನಗೆ ಆದೇಶ ನೀಡಿಲ್ಲ ಎಂಬ ಕಾರಣದಿಂದ ಮಕ್ಕದಲ್ಲೇ ನಿಲ್ಲಲು ನಿರ್ಧರಿಸಿ ತನ್ನ ಜನರಿಗೆ ಸುರಕ್ಷಿತವಾಗಿದ್ದ ಅಬಿಸೀನಿಯಾದಲ್ಲಿ ಆಶ್ರಯ ಪಡೆಯಲು ನಿರ್ದೇಶಿಸಿದರು.

ಸಾಮೂಹಿಕ ಪ್ರಾರ್ಥನೆಗೋಸ್ಕರ ಮಸೀದಿಗೆ ತಲಪಬೇಕೆಂಬ ವಿಚಾರದಲ್ಲಿ ಪೈಗಂಬರರು ಬಹಳ ಶ್ರದ್ಧಾವಂತರಾಗಿದ್ದರು. ಕಠಿಣವಾದ ಕಾಯಿಲೆಗೆ ಗುರಿಯಾಗಿ ಮಲಗಿದ್ದಾಗ – ಆಗ ಮನೆಯಲ್ಲಿ ಮಲಗಿ ನಮಾಝ್ ಮಾಡಲಿಕ್ಕೆ ಅನುಮತಿ ಇದೆ – ಅಂತಹ ಪರಿಸ್ಥಿತಿಯಲ್ಲಿ ಸಹ ನಮಾಝ್‌ಗೆ ನೇತೃತ್ವ ವಹಿಸಲಿಕ್ಕಾಗಿ ಪೈಗಂಬರರು ಮಸೀದಿಗೆ ಹೋಗುತ್ತಿದ್ದರು.

ಪೈಗಂಬರರ ಜೀವಿತವೆಂಬ ತಕ್ಕಡಿಯಲ್ಲಿ ಒಂದು ಕಡೆಯಲ್ಲಿ ದೈವಿಕ ಪ್ರಚೋದನೆಗಳಿದ್ದರೆ ಇನ್ನೊಂದು ಕಡೆಯಲ್ಲಿ ಸರಳತೆಯೂ ವಿನಯವೂ ಇತ್ತು. ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: "ಪೈಗಂಬರರು ಒಮ್ಮೆ ಹೀಗೆ ಹೇಳುವುದಾಗಿ ನಾನು ಕೇಳಿದೆ – 'ಸ್ವಂತ ಸತ್ಕರ್ಮಗಳಿಂದ ಮಾತ್ರ ಒಬ್ಬ ಮನುಷ್ಯನಿಗೆ ಮೋಕ್ಷ ಲಭಿಸಲಾರದು.' ಆಗ ನಾನು ಹೇಳಿದೆ: 'ಪ್ರವಾದಿ ವರ್ಯರೆ, ತಮ್ಮ ಸ್ವಂತ ಸತ್ಕರ್ಮಗಳ ಮೂಲಕ ಖಂಡಿತವಾಗಿಯೂ ತಾವು ಸ್ವರ್ಗದಲ್ಲಿ ಪ್ರವೇಶಿಸುವಿರಿ.' ಇದಕ್ಕೆ ಉತ್ತರವಾಗಿ ಪೈಗಂಬರರು ನುಡಿದರು: "ಇಲ್ಲ, ನನಗೆ ಕೂಡ ನನ್ನ ಸತ್ಕರ್ಮಗಳ ಮೂಲಕ ಮಾತ್ರದಿಂದ ಸ್ವರ್ಗದಲ್ಲಿ ಪ್ರವೇಶಿಸಲಿಕ್ಕೆ ಸಾಧ್ಯವಿಲ್ಲ – ಅಲ್ಲಾಹನ ಅನುಗ್ರಹ ಮತ್ತು ದಯೆಯಿಂದ ನಾನು ಆಚ್ಛಾದಿಸಲ್ಪಟ್ಟರೆ ಹೊರತು."

ಒಂದು ಸಂದರ್ಭದಲ್ಲಿ ಮುಹಮ್ಮದ್ ಪೈಗಂಬರ್(ಸ) ಹೇಳಿದರು: "ಮನುಷ್ಯ ಕುಲದ ಪ್ರಭು ಅಲ್ಲಾಹನಾಗಿದ್ದಾನೆ. ಆ ಅಲ್ಲಾಹನ ಆಜ್ಞೆಗಳಿಗೆ ಮಾತ್ರ ನಾನು ವಿಧೇಯನಾಗಿದ್ದೇನೆ. ಬೇರೆ ಯಾರದೇ ನಿರ್ದೇಶನಗಳಾಗಲಿ, ಅಪೇಕ್ಷೆಗಳಾಗಲಿ, ಆಜ್ಞೆಗಳಾಗಲಿ ಅಲ್ಲಾಹನ ಮುಂದೆ ನನಗೆ ಕ್ಷುಲ್ಲಕವಾಗಿವೆ."

ಏಕದೇವ ಬೋಧನೆಯನ್ನು ಪೈಗಂಬರರು ನಿಲ್ಲಿಸಬೇಕೆಂದು ಮಕ್ಕದ ಮುಖಂಡರು ಬಯಸಿದರು. ಮುಹಮ್ಮದ್ ತನ್ನ ಏಕದೇವ ಸಿದ್ಧಾಂತವನ್ನು ಪ್ರಚಾರ ಮಾಡುವುದನ್ನು ಬಿಟ್ಟರೆ ಮುಹಮ್ಮದ್ ಕೇಳುವ ಏನನ್ನು ಬೇಕಾದರೂ ಕೊಡಲು ಅವರು ಸಿದ್ಧರಾದರು. ರಾಜ್ಯದಲ್ಲಿ ಅತ್ಯಂತ ಗೌರವಾನ್ವಿತ ವ್ಯಕ್ತಿಯೆಂದು ಮುಹಮ್ಮದ್‌ರನ್ನು ಘೋಷಿಸಲಾಗುವುದು. ಮುಹಮ್ಮದ್ ಧನವನ್ನು ಆಶಿಸುವುದಾದರೆ ಎಷ್ಟು ಬೇಕಾದರೂ ನೀಡಲಾಗುವುದು. ಮಕ್ಕದ ಅತಿ ದೊಡ್ಡ ಧನಿಕನೆಂದು ಮನ್ನಣೆ ನೀಡಲಾಗುವುದು. ಮಕ್ಕದ ರಾಜನಾಗಲು ಮುಹಮ್ಮದ್ ಬಯಸುವುದಾದರೆ ತಾವು ಅದಕ್ಕೆ ಸಹ ಸಿದ್ದರು. ಮುಹಮ್ಮದ್‌ರಿಗೆ ಸುಂದರಿಯಾದ ಓರ್ವ ತರುಣಿ ಬೇಕೆಂದಾದರೆ ಮಕ್ಕದ ಎಲ್ಲ ತರುಣೀಮಣಿಗಳನ್ನು ಮುಹಮ್ಮದರ ಮುಂದೆ ನಿಲ್ಲಿಸಲಾಗುವುದು. ಬದಲಿಗೆ ಮುಹಮ್ಮದ್ ಮಾಡಬೇಕಾದುದು ಇಷ್ಟೆ, ಅದೇನೆಂದರೆ ಏಕದೇವ ವಿಶ್ವಾಸವನ್ನು ತ್ಯಜಿಸುವುದು.

ಮುಹಮ್ಮದ್ ಪೈಗಂಬರರು ತಾಳ್ಮೆಯಿಂದ ಈ ಪ್ರಲೋಭನೆಗಳನ್ನೆಲ್ಲ ಆಲಿಸಿದರು. ಅನಂತರ ಶಾಂತವಾಗಿ, ಆದರೆ ದೃಢಸ್ವರದಲ್ಲಿ ಹೇಳಿದರು: **"ನೀವು ನನ್ನ ಬಲ ಕೈಯಲ್ಲಿ ಸೂರ್ಯನನ್ನೂ ಎಡ ಕೈಯಲ್ಲಿ ಚಂದ್ರನನ್ನೂ ತಂದು ಕೊಟ್ಟರೆ ಕೂಡ ಈ ವಿಶ್ವಾಸದಿಂದ ಅಣುಮಾತ್ರದಷ್ಟಾದರೂ ವಿಚಲಿತನಾಗಲು ನಾನು ಸಿದ್ಧನಿಲ್ಲ."**

## ಯುದ್ಧ ನೀತಿ

ಮುಸ್ಲಿಮರು ಯಾವ ಕಾರಣದಿಂದಾಗಲಿ ಮೊದಲಿಗೆ ಆಕ್ರಮಿಸಬಾರದೆಂದೂ ಪ್ರತಿರೋಧವೆಂಬ ರೀತಿಯಲ್ಲಿ ಹೊರತು ಯುದ್ಧ ಮಾಡಬಾರದೆಂದೂ ಪೈಗಂಬರರು ನಿರ್ದೇಶಿಸಿದ್ದರು. ಯುದ್ಧದಲ್ಲಿ ಸ್ತ್ರೀಯರನ್ನಾಗಲಿ, ಮಕ್ಕಳನ್ನಾಗಲಿ, ವೃದ್ಧರನ್ನಾಗಲಿ, ಅಶಕ್ತರನ್ನಾಗಲಿ ಕೊಲ್ಲಬಾರದೆಂದೂ ಅನುಯಾಯಿಗಳಿಗೆ ಅವರು ಆದೇಶಿಸಿದ್ದರು. ಆಯುಧವನ್ನಿಟ್ಟು ಶರಣಾಗತಿಯಾದವರನ್ನು ಸಹ ಕೊಲ್ಲಬಾರದೆಂದು ಪೈಗಂಬರರು ಕಲಿಸಿದರು. ಯುದ್ಧಕಾಲದಲ್ಲಿ ಮರಗಳನ್ನು ಕಡಿದು ನಾಶಮಾಡಬಾರದೆಂದೂ ಪಟ್ಟಣಗಳನ್ನು ಕೊಳ್ಳೆಹೊಡೆದು ನಿರ್ನಾಮಮಾಡಬಾರದೆಂದೂ ಕಲಿಸಿದರು.

ಉಹದ್ ಯುದ್ಧದಲ್ಲಿ ಶತ್ರುಸೈನ್ಯದವರು ಮೃತರಾದ ಮುಸ್ಲಿಂ ಯೋಧರ ಅಂಗಾಂಗಗಳನ್ನು ಕಡಿದು ವಿರೂಪಗೊಳಿಸಿದ್ದರು. ಪೈಗಂಬರರ ಆದರಣೀಯ ಚಿಕ್ಕಪ್ಪ ಹಂಝರವರ(ರ) ಮೃತಶರೀರವನ್ನು ಸಹ ಅವರು ವಿರೂಪಗೊಳಿಸಿದ್ದರು. ಆದರೆ ಮುಸ್ಲಿಮರು ಪ್ರತಿಕಾರವಾಗಿ ವೈರಿಗಳ ದೇಹವನ್ನು ಹಾಗೆ ವಿರೂಪಗೊಳಿಸಬಾರದೆಂದು ಪೈಗಂಬರರು ತಾಕೀತು ಮಾಡಿದರು.

ಬದ್ರ್ ಯುದ್ಧದಲ್ಲಿ 70 ಮಂದಿ ಅವಿಶ್ವಾಸಿಗಳನ್ನು ಸೆರೆಹಿಡಿಯಲಾಗಿತ್ತು. ಪೈಗಂಬರರ ನಿರ್ದೇಶಾನುಸಾರ ಆ ಕೈದಿಗಳನ್ನು ಬಹಳ ಚೆನ್ನಾಗಿ ನೋಡಿಕೊಳ್ಳಲಾಯಿತು. ಮುಸ್ಲಿಮರು ಕಾಲ್ನಡೆಯಾಗಿ ಹೋಗುವಾಗ ಅವರಿಗೆ ಸವಾರಿ ಮೃಗಗಳನ್ನು ಒದಗಿಸಲಾಯಿತು. ಮುಸ್ಲಿಮರು ಹಸಿವೆ ಮತ್ತು ಬಾಯಾರಿಕೆಯಿಂದ ಬಳಲುತ್ತಿದ್ದರೂ ಕೈದಿಗಳಿಗೆ ಅನ್ನ ಮತ್ತು ನೀರನ್ನು ಒದಗಿಸಲಾಯಿತು.

## ಪೈಗಂಬರರು ಶತ್ರುಗಳೊಡನೆ ಸೇಡು ತೀರಿಸಲಿಲ್ಲ

ತನ್ನ ಅಧ್ಯಾಪನೆಗಳಿಗೆ ಮಕ್ಕ ನಿವಾಸಿಗಳಿಂದ ಕಠಿಣವಾದ ವಿರೋಧವನ್ನು ಅನುಭವಿಸಿದ ಪೈಗಂಬರರು ಮಕ್ಕದಿಂದ 60 ಮೈಲುಗಳಷ್ಟು ದೂರವಿರುವ ತಾಯಿಫ್ ಎಂಬ ಪಟ್ಟಣವನ್ನು ಧರ್ಮ ಪ್ರಚಾರಕ್ಕಾಗಿ ಆಯ್ಕೆ ಮಾಡಿದರು. ಈ ಪಟ್ಟಣದ ಜನರ ಮುಂದೆ ಪೈಗಂಬರರು ತನ್ನ ಆಗಮನೋದ್ದೇಶವನ್ನು ವಿವರಿಸಿದಾಗ ಮಕ್ಕ ನಿವಾಸಿಗಳಿಗಿಂತ ಕ್ರೂರವಾಗಿ ತಾಯಿಫ್ ನಿವಾಸಿಗಳು ವರ್ತಿಸಿದರು. ಅವರು ಪೈಗಂಬರರನ್ನು ಅವಹೇಳಿಸಿ ತಾಯಿಫ್‌ನಿಂದ ಓಡಿಸಿಬಿಟ್ಟರು. ಅಷ್ಟೇ ಅಲ್ಲ, ಅವರು ಪೈಗಂಬರರ ಮೇಲೆ ನಾಯಿಗಳನ್ನು ಛೂಬಿಟ್ಟರು. ಪುಂಡ ಹುಡುಗರು ಆ ಪ್ರವಾದಿವರ್ಯರಿಗೆ ಕಲ್ಲುಗಳನ್ನು ಎಸೆಯುತ್ತಾ ಅಸಭ್ಯವಾಗಿ ಬಯ್ಯುತ್ತಾ ಬೆನ್ನಟ್ಟಿದರು. ಪೈಗಂಬರರ ದೇಹವೆಲ್ಲ ರಕ್ತಸಿಕ್ತವಾಯಿತು. ಆ ಸಂದರ್ಭದಲ್ಲಿ ದಿವ್ಯದೂತರು ಪ್ರವಾದಿಯ ಮುಂದೆ ಪ್ರತ್ಯಕ್ಷರಾಗಿ, "ತಾವು ಬಯಸುವುದಾದರೆ ಎರಡೂ ಬದಿಗಳಲ್ಲಿರುವ ಪರ್ವತಗಳ ಮಧ್ಯೆ ತಾಯಿಫ್ ಪಟ್ಟಣವನ್ನು ಸಿಲುಕಿಸಿ ಜನರನ್ನು ನಾಶಮಾಡಲಿಕ್ಕೋಸ್ಕರ ಅಲ್ಲಾಹನು ನಮ್ಮನ್ನು ನಿಯುಕ್ತಗೊಳಿಸಿದ್ದಾನೆ" ಎಂದು ಹೇಳಿದರು. ಆದರೆ ಪೈಗಂಬರರ

ಮನಸ್ಸು ತಾಯಿಫ್ ಜನತೆಗಾಗಿ ದುಃಖದಿಂದ ತುಡಿಯುತ್ತಿತ್ತು. ನೋವು ತುಂಬಿದ ಹೃದಯದಿಂದ ಪೈಗಂಬರರು ಅಲ್ಲಾಹನೊಡನೆ ಪ್ರಾರ್ಥಿಸಿದರು: **"ನನ್ನ ಪ್ರಭೂ, ನಾನು ಹೇಳುವುದು ಸತ್ಯವೆಂದು ಈ ಜನರು ತಿಳಿಯುವುದಿಲ್ಲ. ತಾವು ಮಾಡುವುದು ಸರಿಯೆಂದು ಅವರು ಭಾವಿಸುತ್ತಾರೆ. ಆದ್ದರಿಂದ ನೀನು ಅವರ ಮೇಲೆ ಕ್ರೋಧಿಸಬೇಡ. ಅವರ ಮೇಲೆ ನೀನು ಶಿಕ್ಷೆ ಇಳಿಸಬೇಡ. ಸತ್ಯವನ್ನು ಕಾಣುವಂತಾಗಲು ಅವರ ಕಣ್ಣುಗಳನ್ನು ನೀನು ತೆರೆ. ಸತ್ಯವನ್ನು ಸ್ವೀಕರಿಸಲು ಅವರಿಗೆ ನೀನು ಭಾಗ್ಯವನ್ನು ನೀಡು."**

13 ವರ್ಷಗಳ ಕಾಲ ಮಕ್ಕದಲ್ಲಿ ಮುಹಮ್ಮದ್ ಪೈಗಂಬರ್[ಸ]ರನ್ನೂ ಅವರ ಅನುಯಾಯಿಗಳನ್ನೂ ಶತ್ರುಗಳು ಹಲವು ವಿಧದ ದೌರ್ಜನ್ಯಗಳಿಗೆ ಗುರಿಪಡಿಸಿದ್ದರು. ಕೆಲವರ ಕಾಲಿಗೆ ಹಗ್ಗವನ್ನು ಕಟ್ಟಿ ಎಳೆದೊಯ್ದರು. ಕೆಲವರನ್ನು ಉರಿಬಿಸಿಲಿನಲ್ಲಿ ಮರಳಿನ ಮೇಲೆ ಮಲಗಿಸಿ ಎದೆಯ ಮೇಲೆ ಭಾರವಾದ ಕಲ್ಲುಗಳನ್ನಿಟ್ಟು ಅವರು ಅನುಭವಿಸುವ ಬಾಧೆಯನ್ನು ಕಂಡು ಹರ್ಷಗೊಳ್ಳುತ್ತಿದ್ದರು. ಕೆಲವರನ್ನು ಹೊಗೆ ಹಾಕಿ ಉಸಿರುಕಟ್ಟುವಂತೆ ಮಾಡಿದರು. ಮುಸ್ಲಿಮರಿಗೆದುರಾಗಿ ಅವರು ನಡೆಸಿದ ದುಷ್ಕೃತ್ಯಗಳು ಎಲ್ಲ ಸೀಮೆಗಳನ್ನೂ ಮೀರಿದ್ದವು. ಅದರ ಕಠೋರತೆಯನ್ನು ನೆನಸುವಾಗಲೇ ಮೈನವಿರೇಳುತ್ತದೆ. ಅವರು ಬಡಸ್ತ್ರೀಯರನ್ನೂ ಮಕ್ಕಳನ್ನೂ ನಿಷ್ಕರುಣೆಯಿಂದ ಹತ್ಯೆಮಾಡಿದರು. ಕೆಲ ಸ್ತ್ರೀಯರ ಗುಹ್ಯಾಂಗದೊಳಗೆ ಈಟಿಯಿಂದ ತಿವಿದು ಅವರನ್ನು ಕೊಂದು ಹಾಕಿದರು. ಕೆಲ ಸ್ತ್ರೀಯರ ಎರಡು ಕಾಲುಗಳನ್ನು ಎರಡು ಒಂಟೆಗಳ ಕಾಲುಗಳಿಗೆ ಬಿಗಿಯಾಗಿ ಕಟ್ಟಿ ಅವುಗಳನ್ನು ಎದಿರು ಬದಿರು ದಿಕ್ಕುಗಳಿಗೆ ಓಡಿಸಿ ಅವರ ದೇಹವನ್ನು ಸಿಗಿದು ಹಾಕಿದರು. ಮೂರು ವರ್ಷಗಳ ಕಾಲ ಅವರು ಪೈಗಂಬರರನ್ನೂ ಅನುಯಾಯಿಗಳನ್ನೂ ಬಹಿಷ್ಕರಿಸಿ ಅನ್ನಾಹಾರ ಸಿಗದಂತೆ ಮಾಡಿದರು. ಆ ಬಹಿಷ್ಕಾರದ ಕಾರಣದಿಂದ ಪೈಗಂಬರರ ಚಿಕ್ಕಪ್ಪ ಅಬೂತಾಲಿಬ್ ಮತ್ತು ಪ್ರಿಯ ಪತ್ನಿ ಖದೀಜ ಮೃತರಾದರು. ಹೀಗೆ 13 ವರ್ಷ ಕಾಲ ಪೈಗಂಬರರಿಗೂ ಅನುಚರರಿಗೂ ಹಲವು ವಿಧ ಕಷ್ಟಾನುಭವಗಳನ್ನು ಸಹಿಸಬೇಕಾಯಿತು.

ಅಲ್ಲಾಹನ ಅನುಗ್ರಹದಿಂದ, ಕೊನೆಗೆ ಪೈಗಂಬರರು ಶತ್ರುಗಳನ್ನು ಸೋಲಿಸಿ ಮಕ್ಕ ನಗರವನ್ನು ವಶಪಡಿಸಿದಾಗ, ಮಕ್ಕ ನಿವಾಸಿಗಳು ತಾವು ಪೈಗಂಬರರಿಗೂ ಅನುಯಾಯಿಗಳಿಗೂ ಮುಂಚೆ ಎಸಗಿದ್ದ ಕ್ರೂರ ಕೃತ್ಯಗಳನ್ನು ನೆನೆಸಿ ಭಯವಿಹ್ವಲರಾಗಿದ್ದರು. ಮಕ್ಕದ ಮುಸ್ಲಿಮರು ಅನುಭವಿಸಿದ ದೌರ್ಜನ್ಯಗಳನ್ನು ಪ್ರತ್ಯಕ್ಷದಲ್ಲಿ ಕಂಡಿಲ್ಲವಾದರೂ ಎಲ್ಲವನ್ನೂ ಕೇಳಿ ತಿಳಿದುಕೊಂಡಿದ್ದ ಮದೀನ ನಿವಾಸಿಗಳು ಕ್ಷುಭಿತರಾಗಿದ್ದರು. ಎಲ್ಲರೂ ಮುಹಮ್ಮದ್ ಪೈಗಂಬರ್[ಸ]ರವರ ತೀರ್ಮಾನವನ್ನು ನಿರೀಕ್ಷಿಸುತ್ತಿದ್ದರು. ಆದರೆ ವಿಶಾಲ ಹೃದಯಿಯಾದ ಪೈಗಂಬರರು ಶತ್ರುಗಳ ದೌರ್ಜನ್ಯಗಳನ್ನೆಲ್ಲ ಮರೆತು ಮಕ್ಕ ನಿವಾಸಿಗಳೆಲ್ಲರಿಗೂ ಕ್ಷಮೆ ನೀಡಿದರು!

ಪೈಗಂಬರರು[ಸ] ಮಕ್ಕದವರೊಡನೆ ಹೀಗೆ ಹೇಳಿದರು: **"ಎಲೈ ಮಕ್ಕ ನಿವಾಸಿಗಳೇ, ನೀವು ನನ್ನ ವಿರುದ್ಧವಾಗಿ ಮಾಡಿದ ಎಲ್ಲ ದುಷ್ಕೃತ್ಯಗಳಿಗೆ ನಾನು ಈ ದಿನ ನಿಮಗೆ ಕ್ಷಮೆ ನೀಡುತ್ತೇನೆ. ಆ ಕಾರಣದಿಂದ ನೀವು ಶಿಕ್ಷಿಸಲ್ಪಡಲಾರಿರಿ."**

ಮಹತ್ತರವಾದ ಮಾನವ ಸ್ವಭಾವಗಳನ್ನು ತೋರಿಸಿ ಲೋಕ ಜನರಿಗೆಲ್ಲ ಉತ್ಕೃಷ್ಟ ಮಾದರಿ ಪುರುಷರಾದ ಆ ಪ್ರವಾದಿ ಶ್ರೇಷ್ಠರ ಮೇಲೆ ಅಲ್ಲಾಹನು ಕೋಟಿ ಕೋಟಿ ಇಷ್ಟಾಶೀರ್ವಾದಗಳನ್ನು ವರ್ಷಿಸಲಿ.

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದ್.**

**(ವಿವಿಧ ಮೂಲಗಳಿಂದ)**

◆

---

**20ನೇ ಪುಟದಿಂದ – ಬಹುಭಾರ್ಯತ್ವ**

ಆವಶ್ಯಕವಾಗಿದೆ ಮತ್ತು ಕುಟುಂಬದ ಸದಸ್ಯರಲ್ಲಿ ನೈಜ ಪ್ರೀತಿ ವಿಶ್ವಾಸಗಳು ಪುನಃ ಸ್ಥಾಪಿಸಲ್ಪಡಬೇಕು. ಕುಟುಂಬದ ಪ್ರತಿಯೊಬ್ಬ ಸದಸ್ಯ ಬೇರೆಯೇ ವಾಸಿಸುತ್ತಿದ್ದರೂ ಇಂತಹ ವಿಸ್ತೃತವಾದ ಕುಟುಂಬದ ಕಲ್ಪನೆಯನ್ನು ಇಸ್ಲಾಮ್ ಬೆಂಬಲಿಸುತ್ತದೆ ಮತ್ತು ಅನೇಕ ಕಾರಣಗಳಿಂದ ಪ್ರೋತ್ಸಾಹಿಸುತ್ತದೆ. ಆ ಕಾರಣಗಳು ಹೀಗಿವೆ:

1. ಸಮಾಜದಲ್ಲಿ ಅಸಂತುಲಿತಾವಸ್ಥೆ ಉಂಟಾಗುವುದನ್ನು ತಡೆಯುತ್ತದೆ.

2. ಸಹೋದರ ಸಹೋದರಿಯರ ಮಧ್ಯೆ, ಪಿತ ಮತ್ತು ಪುತ್ರಿಯರ ಮಧ್ಯೆ, ತಾಯಿ ಮಕ್ಕಳ ಮಧ್ಯೆ ಬಲಿಷ್ಠವಾದ ಪ್ರೇಮ ವಾತ್ಸಲ್ಯಗಳು ಉಂಟಾದರೆ ಅದು ಕುಟುಂಬವನ್ನು ಬಲಪಡಿಸಿ ಸಂರಕ್ಷಿಸುವುದು. ಈ ಸಹಜ ಸಂಬಂಧ ಇದರೊಂದಿಗೆ ಬೇರೆ ಸಂಬಂಧವನ್ನು ಸಹ ಬಿಗಿಪಡಿಸುವುದು. ಚಿಕ್ಕಮ್ಮ, ದೊಡ್ಡಮ್ಮ, ಮಾವಂದಿರು, ಮೊಮ್ಮಗ, ಮೊಮ್ಮಗಳು, ಅಕ್ಕ ತಂಗಿಯರ ಮಕ್ಕಳ ಸಂಬಂಧ, ಅಣ್ಣ ತಮ್ಮಂದಿರ ಮಕ್ಕಳ ಸಂಬಂಧ, ಅಜ್ಜಂದಿರ ಸಂಬಂಧ ಮೊದಲಾದವು ಬಿಗಿಯಾಗಿ ಸ್ಥಾಪಿತವಾಗುವುವು. ಸಂಬಂಧಿಕರ ಮಧ್ಯೆ ಸಂಬಂಧ ವರ್ಧನೆಯು ಸಂತೋಷದಾಯಕವೂ ಆರೋಗ್ಯಕರವೂ ಆಗಿರುವುದು.

3. ಇಂತಹ ಅವಿಭಜಿತ ಕುಟುಂಬ ತುಂಡು ತುಂಡಾಗಿ ಹೋಗುವುದು ಕಡಿಮೆ ಸಾಧ್ಯತೆಗಳಿವೆ. ಒಂದು ಕುಟುಂಬದ ಹೆಸರಿನಲ್ಲಿ ಒಂದು ಛಾವಣಿಯ ಕೆಳಗೆ ವಾಸಿಸುವುದು ಇಂದು ಗಣಿಸಲ್ಪಡುವ ಹಾಗೆ ಅರ್ಥಶೂನ್ಯವಾಗದು. ಕುಟುಂಬದ ಸದಸ್ಯರು ಕುಟುಂಬದ ಹಿರಿಯರ ಕಡೆಗೆ ತಿರುಗುವರು. ಅಂತಹ ಸಂದರ್ಭದಲ್ಲಿ ಏಕಾಂತ ವ್ಯಕ್ತಿಗಳು, ಮರೆತುಬಿಟ್ಟ, ನಿರಾಶೆ ಹೊಂದಿದ ಮತ್ತು ಕೀಳು ಮಟ್ಟಕ್ಕೆ ತಳ್ಳಲ್ಪಟ್ಟ ಮತ್ತು ಕುಟುಂಬದಿಂದ ಉಪಯೋಗಶೂನ್ಯವೆಂದು ಗಣಿಸಿ ಹೊರ ತಳ್ಳಲ್ಪಟ್ಟವರು ಇರಲಾರದು.

ಮನೆ ಮತ್ತು ಕುಟುಂಬದ ಬಗ್ಗೆ ಇಸ್ಲಾಮಿನ ಕಲ್ಪನೆ ಹೀಗಿದೆ. ಕುಟುಂಬವನ್ನು ಸಮಾಜದ ಮುಖ್ಯ ಘಟಕ ಎಂದು ಪರಿಗಣಿಸಲಾಗಿದೆ. ಈ ಮನೋಭಾವದಿಂದ ವ್ಯತಿರಿಕ್ತವಾದ ಅವಸ್ಥೆಯ ಕಾರಣ ಇಂದಿನ ಸಮಾಜದಲ್ಲಿ ವೃದ್ಧರಾದ ತಂದೆ ತಾಯಂದಿರು ಕುಟುಂಬಕ್ಕೆ ಹೊರೆಯ ರೂಪದಲ್ಲಿ ಗಣಿಸಲ್ಪಟ್ಟು ಬಿಟ್ಟುಬಿಡಲ್ಪಡುತ್ತಿದ್ದಾರೆ.

◆

# ಪವಿತ್ರ ಪ್ರವಾದಿಯ ಮೇಲೆ ಮತ್ತೊಂದು ದಾಳಿ ಮತ್ತು ಅದಕ್ಕೆ ಉತ್ತರ

ಮೇ 2022ರಲ್ಲಿ, ಭಾರತದ ಆಡಳಿತ ಪಕ್ಷವಾದ ಬಿಜೆಪಿಯ ರಾಷ್ಟ್ರೀಯ ವಕ್ತಾರೆ ನೂಪುರ್ ಶರ್ಮಾ ಅವರು ಟಿವಿ ಕಾರ್ಯಕ್ರಮವೊಂದರಲ್ಲಿ ಪ್ರವಾದಿ ಮುಹಮ್ಮದ್‌ರವರ(ಸ) ಅಸ್ತಿತ್ವವನ್ನು ತೀವ್ರವಾಗಿ ವಿರೋಧಿಸಿದರು. ಅವರು ಆಕ್ಷೇಪಿಸಿದ ರೀತಿ ಅತ್ಯಂತ ಆಕ್ರಮಣಕಾರಿ ಮತ್ತು ಅಸಹನೀಯವಾಗಿತ್ತು. ಈ ಕಾರ್ಯಕ್ರಮದ ನಂತರ, ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ದೊಡ್ಡ ಪ್ರಮಾಣದ ಅಶಾಂತಿ ಹರಡಿತು ಮತ್ತು ಅನೇಕ ಮುಸ್ಲಿಂ ಸರ್ಕಾರಗಳು ಭಾರತ ಸರ್ಕಾರದ ವಿರುದ್ಧ ತೀವ್ರವಾಗಿ ಪ್ರತಿಭಟಿಸಿವೆ. ಇದರ ಪರಿಣಾಮವಾಗಿ, ಭಾರತ ಸರ್ಕಾರವು ಹೇಳಿಕೆ ನೀಡಿದ ನಾಯಕಿಯ ಪಕ್ಷದ ಸದಸ್ಯತ್ವವನ್ನು ಅಮಾನತುಗೊಳಿಸಿದೆ. ಈ ಎಲ್ಲ ಸಂದರ್ಭಗಳಲ್ಲಿ, ನಮ್ಮ ಪ್ರೀತಿಯ ಪ್ರವಾದಿಯವರ(ಸ) ವಿರುದ್ಧ ಎದ್ದಿರುವ ಆಕ್ಷೇಪಣೆಗಳಿಗೆ ವಿದ್ವತ್ಪೂರ್ಣವಾಗಿ ಪ್ರತಿಕ್ರಿಯಿಸುವುದು ಮುಸ್ಲಿಮರ ಕರ್ತವ್ಯವಾಗಿದೆ. ಆದ್ದರಿಂದ ಸಾಮಾಜಿಕ ಮಾಧ್ಯಮದಲ್ಲಿ 'ತಟಸ್ಥರು' ಎಂದು ಕರೆಯಲ್ಪಡುವವರು ಎತ್ತಿದ ಪ್ರಶ್ನೆ ಏನೆಂದರೆ ಆ ನಾಯಕಿಯು ಹೇಳಿದ್ದು ತಪ್ಪೇನು? ಅದಕ್ಕೂ ತೃಪ್ತಿಕರ ಉತ್ತರ ನೀಡಬೇಕಾಗಿದೆ.

ಪ್ರವಾದಿಯವರ(ಸ) ವಿರುದ್ಧ ಈ ಮಹಿಳೆ ಎತ್ತಿದ ಎರಡು ಆಕ್ಷೇಪಗಳು ಹೀಗಿವೆ:

1. ಅವರು ಬಾಲಿಕೆಯನ್ನು ವಿವಾಹವಾದರು ಮತ್ತು ಅವಳೊಂದಿಗೆ ಲೈಂಗಿಕ ಸಂಬಂಧ ಹೊಂದಿದ್ದರು.

2. ಕುದುರೆಯ ಮೇಲೆ ಕುಳಿತು ಆಕಾಶಾರೋಹಣ ಮಾಡಿದ್ದರು.

ಮೇಲೆ ವಿವರಿಸಿದಂತೆ ಮಹಿಳೆಯ ಮೊದಲ ಆಕ್ಷೇಪವು "ಪ್ರವಾದಿ(ಸ) ಬಾಲಿಕೆಯನ್ನು ವಿವಾಹವಾದರು ಮತ್ತು ಅವಳೊಂದಿಗೆ ಲೈಂಗಿಕ ಸಂಬಂಧ ಹೊಂದಿದ್ದರು." ಇಸ್ಲಾಮಿನ ಸಂಪ್ರದಾಯದಲ್ಲಿ ಮದುವೆ ಮತ್ತು ರುಖ್ಸತಿ (ತವರು ಮನೆಯಿಂದ ಗಂಡನ ಮನೆಗೆ ವಧುವಿನ ರವಾನೆ) ಎರಡು ವಿಭಿನ್ನ ವಿಷಯಗಳು ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ವಿವಾಹವು ಒಂದು ಧಾರ್ಮಿಕ ಕರ್ಮವಾಗಿದೆ ಮತ್ತು ಕೆಲವು ದೇಶಗಳಲ್ಲಿ ಪುರುಷ ಮತ್ತು ಮಹಿಳೆ ಪತಿ ಪತ್ನಿ ರೂಪದಲ್ಲಿ ಒಟ್ಟಿಗಿರಲು ಅನುಮತಿಸುವ ಕಾನೂನು ಆವಶ್ಯವಾಗಿದೆ. ಆದರೆ ರುಖ್ಸತಿ ಪ್ರಕ್ರಿಯೆ ಹಾಗಲ್ಲ. ಹುಡುಗಿಯು ಪ್ರೌಢಾವಸ್ಥೆಗೆ ತಲಪಿದಾಗ ಮಾತ್ರ ತನ್ನ ಪತಿಯ ಜೊತೆಗೆ ಒಟ್ಟಿಗಿರಲು ಅನುಮತಿವಿರುತ್ತದೆ. ವಿವಾಹ ಮೊದಲು ಜರಗುತ್ತದೆ. ನಂತರ ರುಖ್ಸತಿ ಆಚರಿಸುತ್ತಾರೆ. ಇವೆರಡೂ ಕಾರ್ಯಗಳು ಒಂದೇ ವೇಳೆ ಸಹ ನಡೆಯಬಹುದಾಗಿದೆ. ಕೆಲ ದಿನಗಳ, ವಾರಗಳ, ತಿಂಗಳುಗಳ ಅಥವಾ ವರ್ಷಗಳ ಅಂತರದಲ್ಲಿಯೂ ನಡೆಯಬಹುದಾಗಿದೆ.

ಹಝ್ರತ್ ಆಯಿಶಾರವರ(ರ) ನಿಕಾಹ್ ಪ್ರವಾದಿಯವರ ಜೊತೆ ಕೆಲ ವರದಿಗಳ ಪ್ರಕಾರ 7 ವರ್ಷ ವಯಸ್ಸಿನಲ್ಲಿ ಆಗಿತ್ತು. ಇನ್ನು ಕೆಲವು ವರದಿಗಳ ಪ್ರಕಾರ 9ನೇ ವರ್ಷದಲ್ಲಿ ಎಂದಿದೆ. ಇನ್ನು ಕೆಲ ವರದಿಗಳ ಪ್ರಕಾರ 17ನೇ ವರ್ಷದಲ್ಲಾಗಿತ್ತು ಎಂದು ತಿಳಿದುಬರುತ್ತದೆ.

'ತಬಖಾತ್'ನಲ್ಲಿ ಇಬ್ನು ಸಅದ್ ಅವರ ಒಂದು ವರದಿ ಹೀಗಿದೆ: "ಹಝ್ರತ್ ಆಯಿಶಾ 4ನೇ ಇಸವಿ ನಬವೀ ಪ್ರಾರಂಭದಲ್ಲಿ ಜನ್ಮ ತಾಳಿದರು. ಹೀಗೆಯೇ ಇನ್ನು ಹಲವು ವರದಿಗಳಿಂದ ಅವರ ರುಖ್ಸತಿ 2 ಹಿಜರಿಯಲ್ಲಿ ಆಯಿತು ಎಂದು ಸಾಬೀತಾಗುತ್ತದೆ. ಆಗ ಅವರ ವಯಸ್ಸು 12 ವರ್ಷವಾಗಿತ್ತು. (ಸೀರತ್ ಖಾತಮುನ್ನಬಿಯ್ಯೀನ್, ಗ್ರಂಥ ರಚನೆಕಾರರು – ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಪುಟ 423 – 426)

ಇಸ್ಲಾಮಿನ ವಿರೋಧಿಗಳು ಇಸ್ಲಾಮಿನ ಇತಿಹಾಸದಲ್ಲಿ ಹಝ್ರತ್ ಆಯಿಶಾರವರ(ರ) ನಿಕಾಹ್ (ವಿವಾಹ) ಘಟನೆಯನ್ನು ಇಸ್ಲಾಮಿ ಸಂಪ್ರದಾಯವನ್ನು ಅರಿಯದೆ ರುಖ್ಸತಿ ಎಂದು ಭಾವಿಸಿದ್ದಾರೆ. ಅದು ನಿಜವಾದ ಘಟನೆಗೆ ವಿರುದ್ಧವಾಗಿದೆ.

ಅರಬ್ ದೇಶಗಳು ಸೇರಿದಂತೆ ಕೆಲವು ದೇಶಗಳಲ್ಲಿ ಹುಡುಗಿಯರು ಬಹುವೇಗ ಪ್ರೌಢಾವಸ್ಥೆಗೆ ಬರುತ್ತಾರೆ ಎಂಬುದು ಸರ್ವವಿದಿತ. ಈಗಲೂ ಸಹ ಹಲವು ದೇಶಗಳಲ್ಲಿ 12 ವರ್ಷ ವಯಸ್ಸಿನಲ್ಲಿ ವಿವಾಹ ಸಾಮಾನ್ಯ ಮಾತಾಗಿದೆ. ಈ ಸಮಯದಲ್ಲೂ ಪಾಕಿಸ್ಥಾನದ ನ್ಯಾಯಾಲಯದಲ್ಲಿ ಒಂದು ಮೊಕದ್ದಮೆ ದಾಖಲಾಗಿದೆ. ಅದರಲ್ಲಿ ಕರಾಚಿಯ ಓರ್ವ ಹುಡುಗಿ ದುವಾಝುಹರಾ ಹೆತ್ತವರ ಅಪ್ಪಣೆವಿಲ್ಲದೆ ವಿವಾಹ ಮಾಡಿಕೊಂಡಿದ್ದಾಳೆ. ಹೆತ್ತವರ ಹೇಳಿಕೆ ಪ್ರಕಾರ ಅವಳ ವಯಸ್ಸು ಕೇವಲ 13 ವರ್ಷವಾಗಿದೆ. ಆದಾಗ್ಯೂ ಸಿಂಧ್‌ನಲ್ಲಿ ಬಾಲವಿವಾಹದ ಮೇಲೆ ನಿಷೇಧವಿದೆ. ಅದುದರಿಂದ ಕಾನೂನಿನ ಜಾಲದಿಂದ ತಪ್ಪಿಸಿಕೊಳ್ಳಲು ಪಂಜಾಬ್ ಪ್ರಾಂತ್ಯಕ್ಕೆ ಹೋಗಿ ಮದುವೆ ಮಾಡಿಕೊಂಡಿದ್ದಾಳೆ. ಇದು ವಿವರಿಸುವ ಉದ್ದೇಶವೇನೆಂದರೆ, ಪಾಕಿಸ್ತಾನದಂತಹ ದೇಶದಲ್ಲಿ ಸಾಮಾನ್ಯವಾಗಿ ಹುಡುಗಿಯರು ಅಬಲರಾಗಿರುತ್ತಾರೆ. ಅಲ್ಲಿ 13 ವರ್ಷದ ಹುಡುಗಿ ಯೌವ್ವನ ಅವಸ್ಥೆಗೆ ತಲಪುತ್ತಾಳೆ. ಅರಬ್ ರಾಷ್ಟ್ರಗಳಲ್ಲಿ ಹುಡುಗಿಯರು ದೈಹಿಕವಾಗಿ ಎಷ್ಟೋ ಬಲಾಢ್ಯರಾಗಿರುತ್ತಾರೆ. ಹಾಗಿರುವಾಗ ಯೌವ್ವನ ಅವಸ್ಥೆಗೆ ಹೇಗೆ ತಲುಪದಿರಲು ಸಾಧ್ಯ?

ಆಕ್ಷೇಪಗಾರರ ದೃಷ್ಟಿಯನ್ವಯ ಆ ವಿವಾಹ ದೇಹೇಚ್ಛೆಯ ಪರಿಣಾಮವಾಗಿರುತ್ತಿದ್ದರೆ ಮತ್ತೇಕೆ ಪ್ರವಾದಿವರ್ಯರು(ಸ) ತಮ್ಮ ರಾತ್ರಿಗಳನ್ನು ಹಾಸಿಗೆಯ ಬದಲಾಗಿ ದೇವನ ಮನೆಯಲ್ಲಿ ಸಾಷ್ಟಾಂಗ ಪ್ರಣಾಮಗಳಲ್ಲಿ ಕಳೆಯುತ್ತಿದ್ದರು.?

ಹಝ್ರತ್ ಆಯಿಶಾ(ರ) ಸ್ವಯಂ ಹೇಳುತ್ತಾರೆ: ಪ್ರವಾದಿವರ್ಯರು(ಸ) ಜಮಾಅತಾಗಿ ನಮಾಝ್‌ಗಳಲ್ಲದೆ ಕ್ರಮಬದ್ಧ ರೀತಿಯಲ್ಲಿ ನಫಲ್ ಮತ್ತು ತಹಜ್ಜುದ್ ನಮಾಝ್ ಸುವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸುತ್ತಿದ್ದರು. ಲೋಕವೆಲ್ಲ ನಿದ್ರಿಸುತ್ತಿರುವಾಗ ಅವರು ತಮ್ಮ ಹಾಸಿಗೆಯನ್ನು ಬಿಟ್ಟು ವ್ಯಾಕುಲ ಹೃದಯದೊಂದಿಗೆ ತನ್ನ ಪರಿಪಾಲಕ, ಮಾಲಿಕ ಮತ್ತು ನಿಜವಾದ ಪ್ರಿಯಕರನ ಆಸ್ಥಾನದಲ್ಲಿ ಹಾಜರಾಗುತ್ತಿದ್ದರು ಮತ್ತು ತಮ್ಮ ಬೇಡಿಕೆಗಳನ್ನು ಮುಂದಿಡುತ್ತಿದ್ದರು – ಪರಿಪಾಲಕನಾದ ದೇವನ ವಿಶೇಷ ದರಬಾರಿನಲ್ಲಿ ಹಾಜರಿರುವಂತೆ.

ಪ್ರವಾದಿವರ್ಯರು(ಸ) ರಾತ್ರಿಯ ವೇಳೆ ಎಷ್ಟೆಲ್ಲ ಪ್ರಾರ್ಥಿಸುತ್ತಿದ್ದರು ಮತ್ತು ಎಷ್ಟೆಲ್ಲ ದೀರ್ಘ ನಮಾಝ್‌ಗಳನ್ನು ನಿರ್ವಹಿಸುತ್ತಿದ್ದರು ಎಂದರೆ ಹಝ್ರತ್ ಆಯಿಶಾ(ರ) ಹೇಳುತ್ತಾರೆ: ಕೆಲ ಸಂದರ್ಭಗಳಲ್ಲಿ ಆರಾಧನೆಗೆ ನಿಂತು ನಿಂತು ಅವರ ಕಾಲುಗಳು ಬಾತು ಹೋಗುತ್ತಿದ್ದುವು. [ಬುಖಾರಿ ಕಿತಾಬ್ ಅತ್ತಹಜ್ಜುದ್ ಬಾಬ್ ಖಿಯಾಮುನ್ನಬಿ(ಸ)]

ರಾತ್ರಿಯ ಸಮಯ ಹಝ್ರತ್ ಆಯಿಶಾ(ರ) ಅವರ ಕಣ್ಣುಗಳು ನಿದ್ರೆಯಿಂದ ತೆರೆಯಲ್ಪಡುತ್ತವೆ. ಅವರು ಪೈಗಂಬರರನ್ನು ಹಾಸಿಗೆಯ

ಮೇಲೆ ಕಾಣಲಿಲ್ಲ. ಅವರು ಹೇಳುತ್ತಾರೆ: "ಒಂದು ರಾತ್ರಿ (ನನ್ನ ಕಣ್ಣು ತೆರೆಯಿತು) ಆದರೆ ನಾನು ಹುಝೂರರನ್ನು ಹಾಸಿಗೆಯ ಮೇಲೆ ಕಾಣಲಿಲ್ಲ. ನಾನು ಭಾವಿಸಿದೆ – ಹುಝೂರ್ ನನ್ನನ್ನು ಬಿಟ್ಟು ಇನ್ನೋರ್ವ ಪತ್ನಿಯ ಬಳಿ ಹೋಗಿರಬಹುದು. ನಾನು ಹುಝೂರರನ್ನು ಹುಡುಕಲು ಪ್ರಾರಂಭಿಸಿದೆ. ನೋಡಿದಾಗ ಹುಝೂರ್ ನಮಾಝ್‌ನಲ್ಲಿ ನಮಿಸುವ ಭಂಗಿಯಲ್ಲಿದ್ದಾರೆ ಅಥವಾ ಬಹುಶಃ ಅವರು ಆ ಸಮಯ ಸಾಷ್ಟಾಂಗ ಪ್ರಣಾಮದಲ್ಲಿದ್ದರು ಮತ್ತು ದುಆ ಮಾಡುತ್ತಿದ್ದರು – ಹೇ ಅಲ್ಲಾಹ್, ನೀನು ಎಲ್ಲ ರೀತಿಯ ಸ್ತುತಿಗೆ ಅರ್ಹನೂ ಪ್ರತಾಪವಂತನೂ. (ನೀನೇ ನನ್ನ ಪರಿಪಾಲಕನು) ನಿನ್ನ ಹೊರತು ಯಾರೂ ಆರಾಧನೆಗೆ ಅರ್ಹರಲ್ಲ. ಅವರು ಹೀಗೂ ಹೇಳುತ್ತಿದ್ದರು – ಹೇ ಅಲ್ಲಾಹ್, ನಾನು ಜನರಿಂದ ಗೌಪ್ಯವಾಗಿ ಮಾಡುವ ಕ್ರಿಯೆಗಳನ್ನು ಮತ್ತು ಬಹಿರಂಗವಾಗಿ ಮಾಡುವ ಎಲ್ಲ ಕ್ರಿಯೆಗಳನ್ನು ನಿನ್ನ ಕಾರುಣ್ಯ ಮತ್ತು ಕ್ಷಮಾದಾನದಿಂದ ಆವರಿಸು."

ಹಝ್ರತ್ ಆಯಿಶಾ(ರ) ಹೇಳುತ್ತಾರೆ: ನಾನು ಹುಝೂರರನ್ನು(ಸ) ಈ ರೀತಿ (ನಮಾಝ್‌ನಲ್ಲಿ) ತನ್ನ ಸೃಷ್ಟಿಕರ್ತನ ಆಸ್ಥಾನದಲ್ಲಿ ದುಆ ಮಾಡುವುದನ್ನು ನೋಡಿದಾಗ ನನಗೆ ನನ್ನ ಮೇಲೆ ವಿಷಾದ ಉಂಟಾಯಿತು. ನಾನು ಮನದಲ್ಲಿಯೇ ಅಂದುಕೊಂಡೆ – ನೀನು ಏನು ಅಂತ ತಿಳಿದುಕೊಂಡಿದ್ದೀಯಾ, ಅವರ ಮಹಿಮೆಯೇ ಬೇರೆಯಾಗಿದೆ. (ನಿಸಾಯಿ ಕಿತಾಬ್ ಅಶ್ರತುನ್ನಿಸಾಅ್ ಬಾಬುಲ್ ಗೀರತ್ ವ ಕಿತಾಬುಸ್ಸಲಾತ್ ಬಾಬು ದುಆ ಫಿಸ್ಸುಜೂದ್)

ಒಂದು ಸಂದರ್ಭ ಹಝ್ರತ್ ಇಬ್ನು ಉಮರ್(ರ) ಅವರು ಹಝ್ರತ್ ಆಯಿಶಾ(ರ) ಅವರೊಡನೆ ಕೇಳಿದರು: ನೀವು ನನಗೆ ಹಝ್ರತ್ ಪೈಗಂಬರರ ಯಾವುದಾದರೊಂದು ಮಾತು ನಿಮಗೆ ಆಶ್ಚರ್ಯಕರವಾದದ್ದು ಇದ್ದರೆ ತಿಳಿಸಿ. ಆಗ ಹಝ್ರತ್ ಆಯಿಶಾ(ರ) ಅತ್ತುಬಿಟ್ಟರು. ದೀರ್ಘ ಸಮಯದವರೆಗೆ ಅಳುತ್ತಾ ಇದ್ದರು. ಉತ್ತರಿಸಲಾಗಲಿಲ್ಲ. ಮತ್ತೆ ನುಡಿದರು: ಅವರ ಎಲ್ಲ ಮಾತುಗಳು ಸಹ ಆಶ್ಚರ್ಯಕರವಾಗಿದ್ದುವು. ನಾನು ಯಾವುದನ್ನು ವಿವರಿಸಲಿ, ಯಾವುದನ್ನು ಬಿಡಲಿ. ಒಂದು ರಾತ್ರಿ ಅದು ನನ್ನ ಸರದಿಯಾಗಿತ್ತು. ಹುಝೂರ್ ನನ್ನ ಬಳಿ ಆಗಮಿಸಿದರು, ಹಾಸಿಗೆ ಸೇರಿದರು ಮತ್ತು ಹೇಳಿದರು: ಹೇ ಆಯಿಶಾ! ಇಂದಿನ ರಾತ್ರಿ ನಾನು ನನ್ನ ಒಡೆಯನಾದ ಅಲ್ಲಾಹನ ಆರಾಧನೆಯಲ್ಲಿ ಕಳೆಯಲು ನನಗೆ ಅನುಮತಿ ನೀಡುವೆಯಾ?

ನಾನು ಉತ್ತರಿಸಿದೆ: ಹೇ ನಬಿವರ್ಯರೇ, ದಿಟವಾಗಿಯೂ ನಾನು ನಿಮ್ಮ ಸಾಮೀಪ್ಯವನ್ನು ಇಷ್ಟಪಡುತ್ತೇನೆ ಮತ್ತು ನಿಮ್ಮ ಸಂತುಷ್ಟಿ ಬಯಸುತ್ತೇನೆ. ಆದರೂ ತಮಗೆ ಸಂತೋಷದಿಂದ ಅನುಮತಿ ನೀಡುತ್ತೇನೆ. ಆಗ ಹುಝೂರ್ ಎದ್ದು ಮನೆಯಲ್ಲಿ ಇರಿಸಿದ್ದ ನೀರಿನ ಮಡಕೆ ಹತ್ತಿರ ಹೋದರು. ವುಝು ಮಾಡಿದರು. ಮತ್ತೆ ನಮಾಝ್ ಮಾಡತೊಡಗಿದರು. ಖುರ್‌ಆನಿನ ಕೆಲವು ಭಾಗ ಪಠಿಸಿದರು. ಅವರ ಕಣ್ಣುಗಳಿಂದ ಭಾಷ್ಪ ಸುರಿಯುತ್ತಿತ್ತು. ಅವರು ಕುಳಿತುಕೊಂಡು ಅಲ್ಲಾಹನ ಸ್ತುತಿ ಸ್ಮರಣೆಯಲ್ಲಿ ತಲ್ಲೀನರಾದರು. ಮತ್ತೆ ಅಳತೊಡಗಿದರು. ಮತ್ತೆ ಅವರು ತಮ್ಮ ಕೈಗಳನ್ನು ಮೇಲೆಕ್ಕೆತ್ತಿದರು ಮತ್ತು ಅಳತೊಡಗಿದರು. ಎಲ್ಲಿಯವರೆಗೆ ಎಂದರೆ ನಾನು ನೋಡಿದೆ ಅವರ ಭಾಷ್ಪಗಳಿಂದ ನೆಲ ತೇವಗೊಂಡಿತು. ಅದೇ ಅವಸ್ಥೆಯಲ್ಲಿ ಆ ರಾತ್ರಿ ಕಳೆದರು. ಮುಂಜಾನೆ ಆಗುತ್ತಿದ್ದಂತೆ ಹಝ್ರತ್ ಬಿಲಾಲ್(ರ) ನಮಾಝ್ ನಿರ್ವಹಿಸಲು ಅವರನ್ನು ಕರೆಯಲು ಬಂದರು. ಆಗಲೂ ಅವರ ಕಣ್ಣುಗಳಿಂದ ಭಾಷ್ಪ ಸುರಿಯುತ್ತಿತ್ತು. ಅವರು ಹೇಳಿದರು: ಹೇ ನಬಿವರ್ಯರೇ, ನೀವು ಅಳುತ್ತಿದ್ದೀರಿ, ನಿಮ್ಮ ಬಗ್ಗೆ ಅಲ್ಲಾಹನು ಈ ಶುಭವಾರ್ತೆ ನೀಡಲಿಲ್ಲವೇ – **ವಖದ್ ಗಫರಲ್ಲಾಹುಲಕ ಮಾತಖದ್ದಮ ಮಿನ್ ಧನ್‌ಬಿಕ ವಮಾ ತಅಖ್ಖರ** – (ಹಿಂದಿನ ಮತ್ತು ಮುಂದಿನ ಕುಂದುಕೊರತೆಗಳಿಂದ ಅಲ್ಲಾಹನು ನಿನ್ನನ್ನು ಸುರಕ್ಷಿತಗೊಳಿಸಿರುವನು ಎಂದು.) ಹೀಗಿರುವಾಗ ತಾವು ಏಕೆ ಅಳುತ್ತೀರಿ. ಪೈಗಂಬರ್(ಸ) ಹೇಳಿದರು: ಹೇ ಬಿಲಾಲ್, ನಾನೇನು ಅಲ್ಲಾಹನ ಕೃತಜ್ಞನಾದ ದಾಸನಾಗಬೇಡವೆ? (ತಫ್ಸೀರ್ ಕಶಾಫ್, ಇನ್ನ ಫೀ ಖಲಖಿಸ್ಸಮಾವಾತ್ ವಲ್ ಅರ್‌ಝಿ ವಚನದಡಿಯಲ್ಲಿ)

ಈ ಮಾತು ನೆನಪಿಡಲು ಯೋಗ್ಯವಾಗಿದೆ. ಹಝ್ರತ್ ಪೈಗಂಬರ್(ಸ) ದಿವ್ಯ ಸ್ವಪ್ನದಲ್ಲಿ ಹಝ್ರತ್ ಆಯಿಶಾ(ರ)ರೊಡನೆ ವಿವಾಹದ ಸಂಕೇತ ಪಡೆದಿದ್ದರು. ಯಾವ ರೀತಿ ಪ್ರವಾದಿ ಮೂಸಾರವರ(ಅ) ಮಾತೆ ದೈವಿಕ ಆಜ್ಞೆ ಪಡೆದು ತನ್ನ ಪುತ್ರನನ್ನು ಹೊಳೆಯಲ್ಲಿ ತೇಲಿ ಬಿಟ್ಟರು, ಯಾವ ರೀತಿ ಪ್ರವಾದಿ ಇಬ್ರಾಹೀಂ(ಅ) ತನ್ನ ಮಗ ಹಝ್ರತ್ ಇಸ್ಮಾಈಲ್‌ರನ್ನು ದೈವಿಕ ಸಂಕೇತ ಪಡೆದು ಜನ ವಸತಿ ಇಲ್ಲದಂತಹ ಮರುಭೂಮಿಯಲ್ಲಿ ಬಿಟ್ಟು ಬಂದಿದ್ದರು ಮತ್ತೆ ಅವರ ಕುತ್ತಿಗೆಯ ಮೇಲೆ ಚೂರಿ ಹಾಕಲು ತಯಾರಾಗಿದ್ದರು. (ಮುಸ್ಲಿಮ್ ಅಮುಸ್ಲಿಮರ ಒಂದು ದೊಡ್ಡ ಸಂಖ್ಯೆಯ ಅಭಿಪ್ರಾಯದಲ್ಲಿ ಚೂರಿ ಹಾಕಿದ್ದರು) ಆದರೆ ಯಾವ ಯಹೂದಿಯನಾಗಲಿ ಅಥವಾ ಕ್ರೈಸ್ತನಾಗಲಿ ಆ ಮಾತುಗಳ ಕುರಿತು ಆಕ್ಷೇಪಿಸಲಿಲ್ಲ. ಏಕೆ ಓರ್ವ ಹಾಲುಣ್ಣುವ ಮಗುವನ್ನು ಖಾಸಾ ತಾಯಿಯಾದವಳು ಹೊಳೆಯಲ್ಲಿ ತೇಲಿ ಬಿಟ್ಟಳು. ಅಥವಾ ಏಕೆ ಓರ್ವ ತಂದೆಯಾದವನು ತನ್ನ ಮಗನ ಕೊರಳಿನ ಮೇಲೆ ಚೂರಿ ಚಲಾಯಿಸಿದರು ಎಂದು. ಬದಲಾಗಿ ಇಡೀ ಲೋಕವು ತುಂಬಾ ಹೆಮ್ಮೆಯಿಂದ ಆ ಘಟನೆಗಳನ್ನು ವಿವರಿಸುತ್ತದೆ. ಮತ್ತು ಅವರ ಹೆಜ್ಜೆಗಳ ಮೇಲೆ ನಡೆಯಲು ಉಪದೇಶ ನೀಡುತ್ತದೆ. ಏಕೆಂದರೆ ಎಲ್ಲರಿಗೂ ತಿಳಿದಿದೆ ಅದು ದೈವಿಕ ಇಚ್ಛೆ ಆಗಿತ್ತು ಹೊರತು ಸ್ವಂತ ಇಚ್ಛೆ ಆಗಿರಲಿಲ್ಲ. ಅದೇ ರೀತಿ ಹಝ್ರತ್ ಆಯಿಶಾರೊಡನೆ ವಿವಾಹವು ಸಹ ದೈವಿಕ ಇಚ್ಛೆ ಪ್ರಕಾರವಾಗಿತ್ತು. ಹೊರತು ಪೈಗಂಬರರ ಸ್ವಇಚ್ಛೆ ಆಗಿರಲಿಲ್ಲ.

ಹಝ್ರತ್ ಆಯಿಶಾ(ರ) ಹಝ್ರತ್ ಪೈಗಂಬರರ(ಸ) ಪರಿಶುದ್ಧ ಜೀವನದ ಯಾವ ಭಾಗಗಳನ್ನು ಬಹಿರಂಗ ಪಡಿಸಿದ್ದಾರೋ ಅದು ಯಾವನೇ ಇನ್ನೊಬ್ಬ ಸಹಾಬಿಯಿಂದ ಸಾಧ್ಯವಿರಲಿಲ್ಲ. ಈ ಪವಿತ್ರ ವಿವಾಹಕ್ಕೆ ಅದು ಸಹ ಒಂದು ಕಾರಣವಾಗಿತ್ತು. ಈ ಸಣ್ಣ ವಯಸ್ಸಿನ ವಿವಾಹದ ಕಾರಣದಿಂದಾಗಿ ಹಝ್ರತ್ ಆಯಿಶಾರವರಿಗೆ ಸಣ್ಣ ವಯಸ್ಸಿನಲ್ಲೇ ಪೈಗಂಬರರೊಂದಿಗೆ ಹಗಲಿರುಳು ಹತ್ತು ವರ್ಷಗಳ ಕಾಲ ಕಳೆಯಲು ಸಂದರ್ಭ ಒದಗಿತು. ಸಣ್ಣ ವಯಸ್ಸಾದ ಕಾರಣ ನೆನಪಿನ ಶಕ್ತಿ ಪ್ರಬಲವಾಗಿತ್ತು. ಅಂದ ಹಾಗೆ ಪೈಗಂಬರರ ಜೀವನ ಚರಿತ್ರೆ ಕುರಿತು ಹಝ್ರತ್ ಆಯಿಶಾ(ರ) ಪೈಗಂಬರರ ನಿಧನದ 50 ವರ್ಷಗಳವರೆಗೆ ಅವರು ವಿವರಿಸಿದಂತೆ ಇನ್ನ್ಯಾರೂ ವಿವರಿಸಲು ಸಾಧ್ಯವಿರಲಿಲ್ಲ. ಮುಸ್ಲಿಮ್ ಸಮುದಾಯದ ಮೇಲೆ ಅದೊಂದು ಮಹೋನ್ನತವಾದ ಉಪಕಾರವಾಗಿದೆ. ಅದು ಅತುಲ್ಯವಾಗಿದೆ. ಆ 50 ವರ್ಷಗಳಲ್ಲಿ ಅವರು ಮುಸ್ಲಿಮ್ ಸಮುದಾಯವನ್ನು ಪೈಗಂಬರರ ಸುನ್ನತ್ (ಜೀವನ ಚರ್ಯೆ) ಮತ್ತು ಹದೀಸುಗಳಿಂದ ಪರಿಚಯಿಸಿಕೊಟ್ಟರು. ನಾವು ಇಂದಿನವರೆಗೆ ಅದರಿಂದ ಪ್ರಯೋಜನ ಪಡೆಯುತ್ತಿದ್ದೇವೆ. ಈ ಅನುಗ್ರಹ ಇನ್‌ಶಾಅಲ್ಲಾಹ್ ಅಂತ್ಯ ದಿನದವರೆಗೆ ಜಾರಿಯಲ್ಲಿರುವುದು. ಹಝ್ರತ್ ಅಬೂ ಹುರೈರ(ರ) ನಂತರ ಅತ್ಯಧಿಕ ವರದಿಗಳು ಹಝ್ರತ್ ಆಯಿಶಾರವರಿಂದಲೇ ವರದಿಯಾಗಿದೆ. ಅವರು ಕೇವಲ ಹದೀಸುಗಳ ಮೂಲಕ ಮುಸ್ಲಿಮ್ ಸಮುದಾಯದ ಮೇಲೆ ಉಪಕಾರ ಮಾಡಿದರು. ಮಾತ್ರವಲ್ಲ, ಧರ್ಮ ವ್ಯಾಖ್ಯಾನ ಮತ್ತು ವಿಶ್ಲೇಷಣೆ ಸಹ ನೀಡಿದರು. ಹಝ್ರತ್ ಪೈಗಂಬರ್(ಸ) ಒಂದು ಸಂದರ್ಭದಲ್ಲಿ ಹೇಳಿದ್ದರು:

ಅರ್ಧದಷ್ಟು ಧರ್ಮ ಶಿಕ್ಷಣ ಆಯಿಶಾರಿಂದ ಕಲಿಯಬಹುದು.

ಅದರ ಅರ್ಥ ಅವರಿಗೆ ಧರ್ಮದ ಅರ್ಧ ಭಾಗವಷ್ಟೆ ತಿಳಿದಿತ್ತು ಎಂದಲ್ಲ. ಅವರಂತು ತನ್ನ ನೇತಾರರ ಪ್ರತಿಯೊಂದು ವರ್ಣದಲ್ಲಿ ವರ್ಣರಂಜಿತೆಯಾಗಿದ್ದರು. ಹುಝೂರ್(ಸ)ರವರ ಈ ಹದೀಸಿನ ಅರ್ಥ ಹಝ್ರತ್ ಆಯಿಶಾ(ರ)ರವರ ಸ್ಥಾನಮಾನ ಒಬ್ಬ ಪ್ರವಾದಿಯ ಅರ್ಧ ಭಾಗದಷ್ಟಿತ್ತು. ಏಕೆಂದರೆ ತನ್ನ ಸಮುದಾಯಕ್ಕೆ ಧರ್ಮ ಶಿಕ್ಷಣ ನೀಡಬೇಕಾದುದು ಒಬ್ಬ ನಬಿಯು (ಪ್ರವಾದಿಯು) ಜವಾಬ್ದಾರಿಯಾಗಿರುತ್ತದೆ.

**ಎರಡನೆಯ ಆಕ್ಷೇಪ:**

ನೂಪುರ್ ಶರ್ಮರ ಎರಡನೇ ಆಕ್ಷೇಪವೇನೆಂದರೆ, ಮುಹಮ್ಮದ್ ಪೈಗಂಬರರು(ಸ) ಕುದುರೆಯ ಮೇಲೆ ಕುಳಿತು ಆಕಾಶಾರೋಹಣ ಮಾಡಿದ್ದರು.

ಈ ಆಕ್ಷೇಪದ ಉತ್ತರವಾಗಿ www.alislam.org ನಲ್ಲಿ ಪ್ರಕಟಗೊಂಡ ವಿಷಯದಿಂದ ಆಯ್ದ ಭಾಗಗಳನ್ನು ಪ್ರಸ್ತುತಪಡಿಸುತ್ತಿದ್ದೇವೆ. ಅದರಲ್ಲಿ ಸಾಬೀತುಮಾಡಲಾಗಿದೆ – ಮಿಅ್‌ರಾಜ್ ಮತ್ತು ಇಸ್ರಾಅ್ ಘಟನೆಗಳು ದೈಹಿಕವಾದುದಾಗಿರಲಿಲ್ಲ. ಬದಲು ಅತ್ಯಂತ ಉನ್ನತ ದರ್ಜೆಯ ಆಧ್ಯಾತ್ಮಿಕ ಅನುಭವಗಳಾಗಿದ್ದವು.

ಮಿಅ್‌ರಾಜ್ ಅಂದರೆ ಆಕಾಶಾರೋಹಣ ಘಟನೆ 5 ನಬವಿಯಲ್ಲಿ ಘಟಿಸಿದೆ. ಆಗ ಪೈಗಂಬರರು(ಸ) ಕಅ್‌ಬ ಮಸೀದಿಯಲ್ಲಿ ನಿದ್ರಿಸುತ್ತಿದ್ದರು. ಇಸ್ರಾಅ್ ಅಂದರೆ ಬೈತುಲ್ ಮುಖದ್ದಸ್‌ಗೆ ಹೋಗುವ ಘಟನೆ 11 ನಬವಿಯಲ್ಲಿ ಘಟಿಸಿದೆ. ಆಗ ಪೈಗಂಬರರು(ಸ) ತನ್ನ ಚಿಕ್ಕಪ್ಪನ ಮಗಳಾದ (ಸಹೋದರಿ) ಉಮ್ಮೆ ಹಾನೀ ಅವರ ಮನೆಯಲ್ಲಿ ನಿದ್ರಿಸುತ್ತಿದ್ದರು. ಎರಡೂ ಘಟನೆಗಳು ನಿದ್ರಾವಸ್ಥೆಯಲ್ಲಿದ್ದುದು, ಸಾಮ್ಯತೆ ಹೊಂದಿದ್ದರಿಂದ ಈ ಘಟನೆಗಳು ದೈಹಿಕವಾಗಿರಲಿಲ್ಲ. ಬದಲು ಆಧ್ಯಾತ್ಮಿಕವಾಗಿದ್ದವು ಎಂದು ಮನವರಿಕೆಯಾಗುತ್ತದೆ.

ಒಂದು ವೇಳೆ ಮಿಅ್‌ರಾಜ್ ದೈಹಿಕವಾಗಿರುತ್ತಿದ್ದರೆ ಪೈಗಂಬರರು(ಸ) ಅಲ್ಲಾಹನನ್ನು ದೈಹಿಕ ಕಣ್ಣುಗಳಿಂದಲೇ ಕಾಣುತ್ತಿದ್ದರು. ಆದರೆ ಅವರು ಏನೆಲ್ಲ ಕಂಡಿದ್ದಾರೆ ಅವು ಹೃದಯದಿಂದ ಕಂಡದ್ದು ಎಂದು ಖುರ್‌ಆನ್, ಹದೀಸುಗಳಲ್ಲಿ ಉಲ್ಲೇಖವಿದೆ.

**ಮಾ ಕದ್ಅಬಲ್ ಫುಅದು ಮಾ ರಾಅ್** – ತಾನು ಕಂಡದ್ದನ್ನು (ಪ್ರವಾದಿಯ) ಹೃದಯ ಸುಳ್ಳಾಗಿಸಲಿಲ್ಲ (53:12). **ವಮಾ ಜಅಲ್‌ನ ರ್‍ರುಯಾಲ್ಲತೀ ಅರೈನಾಕ ಇಲ್ಲಾ ಫಿತ್‌ನತಲಿನ್ನಾಸಿ** – ನಾವು ನಿನಗೆ ತೋರಿಸಿದ ದಿವ್ಯ ದರ್ಶನ ಜನರಿಗೆ ಒಂದು ಪರೀಕ್ಷೆಯಾಗಿತ್ತು....(17:61). ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಪೈಗಂಬರ್(ಸ) ಅವರು ಅಲ್ಲಾಹನನ್ನು ತನ್ನ ಹೃದಯದಿಂದ ಎರಡು ಸಲ ಕಂಡಿದ್ದಾರೆ. (ಮುಸ್ಲಿಂ – ಕಿತಾಬುಲ್ ಈಮಾನ್).

ಹಝ್ರತ್ ಆಯಿಶಾ(ರ) ನುಡಿಯುತ್ತಾರೆ: ಯಾರು ಮುಹಮ್ಮದ್(ಸ) ಅಲ್ಲಾಹನನ್ನು ಕಂಡರು ಎಂಬ ಮಾತನ್ನು ನಂಬಿದರೋ ಅವರು ಅಲ್ಲಾಹನ ಮೇಲೆ ಸುಳ್ಳನ್ನು ಹೇಳಿದಂತೆ..... ನೀನು ಆಲಿಸಲಿಲ್ಲವೇ ಅಲ್ಲಾಹನು ಹೇಳಿರುವನು, **"ಕಣ್ಣುಗಳು ಅವನೆಡೆ ತಲಪುವುದಿಲ್ಲ. ಬದಲು ಅವನು ಕಣ್ಣುಗಳವರೆಗೆ ತಲುಪುತ್ತಾನೆ."**

ಮಕ್ಕ ಅವಿಶ್ವಾಸಿಗಳು ಪೈಗಂಬರರ(ಸ) ಮುಂದೆ ಒಂದು ಬೇಡಿಕೆಯನ್ನು ಇಟ್ಟಿದ್ದರು. ನೀವು ಆಕಾಶಾರೋಹಣ ಮಾಡಿ ನಮಗಾಗಿ ಒಂದು ಗ್ರಂಥ ತನ್ನಿರಿ. ಆಗ ನಾವು ನಿಮ್ಮ ಮೇಲೆ ವಿಶ್ವಾಸ ಹೊಂದುವೆವು. ಅದಕ್ಕೆ ಉತ್ತರವಾಗಿ ಅಲ್ಲಾಹನು ಹೇಳಿದನು: ಅವರೊಡನೆ ಹೇಳು – ಅಲ್ಲಾಹನು ಇಂತಹ ವಿಚಾರಗಳಲ್ಲಿ ಪರಿಶುದ್ಧನು. ಅವನು ಯಾರನ್ನೂ ಶರೀರ ಸಮೇತ ಮೇಲೆ ಕೊಂಡುಹೋಗಲಿಲ್ಲ. ನಾನಾದರೋ ಮನುಷ್ಯನಾದ ಪ್ರವಾದಿಯಾಗಿದ್ದೇನೆ. (17:94)

ಸಹೀಹ್ ಬುಖಾರಿಯಲ್ಲಿ ವಿವರಿಸಿದ ಈ ಕೆಳಗಿನ ಹದೀಸ್ ಪೂರ್ಣ ಸ್ಪಷ್ಟ ರೂಪದಲ್ಲಿ ಸಾಬೀತುಪಡಿಸುತ್ತದೆ, ಇವೆಲ್ಲ ದೃಶ್ಯ ಆಧ್ಯಾತ್ಮಿಕ ರೀತಿಯದ್ದಾಗಿತ್ತು. ಈ ಹದೀಸಿನ ಪ್ರಾರಂಭದಲ್ಲಿ ಹೇಳಲಾಗಿದೆ – ಪೈಗಂಬರ್(ಸ) ಮಸ್ಜಿದ್ ಹರಾಮ್‌ನಲ್ಲಿ ಮಲಗಿದ್ದರು. ಅವರ ಕಣ್ಣುಗಳಂತು ಮುಚ್ಚಿಕೊಂಡಿದ್ದವು. ಆದರೆ ಹೃದಯವು ಜಾಗೃತ ಅವಸ್ಥೆಯಲ್ಲಿತ್ತು. ಮತ್ತೆ ಗಮನಿಸಬೇಕಾದ ವಿಷಯವೆಂದರೆ ಈ ಹದೀಸಿನ ಕೊನೆಯಲ್ಲಿ ಮತ್ತೆ ಹುಝೂರ್ ಎಚ್ಚೆತ್ತುಕೊಂಡರು ಎಂಬ ಪದಗಳಿವೆ. ಆದಾಗ್ಯೂ ಪೈಗಂಬರರು(ಸ) ಮಸ್ಜಿದ್ ಹರಾಮ್‌ನಲ್ಲಿಯೇ ಮಲಗಿದ್ದರು. ಆದುದರಿಂದ ಇದರಿಂದ ಸಾಬೀತಾಗುತ್ತದೆ ಇವೆಲ್ಲ ದೃಶ್ಯಗಳು ಹೃದಯವು ಅನುಭವಿಸಿದೆ, ಕಣ್ಣುಗಳಂತೂ ಮಲಗಿದ್ದವು.

"ಅವರು ಮಸ್ಜಿದ್ ಹರಾಮ್‌ನಲ್ಲಿ ಮಲಗಿದ್ದರು..... ಅವರ ಹೃದಯವು ನೋಡುತ್ತಿತ್ತು. ಮತ್ತು ಅವರ ಕಣ್ಣುಗಳು ನಿದ್ರಾವಸ್ಥೆಯಲ್ಲಿದ್ದವು. ಆದರೆ ಹೃದಯ ಮಾತ್ರ ನಿದ್ರೆಯಲ್ಲಿರಲಿಲ್ಲ..... ಅವರು ಎಚ್ಚರಗೊಂಡಾಗ ಮಸ್ಜಿದ್ ಹರಾಮ್‌ನಲ್ಲಿಯೇ ಇದ್ದರು."

ಹಝ್ರತ್ ಆಯಿಶಾ ಸಿದ್ದೀಖ(ರ) ಅಲ್ಲಾಹನ ಪ್ರಮಾಣಮಾಡಿ ಹೇಳುತ್ತಾರೆ: ಮಿಅ್‌ರಾಜ್‌ನಲ್ಲಿ ಹುಝೂರರ ದೇಹ ಅನುಪಸ್ಥಿತವಾಗಿರಲಿಲ್ಲ. ಬದಲು ಆತ್ಮೀಯ ನೆಲೆಯಲ್ಲಿ ಮಿಅ್‌ರಾಜ್ ಆಗಿತ್ತು.

ಆದರಣೀಯ ಓದುಗರೇ, ಪ್ರಾರಂಭ ಕಾಲದಿಂದಲೇ ಇಸ್ಲಾಂ, ಪೈಗಂಬರರ ಮೇಲೆ ಅತ್ಯಂತ ಕೀಳು ರೀತಿಯ ಅಶ್ಲೀಲ ಮತ್ತು ಸುಳ್ಳು ಆರೋಪಗಳನ್ನು ಮಾಡುತ್ತಲೇ ಬಂದಿದ್ದಾರೆ. ಆದಾಗ್ಯೂ ನಾವು ಇಸ್ಲಾಂ ಮತ್ತು ಪ್ರವಾದಿಯ ಗೌರವವನ್ನು ಎಲ್ಲ ಸಮಯದಲ್ಲೂ ರಕ್ಷಿಸಲು ಸಿದ್ಧರಾಗಿರಬೇಕು. ಮತ್ತು ಅವರ ವಿರುದ್ಧ ಆಗುವ ಎಲ್ಲ ರೀತಿಯ ಆಕ್ರಮಣಗಳ ಮುಂದೆ ಸೀಸ ಕರಗಿಸಿದ ಗೋಡೆಯಂತೆ ನಿಂತುಕೊಳ್ಳಬೇಕು. ಇಸ್ಲಾಮಿನ ಶಾಂತಿಪೂರ್ಣ ಸಂದೇಶ ಲೋಕದ ಮೂಲೆ ಮೂಲೆಯವರೆಗೆ ತಲುಪಿಸಬೇಕು. ಆರೋಪಗಳ ಬೀಜ ಬೆಳೆಯುವ ಮೊದಲೇ ಕೊನೆಗಾಣಬೇಕು. ಅಲ್ಲಾಹನು ನಮಗೆ ನೆರವು ನೀಡಲಿ – ಆಮೀನ್.

**ಮೂಲ ಉರ್ದು: ಮುಹಮ್ಮದ್ ಸುಲ್ತಾನ್ ಝಫರ್, ಕೆನಡ.**

**ಅನುವಾದ: ಮುಹಮ್ಮದ್ ಇಸ್ಮಾಯಿಲ್, ದೇವದುರ್ಗ, ಬೆಂಗಳೂರು.**

**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ**

ಪತ್ರಿಕಾ ಪ್ರಕಟಣೆ

# ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಧರ್ಮನಿಂದನೆ ಮತ್ತು ಪ್ರಚೋದನಕಾರಿ ಹೇಳಿಕೆಗಳನ್ನು ಅಹ್ಮದಿಯಾ ಮುಸ್ಲಿಂ ಸಮುದಾಯವು ಬಲವಾಗಿ ಖಂಡಿಸುತ್ತದೆ.

## ಇಂತಹ ಸಂದರ್ಭಗಳಲ್ಲಿ ಮುಸ್ಲಿಮರ ಪ್ರತಿಕ್ರಿಯೆಯು ಯಾವಾಗಲೂ ಪವಿತ್ರ ಪ್ರವಾದಿ(ಸ) ಕಲಿಸಿದ ಉನ್ನತ ನೈತಿಕ ಬೋಧನೆಗಳನ್ನು ಪ್ರತಿಬಿಂಬಿಸುವ ರೀತಿಯಲ್ಲಿರಬೇಕು

ಇಸ್ಲಾಮ್ ಧರ್ಮದ ಪವಿತ್ರ ಪ್ರವಾದಿಯಾದ ಹಝ್ರತ್ ಮುಹಮ್ಮದ್‌ರ(ಸ) ಬಗ್ಗೆ ಅತ್ಯಂತ ದ್ವೇಷಪೂರಿತ ಮತ್ತು ನಿಂದನೀಯ ಟೀಕೆಗಳನ್ನು ಮಾಡುವುದು ನಿಜಕ್ಕೂ ಆಕ್ರಮಣಕಾರಿ ಮತ್ತು ಮುಸ್ಲಿಮರ ಭಾವನೆಗಳಿಗೆ ನೋವುಂಟು ಮಾಡುತ್ತದೆ. ವಾಸ್ತವದಲ್ಲಿ ಯಾವುದೇ ಧಾರ್ಮಿಕ ನಾಯಕನ ಬಗ್ಗೆ ಇಂತಹ ಪ್ರಚೋದನಕಾರಿ ಹೇಳಿಕೆಯು ರಾಷ್ಟ್ರದ ಶಾಂತಿ ಮತ್ತು ನೆಮ್ಮದಿಗೆ ಧಕ್ಕೆ ತರಬಹುದು. ಈ ಕಾರಣಕ್ಕಾಗಿ, ಎಲ್ಲ ಧರ್ಮಗಳ ಪವಿತ್ರ ವ್ಯಕ್ತಿಗಳನ್ನು ಆದರಿಸಲು ಮತ್ತು ಎಲ್ಲ ಧರ್ಮಗಳ ಜನರ ಭಾವನೆಗಳನ್ನು ಗೌರವಿಸಲು ಇಸ್ಲಾಮ್ ಧರ್ಮದ ಪವಿತ್ರ ಪ್ರವಾದಿಯಾದ ಹಝ್ರತ್ ಮುಹಮ್ಮದ್(ಸ) ತಮ್ಮ ಅನುಯಾಯಿಗಳಿಗೆ ಕಲಿಸಿದ್ದರು. ವಿವಿಧ ಧರ್ಮಗಳ ಜನರು ಒಂದೇ ಸಮಾಜದಲ್ಲಿ ಬದುಕುವ ಭಾರತದಂತಹ ದೇಶದಲ್ಲಿ ಶಾಂತಿಯನ್ನು ಕಾಪಾಡಿಕೊಳ್ಳಲಿಕ್ಕಾಗಿ ಪರಸ್ಪರರ ಪವಿತ್ರ ವ್ಯಕ್ತಿಗಳು, ಪೂಜಾ ಸ್ಥಳಗಳು ಮತ್ತು ಧಾರ್ಮಿಕ ಭಾವನೆಗಳನ್ನು ಗೌರವಿಸುವುದು ಬಹಳ ಮುಖ್ಯ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧ ಇತ್ತೀಚಿನ ಧರ್ಮನಿಂದನೆಯ ಹೇಳಿಕೆಗಳಿಂದ ನಮ್ಮ ಹೃದಯವು ತುಂಬಾ ನೋಯಿಸಿದೆ. ಆದಾಗ್ಯೂ, ಸರ್ವಶಕ್ತನಾದ ಅಲ್ಲಾಹನ ಸನ್ನಿಧಿಯಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರಿಗಾಗಿ(ಸ) ಅನುಗ್ರಹಗಳನ್ನು ಕೋರಿ ಪ್ರಾರ್ಥಿಸುವುದು, ಅವರ ಪವಿತ್ರ ಜೀವನದ ಬಗ್ಗೆ ಜನರಿಗೆ ಶಿಕ್ಷಣ ನೀಡಲು ಪ್ರಯತ್ನಿಸುವುದು ಮತ್ತು ಅವರ ಪರಿಶುದ್ಧ ಜೀವಿತದ ಬಗ್ಗೆ ಜನರು ಹೊಂದಿರುವ ವಿವಿಧ ತಪ್ಪು ಕಲ್ಪನೆಗಳನ್ನು ನಿವಾರಿಸುವುದಾಗಿರುತ್ತದೆ ಅಂತಹ ಸಂದರ್ಭಗಳಲ್ಲಿ ಅಹ್ಮದಿಯಾ ಮುಸ್ಲಿಂ ಸಮುದಾಯದ ಪ್ರತಿಕ್ರಿಯೆ.

ಹದೀಸ್ ಗ್ರಂಥಗಳ ಮತ್ತು ಇತಿಹಾಸದ ಪುಸ್ತಕಗಳ ಪ್ರಕಾರ, ಹಝ್ರತ್ ಆಯಿಶಾರೊಂದಿಗೆ(ರ) ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಿಕಾಹ್ (ವಿವಾಹದ ಔಪಚಾರಿಕ ಒಪ್ಪಂದ) ಸಮಯದಲ್ಲಿ ಹಝ್ರತ್ ಆಯಿಶಾರ(ರ) ವಯಸ್ಸು ಒಂಬತ್ತು ವರ್ಷವಾಗಿತ್ತು ಮತ್ತು ಆ ವಿವಾಹವು ನೆರವೇರಿದಾಗ ಅವರ ವಯಸ್ಸು ಸುಮಾರು 12–14 (ಹನ್ನೆರಡರಿಂದ ಹದಿನಾಲ್ಕು) ವರ್ಷವಾಗಿತ್ತು. ಇದು 1400 ವರ್ಷಗಳ ಹಿಂದೆ ನಡೆದ ಘಟನೆಯಾಗಿದೆ. ಆ ಕಾಲದಲ್ಲಿ ಹುಡುಗಿಯರು ಚಿಕ್ಕ ವಯಸ್ಸಿನಲ್ಲೇ ಮದುವೆಯಾಗುತ್ತಿದ್ದರು. ಹಾಗೆಯೇ ಆ ಕಾಲದಲ್ಲಿ ಹುಡುಗ ಹಾಗೂ ಹುಡುಗಿಯ ವಯಸ್ಸಿನಲ್ಲಿ ಬಹಳ ಅಂತರವಿರುವ ವಿವಾಹವೂ ರೂಢಿಯಲ್ಲಿತ್ತು.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತದ ಯಾವುದೇ ಒಂದು ಘಟನೆಯ ಬಗ್ಗೆ ಕೂಡ ಆಧಾರ ರಹಿತ ಮತ್ತು ನಿಂದನೀಯ ಟೀಕೆ ಮಾಡುವುದು ಅನ್ಯಾಯವಾಗಿದೆ. ಬದಲಾಗಿ, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪವಿತ್ರ ಜೀವನದ ಅಧ್ಯಯನದಿಂದ ಸಾಬೀತಾಗುವುದೇನೆಂದರೆ, ಅವರು ಉನ್ನತ ನೈತಿಕ ಶ್ರೇಷ್ಠತೆಗಳನ್ನು ಹೊಂದಿದ್ದರು ಮತ್ತು ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದಂತೆ ಇಂದಿನ ಅನೇಕ ಪ್ರಗತಿಪರ ಸಮಾಜಗಳು ಕೂಡ ಒದಗಿಸಲು ವಿಫಲವಾಗಿರುವಂತಹ ಶ್ರೇಷ್ಠ ತತ್ವಗಳನ್ನು ಅಂದಿನ ಕಾಲದಲ್ಲಿ ಅವರು ಬೋಧಿಸಿದ್ದರು.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಜನರಿಗೆ ಅಲ್ಲಾಹನ ಸಂದೇಶವನ್ನು ಪ್ರಚಾರ ಮಾಡಲು ಪ್ರಾರಂಭಿಸಿದಾಗ, ಮಕ್ಕಾದ ಮುಖಂಡರು ಅವರನ್ನು ಭೇಟಿಯಾದರು ಹಾಗೂ ಹಲವಾರು ಲೌಕಿಕ ಪ್ರಲೋಭನಗಳ ಮೂಲಕ ಪೈಗಂಬರರ(ಸ) ದೌತ್ಯವನ್ನು ತಡೆಯಲು ಪ್ರಯತ್ನಿಸಿದರು. ಮುಖಂಡರು ಮುಂದಿರಿಸಿದ ಕೊಡುಗೆಗಳಲ್ಲಿ ಒಂದೇನೆಂದರೆ, ಅವರು ಬಯಸಿದರೆ, ಅವರು ಮಕ್ಕಾದಲ್ಲಿರುವ ಅತ್ಯಂತ ಸುಂದರ ಹುಡುಗಿಯನ್ನು ವಿವಾಹವಾಗಬಹುದು ಎಂದಾಗಿತ್ತು. ಆದರೆ ಪೈಗಂಬರರು(ಸ) ಮುಖಂಡರ ಕೊಡುಗೆಗಳನ್ನು ತಿರಸ್ಕರಿಸಿದರು ಮತ್ತು ತನ್ನ ಆಗಮನದ ಏಕೈಕ ಉದ್ದೇಶವು ಅಲ್ಲಾಹನ ಏಕತೆಯನ್ನು ಸ್ಥಾಪಿಸುವುದಾಗಿದೆ ಮತ್ತು ಅದನ್ನು ಯಾವುದೇ ರೀತಿಯಲ್ಲಿ ನಿಲ್ಲಿಸಲು ಸಾಧ್ಯವಲ್ಲ ಎಂದು ಹೇಳಿದರು.

ಹಝ್ರತ್ ಪೈಗಂಬರರು(ಸ) 25 ವರ್ಷ ವಯಸ್ಸಿನವರಾಗಿದ್ದಾಗ, ಆ ಸಮಯದಲ್ಲಿ 40 ವರ್ಷ ಪ್ರಾಯದ ಹಝ್ರತ್ ಖದೀಜಾರನ್ನು(ರ) ವಿವಾಹವಾದರು. ಹಝ್ರತ್ ಪೈಗಂಬರ್(ಸ) ಖದೀಜರೊಂದಿಗೆ(ರ) 25 ವರ್ಷಗಳ ಬಹಳ ಸಂತೋಷಕರ ಮತ್ತು ಪ್ರೀತಿಯ ವೈವಾಹಿಕ ಸಂಬಂಧವನ್ನು ಹೊಂದಿದ್ದರು. ಇದಲ್ಲದೆ, ಪೈಗಂಬರರು(ಸ) ಬೇರೆಯೂ ಮದುವೆಗಳನ್ನು ಮಾಡಿದ್ದರು. ಅವರಲ್ಲಿ ಹೆಚ್ಚಿನ ಪತ್ನಿಯರು ವಿಧವೆಯರು ಅಥವಾ ವೃದ್ಧೆಯರಾಗಿದ್ದರು.

ಈ ಘಟನೆಗಳು ಮತ್ತು ಸಂಗತಿಗಳಿಂದ ಹಝ್ರತ್ ಪೈಗಂಬರರ(ಸ) ವಿವಾಹಗಳ ಮೂಲ ಉದ್ದೇಶವು ಪ್ರಾಪಂಚಿಕ ಆಸೆಗಳನ್ನು ಈಡೇರಿಸುವುದಲ್ಲ ಎಂದು ಸ್ಪಷ್ಟವಾಗಿ ಸಾಬೀತಾಗುತ್ತದೆ. ಬದಲಿಗೆ, ಆ ವಿವಾಹಗಳು ಸಮಾಜದ ನೈತಿಕ ತರಬೇತಿಯ ಉದ್ದೇಶವನ್ನು ಪೂರೈಸಿದುವು ಮತ್ತು ದುಃಖಿತರಿಗೆ ಸಾಂತ್ವನವನ್ನು ನೀಡಿದುವು.

ಹಝ್ರತ್ ಪೈಗಂಬರರ(ಸ) ಜೀವನವು ಅತ್ಯಂತ ಪರಿಶುದ್ಧ ಮತ್ತು ಉನ್ನತ ಮಟ್ಟದ್ದಾಗಿತ್ತು. ಆ ಶ್ರೇಷ್ಠ ಪ್ರವಾದಿಯ ಜೀವಿತದ ಒಂದು ಕ್ಷಣ ಕೂಡ ಆಕ್ಷೇಪಣೆಗೆ ಎಡೆ ನೀಡುವಂಥದ್ದಲ್ಲ.

ಭಾರತದಲ್ಲಿ ವಾಸಿಸುತ್ತಿರುವ ಪ್ರತಿಯೊಬ್ಬ ನಾಗರಿಕನು ಪರಸ್ಪರರ ಧಾರ್ಮಿಕ ಗುರುಗಳನ್ನು ಗೌರವಿಸುವಂತಾಗಲಿ, ಹಾಗೆ ನಮ್ಮ ದೇಶ ಶಾಂತಿಧಾಮವಾಗಲಿ ಎಂದು ಸರ್ವಶಕ್ತನಾದ ಅಲ್ಲಾಹನಲ್ಲಿ ನಾವು ಪ್ರಾರ್ಥಿಸುತ್ತೇವೆ.

**ಅಹ್ಮದಿಯಾ ಮುಸ್ಲಿಮ್ ಜಮಾಅತ್, ಖಾದಿಯಾನ್**

## ಅಹ್ಮದಿಯಾ ಜಮಾಅತಿನ ಪ್ರಗತಿ

♦ ಜಗತ್ತಿನಾದ್ಯಂತ 355 ಹೊಸ ಮಸೀದಿಗಳು ಸ್ಥಾಪಿಸಲ್ಪಟ್ಟಿವೆ. ♦ ಹೊಸದಾಗಿ 123 ಮಿಶನ್ ಹೌಸಸ್ ಸ್ಥಾಪಿಸಲ್ಪಟ್ಟಿವೆ.

♦ 108 ದೇಶಗಳ ಅಹ್ಮದಿಯರು 68186 ಗಂಟೆಗಳ ವಕಾರೆ ಅಮಲ್ (ಶ್ರಮದಾನ)ನಲ್ಲಿ ಭಾಗವಹಿಸಿ 2,959,000 ಪೌಂಡ್ ಉಳಿತಾಯ ಮಾಡಿದ್ದಾರೆ.

♦ 95 ದೇಶಗಳಲ್ಲಿ 46 ಭಾಷೆಗಳಲ್ಲಿ 505 ಪುಸ್ತಕಗಳ 67,19,372 ಪ್ರತಿಗಳು ಪ್ರಕಟಣೆಗೊಂಡಿವೆ.

♦ 102 ದೇಶಗಳಲ್ಲಿ 76,11,000 ಕರಪತ್ರಗಳು 1,16,90,000 ಮಂದಿಗೆ ಅಹ್ಮದಿಯಾ ಸಂದೇಶವನ್ನು ತಲಪಿಸಿದೆ.

♦ ಜಗತ್ತಿನಾದ್ಯಂತ 8,29,000 ಮಂದಿಗೆ 4,75,100 ಉಚಿತ ಸಾಹಿತ್ಯಗಳನ್ನು ಹಂಚಲಾಗಿದೆ.

♦ 10,861 ಎಕ್ಸಿಬಿಶನ್ ಮತ್ತು ಪುಸ್ತಕ ಮಳಿಗೆಗಳು 10,42,400 ಮಂದಿಗೆ ಸಂದೇಶ ತಲಪಿಸಿದೆ.

♦ 24 ದೇಶಗಳಲ್ಲಿ ಅಹ್ಮದಿಯಾ ಜಮಾಅತ್ ಮತ್ತು ಉಪ ಘಟಕಗಳು 120 ವಾರ್ತಾ ಪತ್ರಿಕೆ ಮತ್ತು ನಿಯತಕಾಲಿಕಗಳನ್ನು ಪ್ರಕಟಿಸಿವೆ.

♦ **M.T.A. (Muslim Television Ahmadiyya)** 8 ಚಾನೆಲ್‌ಗಳ ಮೂಲಕ ದಿನಂಪ್ರತಿ 24 ಗಂಟೆಗಳ ಕಾಲ 23 ಭಾಷೆಗಳಲ್ಲಿ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿದೆ. ಅದರಲ್ಲಿ 16 ವಿಭಾಗಗಳ 503 ಸ್ವಯಂ ಸೇವಕರು ಕಾರ್ಯ ನಿರತರಾಗಿದ್ದಾರೆ.

♦ ವಕ್ಫೆನೌ ಯೋಜನೆಯಲ್ಲಿ 78000 ಸದಸ್ಯರಿದ್ದಾರೆ. (45832 ಗಂಡು ಮತ್ತು 32168 ಹೆಣ್ಣು). ಈ ವರ್ಷದ ಸೇರ್ಪಡೆ 3,519 ಮಂದಿ.

♦ ನುಸ್ರತ್ ಜಹಾನ್ ಸ್ಕೀಮ್ ಅಧೀನದಲ್ಲಿ 12 ದೇಶಗಳಲ್ಲಿ 37 ಆಸ್ಪತ್ರೆಗಳು ಸ್ಥಾಪಿಸಲ್ಪಟ್ಟಿವೆ.

♦ ಜಗತ್ತಿನಾದ್ಯಂತ ಅಹ್ಮದಿಯಾ ಜಮಾಅತ್ 25 ರೇಡಿಯೋ ಸ್ಟೇಶನ್‌ಗಳನ್ನು ನಡೆಸುತ್ತಿದೆ. ಅವು 340,000,000 ಮಂದಿಗೆ ತಲಪುತ್ತಿವೆ.

♦ ನುಸ್ರತ್ ಜಹಾನ್ ಸ್ಕೀಮ್ 11 ದೇಶಗಳಲ್ಲಿ 615 ಪ್ರೈಮರಿ ಸ್ಕೂಲ್‌ಗಳನ್ನೂ 80 ಸೆಕೆಂಡರಿ ಸ್ಕೂಲ್‌ಗಳನ್ನೂ ಸ್ಥಾಪಿಸಿವೆ.

♦ ಈ ವರ್ಷ 109 ದೇಶಗಳ 160 ಸಮುದಾಯಗಳ 1,76,836 ಮಂದಿ ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ.

♦ ಪ್ರೆಸ್ ಮತ್ತು ಮೀಡಿಯ ಮೂಲಕ 291 ಹೊಸ ಲೇಖನಗಳು ವಾರ್ತಾಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಅದು 30 ಮಿಲಿಯನ್ ಜನರಿಗೆ ತಲಪಿದೆ.

♦ ರಾಖೀ ಪ್ರೆಸ್ ಮೂಲಕ 229000 ಪುಸ್ತಕಗಳು ಮುದ್ರಿಸಲ್ಪಟ್ಟಿವೆ.

♦ ಪವಿತ್ರ ಖುರ್‌ಆನ್ ಸ್ಪಾನಿಶ್ ಭಾಷೆಗೆ ಭಾಷಾಂತರಿಸಲ್ಪಟ್ಟಿದೆ.

♦ ಹೊಸ ಪ್ರಚಾರ ಕೇಂದ್ರಗಳು ಸ್ಥಾಪಿಸಲ್ಪಟ್ಟಿರುವ 4 ಮುಖ್ಯ ದೇಶಗಳು: ಸಿರ್‍ರಾಲಿಯೋನ್, ತಾಂಜಾನಿಯಾ, ಬೆನಿನ್ ಮತ್ತು ಘಾನ.

♦ ಈ ವರ್ಷ ರೂಹಾನೀ ಖಝಾಇನ್ ಸಂಪುಟಗಳ ಹಿಂದಿ ಭಾಷಾಂತರ ಪೂರ್ಣಗೊಂಡಿದೆ.

(ಲಂಡನಿನಲ್ಲಿ ನಡೆದ ಯು.ಕೆ. ಜಲ್ಸಾ ಸಾಲಾನದ ದ್ವಿತೀಯ ದಿನ 6–8–2022ರಂದು ಅಹ್ಮದಿಯಾ ಜಮಾಅತಿನ ಖಲೀಫರು ಮಾಡಿದ ಭಾಷಣದಿಂದ ಸಂಗ್ರಹ)

# ನೀನು ಮಾಡು – ಮಾಡಬೇಡ

♦ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್[ರ]

## 5 – ಸ್ವಭಾವ ಗುಣಗಳು

184. ನೀನು ನೆನಪಿಡು, ಕಷ್ಟವನ್ನು ಅನುಭವಿಸದೆ ನಿನ್ನ ಸ್ವಭಾವಕ್ಕೆ ಸಂಬಂಧಿಸಿದ ಮತ್ತು ಆಧ್ಯಾತ್ಮಿಕತೆಗೆ ಸಂಬಂಧಿಸಿದ ತರಬೇತಿ ಆಗಲಾರದು.

185. ನೀನು ಯಾರ ವಿರುದ್ಧ ಕೂಡ ನಿನ್ನ ಹೆಸರು ನೀಡದೆ ದೂರು ನೀಡಬೇಡ.

186. ಯಾರಾದರೂ ಅಧೋವಾಯು ಬಿಟ್ಟರೆ ನೀನು ನಗದಿರು.

187. ನೀನು ಹಗಲು ಮಾಡಿದ ಕೆಲಸದ ಬಗ್ಗೆ ರಾತ್ರಿ ನಿದ್ರಿಸುವ ಮೊದಲು ಪರಿಶೀಲಿಸು.

188. ನೀನು ನಿನ್ನ ಮಕ್ಕಳು ಅನ್ಯರ ತೋಟದಿಂದ ಹಣ್ಣು ಕೊಯ್ಯಲು ಬಿಡಬೇಡ. ಇದು ಕಳ್ಳತನವಾಗಿದೆ.

189. ನೀನು ಅನ್ಯರ ಪುಸ್ತಕ ಅಥವಾ ಕಾಗದಗಳನ್ನು ಅನುಮತಿ ಇಲ್ಲದೆ ತೆಗೆದುಕೊಳ್ಳಬಾರದು. ಇದು ಸಹ ಕಳ್ಳತನವಾಗಿದೆ.

190. ಹೇ ವಿದ್ಯಾರ್ಥಿ, ನೀನು ಶಾಲೆಯ ಸಾಮಗ್ರಿ ಮನೆಗೆ ತರಬೇಡ. ಇದು ಕಳ್ಳತನವಾಗಿದೆ.

191. ನೀನು ನಿನ್ನ ತಂದೆ ತಾಯಿಯ ಅನುಮತಿ ಇಲ್ಲದೆ ಮನೆಯ ವಸ್ತುಗಳನ್ನು ವಶಪಡಿಸಿಕೊಳ್ಳಬೇಡ.

192. ನೀನು ಪರೀಕ್ಷೆಗಳಲ್ಲಿ ನಕಲು ಮಾಡಬೇಡ. ಇದು ಸಹ ಕಳ್ಳತನವಾಗಿದೆ.

193. ನೀನು ಅನ್ಯ ಧರ್ಮದವರ ಮನಸ್ಸಿಗೆ ನೋವುಂಟುಮಾಡಬೇಡ.

194. ನೀನು ನಿನ್ನ ಆಹಾರ, ಪೋಷಾಕು, ಜೀವಿತ ರೀತಿ ಇವುಗಳಲ್ಲಿ ಮಿತಿಮೀರಬೇಡ. ಆದರೆ ಜಿಪುಣನಾಗಲೂ ಬೇಡ.

195. ನೀನು ಪತ್ತೇದಾರಿಕೆ ಮಾಡಬೇಡ.

196. ನೀನು ಯಾಚಿಸುವುದರಿಂದ ಸಾಧ್ಯವಾದಷ್ಟರ ಮಟ್ಟಿಗೆ ಬಿಟ್ಟು ನಿಲ್ಲು.

197. ನೀನು ಅತಿಥಿ ಸತ್ಕಾರದಲ್ಲಿ ಮಿತಿಮೀರಿ ವರ್ತಿಸಬೇಡ. ಇದು ಸಹ ಡಂಬಾಚಾರವಾಗಿದೆ.

198. ನೀನು ನಿನಗೆ ಕಂಡ ಕನಸು ಅಥವಾ ದರ್ಶನದ ಬಗ್ಗೆ ಅಹಂಕಾರಗೊಳ್ಳಬೇಡ.

199. ನೀನು ನಿನ್ನ ಪ್ರಾರ್ಥನೆ ಸ್ವೀಕರಿಸಲ್ಪಟ್ಟ ಬಗ್ಗೆ ಅಹಂಕಾರದಿಂದ ವರ್ತಿಸಬೇಡ.

200. ಹಿಂದಿನ ಹಿರಿಯರು ತಪ್ಪು ಮಾಡಿದ್ದರೆ ನೀನು ಅವರನ್ನು ಅನುಸರಿಸಬೇಡ. ಆದರೆ ಅವರನ್ನು ದೂರಲೂಬೇಡ.

201. ನೀನು ನಿನ್ನ ಸಹೋದರರಿಗೂ ಅಧೀನವಿರುವವರಿಗೂ ಸಮಾಧಾನ ನೀಡುವವನಾಗು. ಅವರನ್ನು ನಿರಾಸೆಯಿಂದ ರಕ್ಷಿಸು.

202. ಹೇ ಹುಡುಗ, ನಿನಗೆ ಯಾರಾದರೂ ಕೊಳಕು ಅಥವಾ ಪಾಪದ ಬಗ್ಗೆ ಕಲಿಸಿದರೆ ನೀನು ಅದನ್ನು ವಿರೋಧಿಸು.

203. ನೀನು ಯಾವುದೇ ಧರ್ಮದ ಮಹಾಪುರುಷರನ್ನು ನಿಂದಿಸಬೇಡ.

204. ನೀನು ನಿನ್ನ ಸಂಬಂಧಕರೊಂದಿಗೆ ಉತ್ತಮವಾಗಿ ವರ್ತಿಸು.

205. ನೀನು ಪ್ರಾಣಿಗಳನ್ನು ಕೂಡ ನಿರ್ದಯೆಯಿಂದ ಹಿಂಸಿಸಬೇಡ.

206. ನೀನು ಯಾರನ್ನಾದರೂ ವಿಪತ್ತಿಗೆ ಗುರಿಯಾದುದಾಗಿ ಕಂಡರೆ ನೀನು ಅಲ್ಲಾಹನಿಗೆ ಸ್ತುತಿ ಅರ್ಪಿಸು– ನೀನು ಅದರಿಂದ ರಕ್ಷಿಸಲ್ಪಟ್ಟದ್ದಕ್ಕಾಗಿ.

207. ನೀನು ಯಾವುದಾದರೂ ರಹಸ್ಯ ತಿಳಿದರೆ ಅದನ್ನು ಜನರ ಮಧ್ಯೆ ಹೇಳುತ್ತಾ ತಿರುಗಬೇಡ.

208. ನೀನು ಯಾರದಾದರೂ ತಪ್ಪನ್ನು ಕ್ಷಮಿಸಿದರೆ ಪುನಃ ಅದರ ಬಗ್ಗೆ ಪ್ರಸ್ತಾಪಿಸಬೇಡ.

209. ನೀನು ಜನರ ನ್ಯೂನತೆಗಳನ್ನೂ ಬಲಹೀನತೆಗಳನ್ನೂ ತಿಳಿದು ಸಂತೋಷಪಡಬೇಡ.

210. ನೀನು ಒಳಿತನ್ನು ಜಾಗರೂಕತೆಯಿಂದ ಮಾಡು.

211. ನೀನು ಕೀಳುತನವನ್ನು ಪ್ರದರ್ಶಿಸಬೇಡ.

212. ನೀನು ಅಂಗವಿಕಲರಿಗೆ ಸಹಾಯ ಮಾಡು.

213. ನೀನು ನಿನ್ನ ಸಹಜ ಗುಣಗಳನ್ನು ಬುದ್ಧಿಗೆ ಅಧೀನಗೊಳಿಸಿದರೆ ನೀನು ನೈತಿಕ ಗುಣ ಹೊಂದಿದವನಾಗುವೆ.

214. ನೀನು ನಿನ್ನ ಬುದ್ಧಿಯನ್ನು ಧರ್ಮಕ್ಕೆ ಅಧೀನಗೊಳಿಸಿದರೆ ನೀನು ಅಲ್ಲಾಹನ ಸಾಮೀಪ್ಯ ಗಳಿಸಿದವನಾಗುವೆ.

215. ತಪ್ಪು ಮಾಡಿದವರ ತಪ್ಪುಗಳನ್ನು ಕ್ಷಮಿಸಲು ದೊರೆತ ಸಂದರ್ಭವನ್ನು ನೀನು ಕೈಬಿಡಬೇಡ.

216. ನೀನು ಹಿರಿಯರನ್ನು ಗೌರವಿಸು.

217. ನೀನು ಕಿರಿಯರಿಗೆ ವಾತ್ಸಲ್ಯ ತೋರಿಸು.

218. ನೀನು ನಿನ್ನ ನಾಲಗೆಯನ್ನು ಹತೋಟಿಯಲ್ಲಿಡು.

219. ನೀನು ಸಾಧ್ಯವಾಗುವಷ್ಟರ ಮಟ್ಟಿಗೆ ನಿನ್ನ ಕೆಲಸವನ್ನು ನೀನೇ ಮಾಡು.

220. ನಿನ್ನ ಸಂಪತ್ತಿನಲ್ಲಿ ಭಿಕ್ಷೆ ಬೇಡುವವರಿಗೆ ಮಾತ್ರವಲ್ಲ ಮೌನವಾಗಿರುವ ಬಡವರಿಗೂ ಮಾತು ಬಾರದ ಮೃಗಗಳಿಗೂ ಹಕ್ಕುಗಳಿವೆ.

221. ನೀನು ಅಲ್ಲಾಹನ ಸ್ವಭಾವಗುಣಗಳನ್ನು ನಿನ್ನಲ್ಲಿ ಅಳವಡಿಸು.

222. ಕೇವಲ ಬಾಹ್ಯ ರೂಪದ ನಡೆವಳಿಕೆ ಉತ್ತಮ ಸ್ವಭಾವಗುಣವಲ್ಲ. ನೀನು ನಿಜವಾದ ಸ್ವಭಾವಗುಣಗಳನ್ನು ಬೆಳೆಸಿಕೋ. ಅದು ಜನರಿಗೆ ಹಿತಕರವೂ ಅಲ್ಲಾಹನ ಸಂಪ್ರೀತಿಗೆ ಪಾತ್ರವಾಗುವುದೂ ಆಗಿರಬೇಕು.

223. ನಿನ್ನ ನ್ಯೂನತೆಗಳನ್ನು ನೀನು ಸ್ವತಃ ಸುಧಾರಣೆ ಮಾಡು; ಅನ್ಯರು ನಿನ್ನ ನ್ಯೂನತೆಗಳ ಬಗ್ಗೆ ಹೇಳದಿರಲಿ.

224. ನೀನು ಒಳಿತನ್ನು ಮಾಡುವಾಗ ಸ್ವಂತ ಧರ್ಮದವರನ್ನು ಮಾತ್ರ ಗಮನದಲ್ಲಿರಿಸಬೇಡ. ಆದರೆ ಅವರಿಗೆ ಆದ್ಯತೆ ನೀಡಬಹುದು.

225. ಮೂರು ನಿಯಮಗಳಿಗೆ ನೀನು ಬದ್ಧನಾಗಿರಬೇಕು: ಪ್ರಕೃತಿ ನಿಯಮಗಳು, ಶರೀಅತ್ ನಿಯಮಗಳು ಮತ್ತು ಸರಕಾರದ ನಿಯಮಗಳು.

226. ನೀನು ಮಾಡಿದ ತಪ್ಪುಗಳನ್ನು ನೆನಪಿಡು. ಅವುಗಳನ್ನು ಪುನರಾವರ್ತಿಸದಂತೆ ಜಾಗ್ರತೆ ವಹಿಸು.

227. ನೀನು ಸ್ವಾರ್ಥ ಹಿತಚಿಂತನೆ ಮಾಡಬೇಡ.

228. ನೀನು ಹೆಮ್ಮೆಕೊಚ್ಚದಿರು.

229. ನೀನು ಅಂಜುಬುರುಕನಾಗಬೇಡ.

230. ನೀನು ಸೋಮಾರಿತನವನ್ನು ಬಿಟ್ಟುಬಿಡು.

231. ನೀನು ನಿರ್ಲಕ್ಷ್ಯತೆಯನ್ನು ಬಿಡು.

232. ನೀನು ಜಗಳ ಮತ್ತು ಕಲಹಗಳಿಂದ ದೂರವಿರು.

233. ನೀನು ಕೀಳುತನದಿಂದ ದೂರಸರಿ.

234. ನೀನು ಸ್ವಲ್ಪ ಸಂತೋಷದಿಂದ ಆನಂದ ತುಂದಿಲನಾಗಬೇಡ.

235. ನೀನು ಸಣ್ಣ ವಿಷಯಕ್ಕೆ ಸಿಟ್ಟುಗೊಂಡು ಅನಿಯಂತ್ರಿತನಾಗಬೇಡ.

236. ನೀನು ಚಂಚಲ ಸ್ವಭಾವಿಯಾಗಬೇಡ.

237. ನೀನು ಹೌದು ಹೌದು ಎಂದು ಹೇಳುವವನಾಗಬೇಡ.

238. ನೀನು ನಿನಗೆ ಒಪ್ಪಿಸಲಾದ ಕೆಲಸವನ್ನು ಬಿಟ್ಟೀ ಕೆಲಸದ ಹಾಗೆ ಕಾಣಬೇಡ. ಅದನ್ನು ಉತ್ಸಾಹದಿಂದ ಕಷ್ಟಪಟ್ಟು ಸರಿಯಾಗಿ ಮಾಡು.

239. ನಿನ್ನ ಆರೋಗ್ಯಕ್ಕೆ ಹಾನಿಕರವಾದ ಅಭ್ಯಾಸಗಳನ್ನು ಬಿಟ್ಟುಬಿಡು.

240. ನೀನು ಹಿರಿಯರೊಂದಿಗೆ ಧಿಕ್ಕಾರದಿಂದ ವರ್ತಿಸಬೇಡ.

241. ನೀನು ಕ್ರಮರಹಿತವಾಗಿ ವರ್ತಿಸಬೇಡ.

242. ನೀನು ಕೀಳರಿಮೆಯನ್ನು ಬಿಟ್ಟುಬಿಡು.

243. ನೀನು ದಾಕ್ಷಿಣ್ಯ ಸ್ವಭಾವದವನಾಗದಿರು.

244. ನೀನು ಕೆಟ್ಟ ಕೆಲಸದಲ್ಲಿ ಮುಂದುವರಿಯಬೇಡ.

245. ನೀನು ಪ್ರಸಿದ್ಧಿಯನ್ನು ಬಯಸಬೇಡ.

246. ನೀನು ಜನರು ನಿನ್ನನ್ನು ಮೆಚ್ಚಬೇಕೆಂದು ಇಚ್ಛಿಸಬೇಡ.

247. ನೀನು ಜನರನ್ನು ಹೀನೈಸಬೇಡ.

248. ಸಂಪತ್ತನ್ನು ಹೊಂದಿದ ಕಾರಣದಿಂದ ಮಾತ್ರ ನೀನು ಯಾರನ್ನೂ ಗೌರವಿಸಬೇಡ.

249. ನೀನು ಮೋಸಮಾಡುವ ಅಭ್ಯಾಸವನ್ನು ಬಿಡು.

250. ನೀನು ಒರಟು ಸ್ವಭಾವವನ್ನು ಹೊಂದಬೇಡ.

251. ನೀನು ಕೆಟ್ಟ ಮಾತು ಆಡುವವನಾಗಬೇಡ.

252. ನೀನು ಅಜ್ಞಾನ ಕಾಲದ ಅಭಿಮಾನ ಹೊಂದಬೇಡ.

253. ನೀನು ನಿನ್ನ ಕೆಲಸಗಳನ್ನು ಕ್ರಮರಹಿತವಾಗಿ ಮಾಡಬೇಡ.

254. ನೀನು ನಿನ್ನ ಕೆಲಸ ಮಾಡುವಾಗ ನಿರುತ್ಸಾಹಿಯಾಗಬೇಡ.

255. ನೀನು ಅವಿವೇಕಿಯಾಗಬೇಡ.

256. ನೀನು ಮುಂಗೋಪಿ ಆಗಬೇಡ.

257. ನೀನು ರಹಸ್ಯ ಕಾಪಾಡದವನಾಗಬೇಡ.

258. ನೀನು ಕುಬುದ್ಧಿ ತೋರಿಸಬೇಡ.

259. ನೀನು ಕುತರ್ಕ ಮಾಡುವವನಾಗಬೇಡ.

260. ನೀನು ಕಣ್ಣು ಹಾಕುವವನೂ ಸೌಂದರ್ಯದರ್ಶಕನೂ ಆಗಬೇಡ.

261. ನೀನು ರಹಸ್ಯ ಕೆಲಸಗಳಿಂದ ದೂರಸರಿ.

262. ನೀನು ಸುಳ್ಳು ಆಡಂಬರ ಪ್ರದರ್ಶಿಸಬೇಡ.

263. ನೀನು ಅನಾವಶ್ಯಕವಾಗಿ ಜನರನ್ನು ಆಕ್ಷೇಪಿಸಬೇಡ.

264. ನೀನು ಜನರನ್ನು ಅಪಹಾಸ್ಯ ಮಾಡಬೇಡ.

265. ನೀನು ಅನುಗ್ರಹಹೀನನಾಗದೆ ಇರಲು ಪ್ರಯತ್ನಿಸು.

266. ನೀನು ಸ್ವಾರ್ಥಿಯಾಗಬೇಡ.

267. ನೀನು ಹೆಚ್ಚು ಮೌನವನ್ನು ಅವಲಂಬಿಸಬೇಡ ಮತ್ತು ನಿರುತ್ಸಾಹಿಯಾಗಬೇಡ.

268. ನೀನು ಸಂದೇಹಪಡುವ ಸ್ವಭಾವ ಬಿಟ್ಟುಬಿಡು.

269. ನೀನು ಅನರ್ಹರಿಗೆ ದಾನ ನೀಡಬೇಡ.

270. ನೀನು ಜನರನ್ನು ನಗುಮುಖದಿಂದ ಭೇಟಿಯಾಗು.

271. ನೀನು ಜನರೊಂದಿಗೆ ಪ್ರೀತಿಯಿಂದ ವರ್ತಿಸು.

272. ನಿನ್ನಲ್ಲಿ ಇತರರ ತಪ್ಪುಗಳನ್ನು ಮರೆಮಾಡುವ ಅಭ್ಯಾಸ ಇರಬೇಕು.

273. ನೀನು ಅರ್ಹರ ಯೋಗ್ಯತೆಯನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ನೀಡಬೇಕು.

274. ನೀನು ಒಳಿತಿನಲ್ಲಿ ಮುಂದೆ ಸಾಗುವ ಮನೋಭಾವ ಹೊಂದು.

275. ನೀನು ಇದ್ದುದರಲ್ಲಿ ತೃಪ್ತಿ ಹೊಂದುವ ಸ್ವಭಾವ ಹೊಂದು.

276. ನಿನ್ನ ಕೆಲಸ ನೀನೇ ಸ್ವತಃ ಮಾಡು.

277. ನೀನು ಒಳ್ಳೆಯ ಸಂಕಲ್ಪ ಮತ್ತು ಒಳ್ಳೆಯ ಯೋಚನೆ ಮಾಡು.

278. ನೀನು ಎಂದೂ ನ್ಯಾಯವನ್ನು ಕೈಬಿಡಬೇಡ.

279. ನೀನು ಎಲ್ಲ ನ್ಯೂನತೆಗಳಿಂದ ದೂರ ಸರಿಯಲು ಪ್ರಯತ್ನಿಸು.

280. ನೀನು ಸಹಿಷ್ಣುತಾ ಮನೋಭಾವ ಹೊಂದು.

281. ನೀನು ಸಭ್ಯತೆಯನ್ನು ಅವಲಂಬಿಸು.

282. ನೀನು ಜಾಗರೂಕನಾಗಿರು.

283. ನೀನು ಎಲ್ಲರನ್ನೂ ಪ್ರೀತಿಸುವವನಾಗು.

284. ನೀನು ನಿನ್ನ ಭಾವೋದ್ವೇಗಗಳನ್ನು ನಿಯಂತ್ರಿಸು.

285. ನೀನು ಸದಾಚಾರಿಯಾಗು.

286. ನೀನು ಸ್ಥಿರಚಿತ್ತನಾಗು.

287. ನೀನು ಸಂತೋಷಕರ ಸ್ವಭಾವಗುಣವುಳ್ಳವನಾಗು.

288. ನಿನ್ನ ಮಾತಿನಲ್ಲಿ ಸ್ವಲ್ಪ ಸ್ವಲ್ಪ ಹಾಸ್ಯ ಸಹ ಇರಲಿ.

289. ನೀನು ಸರಳತೆಯನ್ನು ಅವಲಂಬಿಸು.

290. ನೀನು ಸ್ವಚ್ಛತೆಯನ್ನು ಇಷ್ಟಪಡು.

291. ನೀನು ದೃಢನಿರ್ಧಾರದಿಂದ ವರ್ತಿಸು.

292. ನೀನು ನಿನ್ನ ಕೆಲಸವನ್ನು ಬೇಗನೆ ಮತ್ತು ಕಷ್ಟಪಟ್ಟು ಮುಗಿಸು.

293. ನೀನು ಸಮಯ ಪಾಲನೆ ಮಾಡುವವನಾಗು.

294. ನೀನು ಕೆಟ್ಟ ಕೆಲಸದ ಬಗ್ಗೆ ನಾಚಿಕೆ ಹೊಂದು, ನಿನ್ನ ತಪ್ಪನ್ನು ಒಪ್ಪಿಕೊಳ್ಳು.

295. ನೀನು ನೀತಿ ಪಾಠ ಕಲಿಯುವ ಅಭ್ಯಾಸ ಹೊಂದು.

296. ನೀನು ಯಾವಾಗಲೂ ಅಭಿವೃದ್ಧಿಯ ಬಗ್ಗೆ ಚಿಂತಿಸು.

297. ನೀನು ಸ್ನೇಹಪೂರ್ವಕವಾಗಿ ವರ್ತಿಸು.

298. ನೀನು ಸಮಾಧಾನ ಚಿತ್ತನಾಗಿ ಶಾಂತಿಯಿಂದ ಚಿಂತಿಸು.

299. ನೀನು ಪ್ರಜ್ಞೆ ಉಳ್ಳವನಾಗು.

300. ನೀನು ಸತ್ಯಾನ್ವೇಷಿಯೂ ಸತ್ಯ ಹೇಳಲು ಧೈರ್ಯ ಉಳ್ಳವನೂ ಆಗು.

301. ನೀನು ನಿಷ್ಠಾವಂತನಾಗು.

302. ನೀನು ಅನ್ಯರಿಗೆ ಉಪಕಾರ ಮಾಡುವವನಾಗು.

303. ನೀನು ಪರಿಶುದ್ಧ ಯೋಚನೆ ಮಾಡುವವನಾಗು.

304. ನೀನು ನಿನ್ನ ಯೋಚನೆಗಳನ್ನು ಉನ್ನತಗೊಳಿಸಿಡು.

305. ನೀನು ಶಿಷ್ಟಾಚಾರಗಳನ್ನು ಕಲಿತುಕೊಳ್ಳು.

306. ನೀನು ಹಿರಿಯರ ಸೇವೆ ಮಾಡು.

307. ನೀನು ವಿದ್ವಾಂಸರನ್ನೂ ಭಯಭಕ್ತಿಯುಳ್ಳವರನ್ನೂ ಗೌರವಿಸು.

308. ನೀನು ಸ್ನೇಹಿತರಿಗೆ ಸಹಾಯ ಮಾಡುವವನಾಗು.

309. ನೀನು ಸಹಾನುಭೂತಿಯುಳ್ಳವನಾಗು.

310. ನೀನು ಗೌರವಿಸುವುದನ್ನು ಕಲಿತುಕೊಳ್ಳು.

311. ನೀನು ಇತರರ ತಪ್ಪುಗಳನ್ನು ಕಡೆಗಣಿಸು.

312. ನೀನು ಶೌರ್ಯವನ್ನು ಪ್ರಕಟಿಸು.

313. ಹೇ ಡಾಕ್ಟರ್, ನೀನು ಸತ್ಯವಾದ ಸರ್ಟಿಫಿಕೇಟು ಬರೆದುಕೊಡು. ನ್ಯಾಯಾಲಯದಲ್ಲಿ ಸತ್ಯವಾದ ಸಾಕ್ಷ್ಯ ಹೇಳು. ನಿನ್ನ ಸಾಕ್ಷ್ಯ ಸಂಪೂರ್ಣ ಸತ್ಯವಾದುದಾಗಿರಲಿ.

314. ನೀನು ಎಲ್ಲರೊಂದಿಗೆ ಸಭ್ಯವಾಗಿ ವರ್ತಿಸು.

315. ನೀನು ಸತ್ಯವನ್ನು ನಿನ್ನ ಚಿಹ್ನೆಯಾಗಿ ಮಾಡಿಕೊಳ್ಳು.

316. ನೀನು ಪ್ರತಿಯೊಂದು ಕೆಲಸವನ್ನು ಸರಿಯಾಗಿ ಮಾಡು.

317. ನೀನು ಇದ್ದುದರಲ್ಲಿ ತೃಪ್ತಿಪಡುವ ಮನೋಭಾವ ಬೆಳೆಸು.

318. ನೀನು ಹೇಳುವುದು ಮತ್ತು ಮಾಡುವುದು ಒಂದೇ ರೀತಿಯಾಗಿರಲಿ.

319. ನೀನು ಪತ್ನಿ, ಮಕ್ಕಳು ಮತ್ತು ಸಮುದಾಯವನ್ನು ಒಳ್ಳೆಯ ರೀತಿ ತರಬೇತಿಗೊಳಿಸು.

320. ನೀನು ಜನರೊಂದಿಗೆ ಮೃದುವಾಗಿ ಮಾತನಾಡು.

321. ಹೇ ಅತ್ತೆ, ನೀನು ನಿನ್ನ ಸೊಸೆಯೊಂದಿಗೆ ಮೃದುವಾಗಿಯೂ ಪ್ರೀತಿಯಿಂದಲೂ ವರ್ತಿಸು.

322. ಹೇ ಸೊಸೆ, ನೀನು ನಿನ್ನ ಅತ್ತೆಯನ್ನು ಗೌರವಿಸು.

323. ನೀನು ನೆನಪಿಡು, ಕೆಲವು ಸಾರಿ ಸ್ವಲ್ಪ ಮಾತ್ರ ನಿರ್ಲಕ್ಷ್ಯದಿಂದ ಬಹಳ ಹಾನಿ ಉಂಟಾಗುತ್ತದೆ.

* * * * *

ಓದಿದ್ದು

# ಮದುವೆ ವಯಸ್ಸು

ಆಯಿಷಾ(ರ)ರವರೊಂದಿಗಿನ ಪ್ರವಾದಿ(ಸ)ರವರ ವಿವಾಹದ ಬಗ್ಗೆ ಬಿಜೆಪಿ ನಾಯಕರು ನೀಡಿದ ಹೇಳಿಕೆಗೆ ಖಂಡನೆಯಾಗಿ ಮತ್ತು ಜನರಲ್ಲಿ ಈ ವಿಷಯದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ನೀಗಿಸಲು ಈ ಪೋಸ್ಟ್ ಮಾಡುತ್ತಿದ್ದೇನೆ.

ಇಸ್ಲಾಮಿಕ್ ಕಾನೂನು ಕಾಲಾತೀತ ಎಂಬುದನ್ನು ಸಾಬೀತುಪಡಿಸುವ ಒಂದು ಉದಾಹರಣೆಯಾಗಿದೆ ಇಸ್ಲಾಂನಲ್ಲಿ ಮದುವೆಗೆ ಯಾವುದೇ ನಿಗದಿತ ವಯಸ್ಸು ಇಲ್ಲ. ಪ್ರತಿ ದೇಶದ ಸಾಮಾಜಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ಪ್ರತಿ ದೇಶದಲ್ಲಿ ಸಾಮಾನ್ಯವಾಗಿ ಆಚರಣೆಯಲ್ಲಿರುವುದನ್ನು ಅನುಸರಿಸಲು ಮುಸ್ಲಿಮರಿಗೆ ಅವಕಾಶ ನೀಡಲಾಗಿದೆ.

ಮುಸ್ಲಿಮರು ಪ್ರವಾದಿ(ಸ) ಅವರ ಜೀವನ ಚರ್ಯೆಯನ್ನು ಅನುಸರಿಸಬೇಕಾದ ರೀತಿ ಇಸ್ಲಾಮಿಕ್ ಕರ್ಮಶಾಸ್ತ್ರ ಪ್ರಕಾರ ಒಂದೋ ನಿರ್ಬಂಧ (ಫರ್ಳ್) ಅಥವಾ ಅಪೇಕ್ಷಣೀಯ (ಸುನ್ನತ್) ಎಂದಾಗುತ್ತದೆ.

ಆದರೆ ಇತರ ಜೀವನ ವ್ಯವಹಾರಗಳು ಹಾಗಲ್ಲ. ಅಲ್ಲಿ ನಾವು ನಮ್ಮ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿದ್ದೇವೆ. ಅದನ್ನು ಅನುವದನೀಯ (ಜಾಯಿಜ್) ಅನ್ನುತ್ತೇವೆ.

ಪ್ರವಾದಿ(ಸ) ಸೌದಾ(ರ) ಎಂಬ 65 ವರ್ಷದ ವಿಧವೆಯನ್ನು ವಿವಾಹವಾಗಿದ್ದರು. ಆದರೆ ಪ್ರವಾದಿ(ಸ) ಮುಸ್ಲಿಮರಿಗೆ 65 ವರ್ಷದ ಮಹಿಳೆಯನ್ನು ಮದುವೆಯಾಗಲು ಕಲಿಸಲಿಲ್ಲ. ಪ್ರವಾದಿ(ಸ) ಒಂಬತ್ತು ವರ್ಷದ ಆಯಿಷಾ(ರ)ರನ್ನು ವಿವಾಹವಾಗಿದ್ದಾರೆ, ಆದ್ದರಿಂದ ಇತರ ಮುಸ್ಲಿಮರು 9 ವರ್ಷದ ಹೆಣ್ಣನ್ನು ಮದುವೆಯಾಗಬೇಕೆಂದು ಧರ್ಮದಲ್ಲಿ ಯಾವುದೇ ನಿರ್ದಿಷ್ಟ ಕಾನೂನು ಇಲ್ಲ. ಯಾವ ರೀತಿಯಲ್ಲಿ ಮದುವೆ ವಯಸ್ಸು ಆ ಕಾಲದಲ್ಲಿ, ಜನರು ಅನುಸರಿಸುತ್ತಾರೆ, ಯಾವಾಗ ಮದುವೆಯಾಗಲು ಪ್ರಾಪ್ತಿಯಾಗುತ್ತಾರೆ ಆಗ ಆಗಬಹುದು.

ಪ್ರಪಂಚದ ವಿವಿಧ ಸಮುದಾಯಗಳಲ್ಲಿ ಮದುವೆಯ ವಯಸ್ಸು ವಿಭಿನ್ನವಾಗಿದೆ. ಸುಮಾರು 50, 100 ವರ್ಷಗಳ ಹಿಂದೆ, ಪ್ರಪಂಚದಾದ್ಯಂತದ ಅನೇಕ ಸಮಾಜಗಳಲ್ಲಿ ಮದುವೆಯ ಸರಾಸರಿ ವಯಸ್ಸು 10 ವರ್ಷಗಳು. UNICEF ಇಂಟರ್‌ನ್ಯಾಶನಲ್ ಸೆಂಟರ್ ಫಾರ್ ರಿಸರ್ಚ್ ಆನ್ ವುಮೆನ್ ಇನ್ ಇಂಡಿಯಾದಿಂದ 1998ರ ಸಮೀಕ್ಷೆಯು 47% ಮದುವೆಗಳು ಬಾಲ್ಯವಿವಾಹಗಳಾಗಿವೆ ಎಂದು ಕಂಡುಹಿಡಿದಿದೆ. ಅಂದರೆ, ಕೇವಲ 24 ವರ್ಷಗಳ ಹಿಂದಿನವರೆಗೆ, ಭಾರತದಲ್ಲಿ ನಡೆದ ಎಲ್ಲಾ ವಿವಾಹಗಳಲ್ಲಿ ಅರ್ಧದಷ್ಟು ಬಾಲ್ಯ ವಿವಾಹಗಳು. ವಿಶ್ವಸಂಸ್ಥೆಯ 2005ರ ಅಧ್ಯಯನವು ಭಾರತದಲ್ಲಿ ಬಾಲ್ಯ ವಿವಾಹವು ಶೇಕಡಾ 30ರಷ್ಟು ಕಡಿಮೆಯಾಗಿದೆ ಎಂದು ಕಂಡುಹಿಡಿದಿದೆ. 2001ರ ಭಾರತೀಯ ಜನಗಣತಿಯ ಪ್ರಕಾರ, 1.4 ಮಿಲಿಯನ್ ಹುಡುಗಿಯರು 10ರಿಂದ 14 ವರ್ಷದೊಳಗಿನ ವಿವಾಹವಾಗಿದ್ದಾರೆ. 15ರಿಂದ 18 ವರ್ಷದೊಳಗಿನ ವಿವಾಹಿತರ ಸಂಖ್ಯೆ 4.63 ಮಿಲಿಯನ್.

ಭಾರತದಲ್ಲಿ ಚಿಕ್ಕ ಹುಡುಗಿಯರನ್ನು ಮದುವೆಯಾದ ಕೆಲವು ಪ್ರಮುಖರ ಹೆಸರುಗಳು ಮತ್ತು ಅವರು ವಿವಾಹವಾದಾಗ ಅವರ ಹೆಂಡತಿಯರ ವಯಸ್ಸು ಕೆಳಗೆ ನೀಡಲಾಗಿದೆ.

ಮಹಾತ್ಮ ಗಾಂಧಿಯವರು ಕಸ್ತೂರ್ಬಾ ಗಾಂಧಿಯನ್ನು ವಿವಾಹವಾದಾಗ ಇಬ್ಬರಿಗೂ 13 ವರ್ಷ.

ಭಾರತ ಕಂಡ ಅತ್ಯಂತ ನಿಪುಣ ಗಣಿತಜ್ಞರಾದ ಶ್ರೀನಿವಾಸ ರಾಮಾನುಜನ್ ಅವರು ತಮ್ಮ 10ನೇ ವಯಸ್ಸಿನಲ್ಲಿ 22ನೇ ವಯಸ್ಸಿನ ತಮ್ಮ ಪತ್ನಿ ಜಾನಕಿಯಮ್ಮಾಳ್ ಅವರನ್ನು ವಿವಾಹವಾದರು.

ಭಾರತದ ಅತ್ಯಂತ ನಿಪುಣ ಭೌತಶಾಸ್ತ್ರಜ್ಞರಲ್ಲಿ ಒಬ್ಬರಾದ ಸತ್ಯೇಂದ್ರನಾಥ್ ಬೋಸ್ ಅವರು ತಮ್ಮ 20ರ ಹರೆಯದಲ್ಲಿ 11 ವರ್ಷದ ಉಷಾಪತಿಯನ್ನು ವಿವಾಹವಾದರು. ಅವರಿಗೆ 9 ಮಕ್ಕಳಿದ್ದರು. ಈ ಮಹಾನ್ ವಿಜ್ಞಾನಿ, ಬೋಸ್, ಐನ್‌ಸ್ಟೈನ್ ಅಂಕಿ–ಅಂಶಗಳ ಸಂಶೋಧಕ, ಭಾರತದ ವೈಯಕ್ತಿಕ ಹೆಮ್ಮೆ. ಅವರ ಗೌರವಾರ್ಥವಾಗಿ ಬೋಸಾನ್ ಕಣಗಳನ್ನು ಹೆಸರಿಸಲಾಗಿದೆ.

ರಾಮಕೃಷ್ಣ ಪರಮಹಂಸರು, ಭಾರತದ ಅತ್ಯಂತ ಪ್ರಸಿದ್ಧ ಹಿಂದೂ ಪಂಡಿತರಲ್ಲಿ ಒಬ್ಬರು ಮತ್ತು ಶ್ರೀಮಂತ ವ್ಯಕ್ತಿ, ಕೇವಲ 5 ವರ್ಷ ವಯಸ್ಸಿನ ಶಾರದಾ ಬಾಯಿಯನ್ನು 23ನೇ ವಯಸ್ಸಿನಲ್ಲಿ ವಿವಾಹವಾದರು. ಸ್ವಾಮಿ ವಿವೇಕಾನಂದರು ಅವರ ಶಿಷ್ಯರಾಗಿದ್ದರು.

ಮಲಯಾಳ ಮನೋರಮಾ ಸಂಸ್ಥಾಪಕ ಮಾಮ್ಮನ್ ಮಾಪ್ಪಿಲ ಅವರ ಪುತ್ರ ಕೆ.ಎಂ. ಮ್ಯಾಥ್ಯೂ ಅವರ ಪ್ರಕಾರ, ಮಾಮ್ಮನ್ ಮಾಪ್ಪಿಲ ಅವರು 10 ವರ್ಷದ ಬಾಲಕಿಯನ್ನು ವಿವಾಹವಾಗಿದ್ದರು. ಅವಳು ಹನ್ನೊಂದನೇ ವಯಸ್ಸಿನಲ್ಲಿ ಮಗುವಿಗೆ ಜನ್ಮ ನೀಡಿದಳು.

ಕೇರಳ ರಾಜಕೀಯದ, ಕಮ್ಯುನಿಸ್ಟ್ ನೇತಾರ ಎ.ಕೆ. ಗೋಪಾಲನ್ (ಎ.ಕೆ.ಜಿ) ಅವರು ತಮ್ಮ ರಾಜಕೀಯ ತುರ್ತು ಪ್ರಸ್ಥಿತಿಯ ಸಂಧರ್ಭದಲ್ಲಿ 12ರ ಹರೆಯದ ಹುಡುಗಿಯನ್ನು ಹೇಗೆ ಪ್ರೀತಿಸಿದರು ಎಂಬುದನ್ನು ತಮ್ಮ ಆತ್ಮಕಥೆಯಲ್ಲಿ ವಿವರಿಸಿದ್ದಾರೆ.

ತಮಿಳುನಾಡಿನ ಎಲ್ಲ ದ್ರೈತ್ಯ ದ್ರಾವಿಡ ಚಳವಳಿಗಳಿಗೆ ಎಲ್ಲ ಅರ್ಥದಲ್ಲಿಯೂ ಹುಟ್ಟು ಹಾಕಿದ ಮಹಾನ್ ಸಮಾಜ ಸುಧಾರಕ ತಂತ್ರೈ ಪೆರಿಯಾರ್ ಎಂದೇ ಖ್ಯಾತರಾದ ಪೆರಿಯಾರ್ ಇ.ವಿ ರಾಮಸ್ವಾಮಿ ಅವರು 13 ವರ್ಷದ ನಾಗಮ್ಮ ಅವರನ್ನು ವಿವಾಹವಾಗಿದ್ದರು. ಪೆರಿಯಾರ್ ನಾಸ್ತಿಕ, ವಿಚಾರವಾದಿ ಮತ್ತು ಸ್ವತಂತ್ರ ಚಿಂತಕರಾಗಿದ್ದರು ಎಂಬುದು ಗಮನಾರ್ಹ.

ಹನ್ನೆರಡನೆಯ ವಯಸ್ಸಿನಲ್ಲಿ, ಕಿಲಿಮನೂರ್ ರಾಘವರ್ಮ ಕೊಯಿತ್ತಂಪುರನ್ ಅವರು ತಿರುವಾಂಕೂರಿನ ರಾಣಿ ಪಾರ್ವತಿಭಾಯಿ (ಮಹಾರಾಜ ಸ್ವಾತಿ ತಿರುನಾಳ್ ಅವರ ಕಿರಿಯ ತಾಯಿ) ಅವರನ್ನು ವಿವಾಹವಾದರು ಮತ್ತು ಹದಿಮೂರನೆಯ ವಯಸ್ಸಿನಲ್ಲಿ ಅವರು ಸಿಂಹಾಸನವನ್ನು ಪಡೆದರು.

ಇವತ್ತು ಕೂಡ ಇಂಗ್ಲೆಂಡ್‌ನಲ್ಲಿ ಕಾನೂನುಬದ್ಧ ವಿವಾಹದ ವಯಸ್ಸು ಪುರುಷರು ಮತ್ತು ಮಹಿಳೆಯರಿಗೆ 16 ಆಗಿದೆ. ಪ್ರಪಂಚದ ಹೆಚ್ಚಿನ ದೇಶಗಳಲ್ಲಿ, ಮದುವೆಯ ಕನಿಷ್ಠ ವಯಸ್ಸು 14–16 ವರ್ಷಗಳು. ಹೆಚ್ಚಿನ EU ದೇಶಗಳಲ್ಲಿ ಮದುವೆಯ ಕನಿಷ್ಠ ವಯಸ್ಸು ಹುಡುಗಿಯರಿಗೆ 16 ಮತ್ತು ಹುಡುಗರಿಗೆ 18 ಆಗಿದೆ. ಹೆಚ್ಚಿನ ದೇಶಗಳು ಈ ವಯಸ್ಸಿನ ಜನರ ವಿವಾಹಗಳನ್ನು ಕೆಲವು ಷರತ್ತುಗಳೊಂದಿಗೆ ಕಾನೂನುಬದ್ಧಗೊಳಿಸುತ್ತವೆ.

1880ರಲ್ಲಿ ಅಮೆರಿಕಾದ ಹೆಚ್ಚಿನ ರಾಜ್ಯಗಳಲ್ಲಿ ಸಮ್ಮತಿಯ ಲೈಂಗಿಕತೆಯ ಕನಿಷ್ಠ ವಯಸ್ಸು 10 ವರ್ಷ. ಡೆಲವೇರ್ ಸ್ಟೇಟ್‌ನಲ್ಲಿ ಅದು ಕೇವಲ 7 ವರ್ಷ ವಯಸ್ಸಾಗಿತ್ತು.!

ಬದಲಾದ ಆಧುನಿಕ ಸನ್ನಿವೇಶಗಳನ್ನು ಅವಲೋಕಿಸಿದರೆ, ಇವರೆಲ್ಲ ಚಿಕ್ಕ ಹುಡುಗಿಯರನ್ನು ಮದುವೆಯಾದರು ಎಂದು ನಮಗೆ ತೋರುತ್ತದೆ. ಆದರೆ ಅದೇ ಸಾಮಾಜಿಕ ಪರಿಸ್ಥಿತಿಗಳಲ್ಲಿ, ಇದು ತುಂಬಾ ಸಾಮಾನ್ಯವಾಗಿದೆ. ಒಂಬತ್ತು ಅಥವಾ ಹತ್ತು ವರ್ಷ ವಯಸ್ಸಿನ ಹುಡುಗಿಯರೊಂದಿಗೆ ಲೈಂಗಿಕ ಸಂಬಂಧ ಇಂದಿನ ಪರಿಸ್ಥಿತಿಯಲ್ಲಿ ನಮಗೆ ತುಂಬಾ ಕೊಳಕು ಅನಿಸುತ್ತದೆ. ಆದರೆ ಹಿಂದೆ ಅದು ಸಮಾಜದಲ್ಲಿ ತೀರಾ ಸಹಜವಾದ ಮತ್ತು ಜಾತಿ–ಮತದ ಭೇದವಿಲ್ಲದೆ ಎಲ್ಲರೂ ಒಪ್ಪಿಕೊಳ್ಳುವ ಸಂಗತಿಯಾಗಿತ್ತು.

2007ರಲ್ಲಿ ಅಮೆರಿಕಾದ ಪ್ರೌಢಶಾಲಾ ವಿದ್ಯಾರ್ಥಿಗಳ CDC ಅಧ್ಯಯನವು 48 ಪ್ರತಿಶತದಷ್ಟು ಪ್ರೌಢಶಾಲಾ ವಿದ್ಯಾರ್ಥಿಗಳು ಲೈಂಗಿಕ ಸಂಬಂಧ ಹೊಂದುವುದು ಒಪ್ಪಿಕೊಂಡಿದ್ದಾರೆ ಎಂದು ಕಂಡುಹಿಡಿದಿದೆ. 2017ರಲ್ಲಿ ನಡೆಸಿದ ಹೊಸ ಸಮೀಕ್ಷೆ ಪ್ರಕಾರ ಶೇ. 40ಕ್ಕೆ ಇಳಿದಿದೆ. ಇದು ವಿವಾಹಪೂರ್ವ ಸಂಬಂಧಗಳ ಎಣಿಕೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಸಂಕ್ಷಿಪ್ತವಾಗಿ, ಇಸ್ಲಾಂ ಮದುವೆಗೆ ನಿರ್ದಿಷ್ಟ ವಯಸ್ಸನ್ನು ನಿಗದಿಪಡಿಸುವುದಿಲ್ಲ. ಸಮುದಾಯದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ವಯಸ್ಸಿನಲ್ಲಿ ಮದುವೆ ನಡೆಯಬಹುದು. ಆದ್ದರಿಂದಲೇ ಜಗತ್ತಿನ ಯಾವುದೇ ದೇಶದಲ್ಲಿ ಅಲ್ಲಿ ಇರುವ ಕಾನೂನು ಮಿತಿಯಲ್ಲಿ ಮದುವೆಯಾಗುವುದು ಮುಸಲ್ಮಾನನಿಗೆ ಕಷ್ಟವೇನಲ್ಲ.

ಈಗ ಇವರೆಲ್ಲ ಬಾಲ್ಯವಿವಾಹಗಳಾಗಿದ್ದರೂ 9 ವರ್ಷದ ಆಯೇಷಾ(ರ)ರನ್ನು ಮುಹಮ್ಮದ್ ಪೈಗಂಬರ್(ಸ) ಮದುವೆಯಾದ ಬಗ್ಗೆ ಟೀಕೆಗೆ ಗುರಿಯಾಗುವುದು ಟೀಕೆ ಮಾಡುವವರ ಮನಸ್ಸಿನಲ್ಲಿ ಕೇವಲ ಜನಾಂಗೀಯ ವಿಷ ಎಂದು ತಿಳಿಯಿರಿ. ಅದಕ್ಕೆ ಚಿಕಿತ್ಸೆ ಇದ್ದಂತೆ ಕಾಣುತ್ತಿಲ್ಲ.

**ಮೂಲ: Dr. Jauzal. CP** (ವಾಟ್ಸ್ ಆ್ಯಪ್‌ನಲ್ಲಿ ಬಂದದ್ದು)

ಓದಿದ್ದು

# ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳ ಬಿಡುಗಡೆ ಅಸಮರ್ಥನೀಯ

## ಅಮೆರಿಕದ ಧಾರ್ಮಿಕ ಸ್ವಾತಂತ್ರ್ಯದ ಆಯೋಗದ ಖಂಡನೆ

**ನ್ಯೂಯಾರ್ಕ್, ಆ.20:** ಬಿಲ್ಕಿಸ್ ಬಾನು ಪ್ರಕರಣದ 11 ಮಂದಿ ಅಪರಾಧಿಗಳ ಜೈಲು ಶಿಕ್ಷೆಯನ್ನು ರದ್ದುಪಡಿಸಿರುವುದನ್ನು ಅಮೆರಿಕದ ಅಂತರ್‌ರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯದ ಆಯೋಗ ಅಥವಾ ಯುಎಸ್‌ಸಿಐಆರ್‌ಎಫ್ ಶುಕ್ರವಾರ ಬಲವಾಗಿ ಖಂಡಿಸಿದೆ.

ಈ ಅಪರಾಧಿಗಳನ್ನು ಬಿಡುಗಡೆಗೊಳಿಸುವ ಗುಜರಾತ್ ಸರಕಾರದ ನಿರ್ಧಾರವು ಅಸಮರ್ಥನೀಯವಾದುದು ಹಾಗೂ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಹಿಂಸಾಚಾರದಲ್ಲಿ ತೊಡಗಿದವರಿಗೆ ಶಿಕ್ಷೆಯಿಂದ ವಿನಾಯಿತಿ ನೀಡುವ ಮಾದರಿಯ ಭಾಗವಾಗಿದೆಯೆಂದು ಆಯೋಗ ಹೇಳಿದೆ.

ಬಿಲ್ಕಿಸ್ ಬಾನು ಪ್ರಕರಣದಲ್ಲಿ ಅಪರಾಧಿಗಳ ಜೈಲು ಶಿಕ್ಷೆಯನ್ನು ರದ್ದುಪಡಿಸಿರುವುದು ನ್ಯಾಯದಾನದ ವಿಡಂಬನೆಯಾಗಿದೆ ಎಂದು ಯುಎಸ್‌ಸಿಐಆರ್‌ಎಫ್ ಆಯುಕ್ತ ಸ್ಟೀಫನ್ ಲೈಕ್ ಶೆನೆಕ್ ತಿಳಿಸಿದ್ದಾರೆ.

2002ರ ಗುಜರಾತ್ ಗಲಭೆ ಸಂದರ್ಭದಲ್ಲಿ ಅಹ್ಮದಾಬಾದ್ ಸಮೀಪ ಬಿಲ್ಕಿಸ್ ಬಾನು ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಗಿತ್ತು. ಆ ಸಮಯದಲ್ಲಿ ಆಕೆಗೆ 19 ವರ್ಷ ವಯಸ್ಸಾಗಿತ್ತು ಹಾಗೂ ಗರ್ಭಿಣಿಯಾಗಿದ್ದಳು. ಬಿಲ್ಕಿಸ್‌ರ ಮೂರು ವರ್ಷದ ಪುತ್ರಿ ಸೇರಿದಂತೆ ಆಕೆಯ ಕುಟುಂಬದ 7 ಮಂದಿ ಸದಸ್ಯರನ್ನು ಗಲಭೆಕೋರರು ಹತ್ಯೆಗೈದಿದ್ದರು. ದುಷ್ಕರ್ಮಿಗಳಲ್ಲಿ ಒಬ್ಬಾತ ಹೆಣ್ಣು ಮಗುವೊಂದನ್ನು ಆಕೆಯ ತಾಯಿಯಿಂದ ಕಿತ್ತುಕೊಂಡು, ಅದರ ತಲೆಯನ್ನು ಬಂಡೆಗಲ್ಲಿಗೆ ಜಜ್ಜಿ ಸಾಯಿಸಿದ್ದ ಘಟನೆಯ ಬಗ್ಗೆ ಆಯೋಗ ಗಮನ ಸೆಳೆದಿದೆ.

2002ರ ಗುಜರಾತ್ ಗಲಭೆಯ ಸಂದರ್ಭದಲ್ಲಿ 1 ಸಾವಿರಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದರು. ಬಿಲ್ಕಿಸ್ ಬಾನು ಮೇಲೆ ಸಾಮೂಹಿಕ ಅತ್ಯಾಚಾರ ಹಾಗೂ ಆಕೆಯ ಕುಟುಂಬದ 7 ಮಂದಿ ಸದಸ್ಯರನ್ನು ಕಗ್ಗೊಲೆಗೈದ ಆರೋಪದಲ್ಲಿ ಜೀವಾವಧಿ ಶಿಕ್ಷೆಗೊಳಗಾದ 11 ಮಂದಿ ಅಪರಾಧಿಗಳ ಜೈಲು ಶಿಕ್ಷೆಯನ್ನು ಗುಜರಾತ್ ಸರಕಾರ ರದ್ದುಪಡಿಸಿದ ಬಳಿಕ ಸೋಮವಾರ ಅವರು ಸೆರೆಮನೆಯಿಂದ ಬಿಡುಗಡೆಗೊಂಡಿದ್ದರು. ಹಲವಾರು ಮಾನವಹಕ್ಕು ಸಂಘಟನೆಗಳು ಕೂಡಾ ಗುಜರಾತ್ ಸರಕಾರದ ನಡೆಯನ್ನು ತೀವ್ರವಾಗಿ ಖಂಡಿಸಿವೆ. ಬಿಲ್ಕಿಸ್ ಬಾನು ಪ್ರಕರಣದ 11 ಮಂದಿ ಅಪರಾಧಿಗಳಿಗೆ ಜೈಲು ಶಿಕ್ಷೆಯನ್ನು ರದ್ದುಪಡಿಸುವ ಗುಜರಾತ್ ಸರಕಾರದ ಆದೇಶವನ್ನು ಅಸಿಂಧುಗೊಳಿಸಬೇಕೆಂದು ಗುರುವಾರ ಮಾನವಹಕ್ಕು ಸಂಘಟನೆಗಳ ಕಾರ್ಯಕರ್ತರು ಸೇರಿದಂತೆ 6 ಸಾವಿರಕ್ಕೂ ಅಧಿಕ ಭಾರತೀಯ ನಾಗರಿಕರು ಸುಪ್ರೀಂ ಕೋರ್ಟ್‌ಗೆ ಆಗ್ರಹಿಸಿದ್ದರು. **(ವಾರ್ತಾಭಾರತಿ: 21.8.2022)**

ಓದಿದ್ದು

# ಬಿಜೆಪಿಯ ಗೆಲುವಿಗಾಗಿ ದೇಶಾದ್ಯಂತ ಬಾಂಬ್ ಸ್ಫೋಟಿಸಿದ ಆರೆಸ್ಸೆಸ್: ಪದಾಧಿಕಾರಿ ಹೇಳಿಕೆ

## ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಕೆ

**ಮುಂಬೈ, ಸೆ.1:** ಆರೆಸ್ಸೆಸ್ ಪದಾಧಿಕಾರಿಯೋರ್ವರು ಆ.30ರಂದು ನಾಂದೇಡ್ ನ್ಯಾಯಾಲಯಕ್ಕೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಚುನಾವಣೆಗಳಲ್ಲಿ ಬಿಜೆಪಿಯ ಗೆಲುವಿಗೆ ನೆರವಾಗಲು ಆರೆಸ್ಸೆಸ್‌ನ ವಿನಾಶಕಾರಿ ಗುಪ್ತ ಚಟುವಟಿಕೆಗಳ ಬಗ್ಗೆ ದಿಗ್ಭ್ರಮೆಗೊಳಿಸುವ ಅಂಶಗಳನ್ನು ಬಹಿರಂಗಗೊಳಿಸಿದ್ದಾರೆ.

ಆರೆಸ್ಸೆಸ್ ಮತ್ತು ಸಂಘಪರಿವಾರ ಸಂಘಟನೆಗಳು ದೇಶಾದ್ಯಂತ ಬಾಂಬ್ ಸ್ಫೋಟಗಳನ್ನು ನಡೆಸಿದ್ದವು ಮತ್ತು ಬಾಂಬ್ ಸ್ಫೋಟಗಳಿಗೆ ತರಬೇತಿ ನೀಡಿದ್ದ ಶಿಬಿರಗಳಲ್ಲಿ ತಾನೂ ಉಪಸ್ಥಿತನಿದ್ದೆ ಎಂದು ಸಂಘಟನೆಯ ಪದಾಧಿಕಾರಿಯೆಂದು ಹೇಳಿಕೊಂಡಿರುವ ಯಶವಂತ ಶಿಂದೆ ಅಫಿಡವಿಟ್‌ನಲ್ಲಿ ತಿಳಿಸಿದ್ದಾರೆ.

ಆಯ್ದ ಹೋರಾಟಗಾರರ ಸಂಘಟನೆಯಿಂದ ಹಿಡಿದು ಸಂಚನ್ನು ರೂಪಿಸಿ ಅದನ್ನು ಕಾರ್ಯಗತಗೊಳಿಸುವವರೆಗೆ ಬಾಂಬ್ ಸ್ಫೋಟ ಯೋಜನೆಯ ವಿವಿಧ ಹಂತಗಳಲ್ಲಿ ಪಾಲ್ಗೊಂಡಿದ್ದ ಹಲವಾರು ಆರೆಸ್ಸೆಸ್ ಮತ್ತು ವಿಹಿಂಪ ಪದಾಧಿಕಾರಿಗಳನ್ನು ಹಿಂದೆ ಅಫಿಡವಿಟ್‌ನಲ್ಲಿ ಹೆಸರಿಸಿದ್ದಾರೆ. ತಾನು ಹಿಂದುತ್ವದಲ್ಲಿ ಗಾಢ ನಂಬಿಕೆ ಹೊಂದಿದ್ದೇನೆ ಮತ್ತು ಹಿಂದೂ ಧರ್ಮವು ಯಾವುದೇ ಭಯೋತ್ಪಾದನೆ ಪ್ರವೃತ್ತಿಯನ್ನು ಹೊಂದಿರದ ಉದಾತ್ತ ಧರ್ಮವೆಂದು ಪರಿಗಣಿಸಿದ್ದೇನೆ ಎಂದು ಹೇಳಿಕೊಂಡಿರುವ ಶಿಂದೆ, ಆರೆಸ್ಸೆಸ್ ಮತ್ತು ವಿಹಿಂಪಗಾಗಿ ಸ್ಫೋಟಗಳ ರೂವಾರಿಗಳಾಗಿದ್ದ ಮೂವರು ವ್ಯಕ್ತಿಗಳ ಹೆಸರುಗಳನ್ನು ಅಫಿಡವಿಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಇಂದ್ರೇಶ್ ಕುಮಾರ್ ಮತ್ತು ಹಿಮಾಂಶು ಪನ್ಸೆ ಜೊತೆಗೆ ಮಿಲಿಂದ ಪರಾಂಡೆ, ರಾಕೇಶ್ ಧಾವಡೆ ಮತ್ತು ರವಿ ದೇವ (ಮಿಥುನ ಚಕ್ರವರ್ತಿ) ಅವರನ್ನು ಈ ಪ್ರಕರಣದಲ್ಲಿ ಮುಖ್ಯ ಸಂಚುಕೋರರನ್ನಾಗಿ ಅಫಿಡವಿಟ್‌ನಲ್ಲಿ ಹೆಸರಿಸಲಾಗಿದೆ. ಪರಾಂಡೆ ಮತ್ತು ಧಾವಡೆ ತರಬೇತಿ ಶಿಬಿರಗಳನ್ನು ಸಂಘಟಿಸಿದ್ದರೆ, ರವಿ ದೇವ ಬಾಂಬ್ ತಯಾರಿಕೆಯ ತರಬೇತಿಯನ್ನು ನೀಡಿದ್ದ.

ತಾನು ಆರೆಸ್ಸೆಸ್‌ನ ಧೋರಣೆಗೆ ವಿರುದ್ಧವಾಗಿದ್ದೆ ಮತ್ತು ಹೇಯ ಅಪರಾಧಗಳಲ್ಲಿ ಭಾಗಿಯಾಗಲು ಬಯಸಿರಲಿಲ್ಲ ಎಂದು ತಿಳಿಸಿರುವ ಶಿಂದೆ, ಸಂಘಟನೆಯಲ್ಲಿ ತನ್ನೊಂದಿಗೆ ಉತ್ತಮ ಸಂಪರ್ಕ ಹೊಂದಿದ್ದ ವ್ಯಕ್ತಿಗಳನ್ನು ಬಾಂಬ್ ಸ್ಫೋಟಗಳನ್ನು ನಡೆಸದಂತೆ ನಿರುತ್ತೇಜಿಸಿದ್ದೆ ಮತ್ತು ತನ್ಮೂಲಕ ಅನೇಕ ಹಿಂದೂಗಳು, ಮುಸ್ಲಿಮರು ಮತ್ತು ಕ್ರೈಸ್ತರ ಜೀವಗಳನ್ನು ಉಳಿಸಿದ್ದೆ ಎಂದು ಅಫಿಡವಿಟ್ ನಲ್ಲಿ ಹೇಳಿದ್ದಾರೆ.

ದೇಶಾದ್ಯಂತ ಬಾಂಬ್ ಸ್ಫೋಟಗಳನ್ನು ನಡೆಸುವ ಆರೆಸ್ಸೆಸ್ ಮತ್ತು ವಿಹಿಂಪ ಯೋಜನೆಯು ನಿರೀಕ್ಷಿಸಿದ್ದಷ್ಟು ಯಶಸ್ವಿಯಾಗಿರಲಿಲ್ಲ. ಹೀಗಾಗಿ ಬಿಜೆಪಿಗೆ ರಾಜಕೀಯ ಲಾಭವುಂಟಾಗಿರಲಿಲ್ಲ. ನಂತರದ 2004ರ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಬಹುಮತವನ್ನು ಗೆದ್ದುಕೊಂಡಿತ್ತು. ಪರಾಂಡೆಯಂತಹ ಮುಖ್ಯ ರೂವಾರಿಗಳು ಗಾಬರಿಗೊಂಡಿದ್ದರು ಮತ್ತು ಭೂಗತರಾಗಿದ್ದರು. ಆದರೆ ರಹಸ್ಯವಾಗಿ ಸಂಚುಗಳನ್ನು ರೂಪಿಸುವುದನ್ನು ಅವರು ಮುಂದುವರಿಸಿದ್ದರು. ಭೂಗತರಾಗಿದ್ದುಕೊಂಡೇ ಅವರು ದೇಶಾದ್ಯಂತ ಅನೇಕ ಬಾಂಬ್ ಸ್ಫೋಟಗಳನ್ನು ನಡೆಸಿದ್ದರು ಹಾಗೂ ಪಕ್ಷಪಾತಿ ಪೊಲೀಸರು ಮತ್ತು ಮಾಧ್ಯಮಗಳ ನೆರವಿನಿಂದ ಬಾಂಬ್ ಸ್ಫೋಟಗಳ ಹೊಣೆಯನ್ನು ಮುಸ್ಲಿಮರ ಮೇಲೆ ಹೊರಿಸಿದ್ದರು. ಇದು 2014ರ ಚುನಾವಣೆಗಳಲ್ಲಿ ಬಿಜೆಪಿಯ ಗೆಲುವಿಗೆ ನೆರವಾಗಿತ್ತು ಎಂದು ಅಫಿಡವಿಟ್‌ನಲ್ಲಿ ವಿವರಿಸಲಾಗಿದೆ.

### ಆರೆಸ್ಸೆಸ್‌ಗೆ ಕಾಂಗ್ರೆಸ್ ತರಾಟೆ

**ತಾನು ಬಾಂಬ್ ತಯಾರಿ ಶಿಬಿರದಲ್ಲಿ ಭಾಗವಹಿಸಿದ್ದೆ ಎಂದು ಆರೆಸ್ಸೆಸ್ ಪ್ರಚಾರಕ (ಕಾರ್ಯಕರ್ತ) ಅಫಿಡವಿಟ್‌ನಲ್ಲಿ ಪ್ರತಿಪಾದಿಸಿದ ಬಳಿಕ ಕಾಂಗ್ರೆಸ್ ಗುರುವಾರ ಆರೆಸ್ಸೆಸ್ ಅನ್ನು ತರಾಟೆಗೆ ತೆಗೆದುಕೊಂಡಿದೆ. ಆರೆಸ್ಸೆಸ್ ಪ್ರಚಾರಕ ಯಶ್ವಂತ್ ಶಿಂದೆಯ ವೀಡಿಯೊವನ್ನು ಶೇರ್ ಮಾಡಿರುವ ಕಾಂಗ್ರೆಸ್ ವಕ್ತಾರ ಪವನ್ ಖೇರಾ, ಆರೆಸ್ಸೆಸ್‌ನ ದೇಶ ವಿರೋಧಿ ಚಟುವಟಿಕೆಗಳ ಕುರಿತು ಭಯಾನಕ ಮಾಹಿತಿಯನ್ನು ಅಫಿಡವಿಟ್ ಬಹಿರಂಗಗೊಳಿಸಿದೆ ಎಂದಿದ್ದಾರೆ. ಇಡೀ ದೇಶದ ಮೇಲೆ ಬಾಂಬ್ ಹಾಕಲು ಹೇಗೆ ಸಂಚು ರೂಪಿಸಲಾಯಿತು, ಇದರಲ್ಲಿ ಭಾಗಿಯಾದವರು ಯಾರು ಎಂಬ ಮಾಹಿತಿಯನ್ನು ಈ ಅಫಿಡವಿಟ್ ಬಯಲುಗೊಳಿಸಿದೆ ಎಂದು ಖೇರಾ ಟ್ವೀಟ್ ಮಾಡಿದ್ದಾರೆ. (ವಾರ್ತಾಭಾರತಿ: 2.9.2022)**

===============================================================

# ಡೋಲೊ ಶಿಫಾರಸಿಗೆ ವೈದ್ಯರಿಗೆ 1,000 ಕೋಟಿ ರೂ. ಉಚಿತ ಕೊಡುಗೆ

## ಸುಪ್ರೀಂಗೆ ಮಾಹಿತಿ ನೀಡಿದ ವೈದ್ಯಕೀಯ ಪ್ರತಿಸಿಧಿಗಳ ಸಂಘಟನೆ

**ಹೊಸದಿಲ್ಲಿ, ಆ. 18:** ಪ್ಯಾರಸಿಟಮಾಲ್ ಮಾತ್ರೆ ಡೋಲೊವನ್ನು ಶಿಫಾರಸು ಮಾಡಲು ವೈದ್ಯರಿಗೆ ಉಚಿತ ಕೊಡುಗೆ ನೀಡಲು ಡೋಲೋ ಕಂಪೆನಿ 1,000 ಕೋ. ರೂ. ವೆಚ್ಚ ಮಾಡಿದೆ ಎಂದು ವೈದ್ಯಕೀಯ ಪ್ರತಿನಿಧಿಗಳ ಸಂಘಟನೆ ಗುರುವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಫೆಡರೇಶನ್ ಆಫ್ ಮೆಡಿಕಲ್ ಆ್ಯಂಡ್ ಸೇಲ್ಸ್ ರೆಪ್ರೆಸೆಂಟೇಟಿವ್ಸ್ ಅಸೋಸಿಯೇಶನ್ ಆಫ್ ಇಂಡಿಯಾದ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಸಂಜಯ್ ಪಾರಿಖ್, ಡೋಲೊ ಕಂಪೆನಿ 1,000 ಕೋ. ರೂ. ಮೌಲ್ಯದ ಉಚಿತ ಕೊಡುಗೆಯನ್ನು ವೈದ್ಯರಿಗೆ ನೀಡಿದೆ. ತನ್ನ ಮಾಹಿತಿಗೆ ಮೂಲವಾಗಿ ಅವರು ಕೇಂದ್ರ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ)ಯ ವರದಿಯನ್ನು ಉಲ್ಲೇಖಿಸಿದರು.

ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ ನೇತೃತ್ವದ ಹಾಗೂ ನ್ಯಾಯಮೂರ್ತಿ ಎ.ಎಸ್. ಬೋಪಣ್ಣ ಅವರನ್ನು ಒಳಗೊಂಡ ಪೀಠ, "ನೀವು ಹೇಳುತ್ತಿರುವುದು ನನ್ನ ಕಿವಿಗಳಿಗೆ ಸಂಗೀತವಲ್ಲ. ನನಗೆ ಕೋವಿಡ್ ಸೋಂಕು ತಗಲಿದಾಗ ಇದೇ ಔಷಧವನ್ನು ಸೇವಿಸಿದ್ದೇನೆ" ಎಂದರು.

ಫೆಡರೇಶನ್ ಆಫ್ ಮೆಡಿಕಲ್ ಆ್ಯಂಡ್ ಸೇಲ್ಸ್ ರೆಪ್ರೆಸೆಂಟೇಟಿವ್ಸ್ ಅಸೋಸಿಯೇಶನ್ ಆಫ್ ಇಂಡಿಯಾ ತನ್ನ ಸಾರ್ವಜನಿಕ ಹಿತಾಸಕ್ತಿ ದಾವೆಯಲ್ಲಿ ಔಷಧ ಸೂತ್ರೀಕರಣ ಹಾಗೂ ಭಾರತದಲ್ಲಿ ಮಾರಾಟವಾಗುತ್ತಿರುವ ಔಷಧಗಳ ಬೆಲೆಗಳ ಕುರಿತು ಕಳವಳ ವ್ಯಕ್ತಪಡಿಸಿತು.

ಸಂಜಯ್ ಪಾರಿಖ್ ಅವರ ಪ್ರತಿಪಾದನೆಯನ್ನು ಆಲಿಸಿದ ಬಳಿಕ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ ಹಾಗೂ ಎ.ಎಸ್. ಬೋಪಣ್ಣ ಅವರನ್ನು ಒಳಗೊಂಡ ಪೀಠ ಇದು ಗಂಭೀರ ವಿಚಾರ ಎಂದು ಅಭಿಪ್ರಾಯಿಸಿತು. **(ವಾರ್ತಾ ಭಾರತಿ: 19.8.2022).**

================================================================

## ಮುಸ್ಲಿಂ ಹೆಣ್ಮಕ್ಕಳು 16 ವರ್ಷಕ್ಕೇ ಮದುವೆಯಾಗಬಹುದು
### ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ತೀರ್ಪು

**ಚಂಡೀಗಢ:** 'ಮುಸ್ಲಿಂ ಹೆಣ್ಣು ಮಕ್ಕಳಿಗೆ 16 ವರ್ಷದ ಅನಂತರ ತಮ್ಮಿಷ್ಟದ ಹುಡುಗನನ್ನು ಮದುವೆಯಾಗಲು ಹಕ್ಕಿದೆ' ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ತೀರ್ಪು ಕೊಟ್ಟಿದೆ. 16 ವರ್ಷದ ಮುಸ್ಲಿಂ ಯುವತಿ ಮತ್ತು 21 ವರ್ಷದ ಮುಸ್ಲಿಂ ಯುವಕ ಪರಸ್ಪರ ಪ್ರೀತಿಸಿ ಜೂ.8ರಂದು ಮದುವೆಯಾಗಿದ್ದಾರೆ. ಆದರೆ ಅವರಿಗೆ ಕುಟುಂಬಗಳಿಂದ ಬೆದರಿಕೆ ಬಂದ ಹಿನ್ನೆಲೆ ರಕ್ಷಣೆ ಕೋರಿ ನವದಂಪತಿ ನ್ಯಾಯಾಲಯದ ಮೆಟ್ಟಿಲೇರಿದ್ದರು. ಅವರ ಅರ್ಜಿಯ ವಿಚಾರಣೆ ಮಾಡಿರುವ ನ್ಯಾಯಪೀಠ ಈ ತೀರ್ಪು ಕೊಟ್ಟಿದೆ. "ಮುಸ್ಲಿಂ ವಿವಾಹವು ಅವರ ಧಾರ್ಮಿಕ ಕಾನೂನಿನಿಂದಲೇ ನಿಯಂತ್ರಿತವಾಗಿದೆ. ದಿನ್‌ಶಾ ಫರ್ದುಂಜಿ ಮುಲ್ಲಾ ಅವರ 'ಪ್ರಿನ್ಸಿಪಲ್ಸ್ ಆಫ್ ಮೊಹಮದನ್ ಲಾ' ಪುಸ್ತಕದ ಪ್ರಕಾರ 16 ವರ್ಷ ಮೇಲ್ಪಟ್ಟ ಯುವತಿಗೆ ಆಕೆಯ ಇಷ್ಟದ ಯುವಕನೊಂದಿಗೆ ಮದುವೆಯಾಗಲು ಹಕ್ಕಿದೆ" ಎಂದು ನ್ಯಾಯಾಲಯ ಹೇಳಿದೆ. ಹಾಗೆಯೇ ಅರ್ಜಿದಾರರ ರಕ್ಷಣೆಗೆ ಪೊಲೀಸರಿಗೆ ಸೂಚಿಸಲಾಗಿದೆ. **(ಉದಯವಾಣಿ: 21–6–2022)**

================================================================

## ಹತ್ತು ಮಕ್ಕಳನ್ನು ಹಡೆಯಿರಿ 13 ಲಕ್ಷ ಬಹುಮಾನ ಗೆಲ್ಲಿ!

**ಹೊಸದಿಲ್ಲಿ:** ಕೊರೊನಾ ವೈರಸ್ ದಾಳಿ, ಉಕ್ರೇನ್ ಮೇಲಿನ ಯುದ್ಧದಿಂದ ರಷ್ಯಾದಲ್ಲಿ ಜನಸಂಖ್ಯೆ ತೀವ್ರವಾಗಿ ಇಳಿದಿದೆ. ಯುದ್ಧದಲ್ಲಿ 50,000ದಷ್ಟು ಯೋಧರು ಮೃತಪಟ್ಟಿದ್ದಾರೆ. ಇದನ್ನು ಸರಿಮಾಡಿಕೊಳ್ಳಲು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಒಂದು ಕ್ರಮವನ್ನು ಘೋಷಿಸಿದ್ದಾರೆ. ಅದೇನು ಗೊತ್ತಾ?

ಯಾವುದೇ ಹೆಣ್ಣುಮಗಳು 10 ಮಕ್ಕಳಿಗೆ ಜನ್ಮ ನೀಡಿದರೆ ಹಾಗೂ ಅವರೆಲ್ಲ ಬದುಕಿ ಉಳಿದರೆ ತತ್‌ಕ್ಷಣ 13 ಲಕ್ಷ ರೂ. ನೀಡಲಾಗುತ್ತದೆ! ಇದು ಅಲ್ಲಿನ ಜನಸಂಖ್ಯೆ ಹೆಚ್ಚಿಸುವುದಕ್ಕೆ ತೀವ್ರ ಹತಾಶರಾಗಿ ಪುಟಿನ್ ಘೋಷಣೆ ಮಾಡಿರುವ ಕ್ರಮ. ಈ ಯೋಜನೆಗೆ ಅವರು 'ಮದರ್ ಹೀರೋಯಿನ್' ಎಂದು ಹೆಸರಿಟ್ಟಿದ್ದಾರೆ.

ಆದರೆ ಇದನ್ನು ಅಲ್ಲಿನ ರಾಜಕೀಯ ಮತ್ತು ಭದ್ರತಾ ತಜ್ಞ ಡಾ। ಜೆರೆಮಿ ಮ್ಯಾಥರ್ಸ್ ಟೀಕಿಸಿದ್ದಾರೆ. 10 ಮಕ್ಕಳನ್ನು ಹೆರಬೇಕು, 10ನೇ ಮಗುವಿಗೆ 1 ವರ್ಷ ತುಂಬಿದ ತತ್‌ಕ್ಷಣ 13 ಲಕ್ಷ ರೂ. ನೀಡಬೇಕು. ಆದರೆ ಈ ಹಣ ಬರಬೇಕಾದರೆ ಬಾಕಿ 9 ಮಕ್ಕಳು ಜೀವಂತವಿರಬೇಕು ಎಂಬ ಷರತ್ತೂ ಇದೆ. ಇಷ್ಟೆಲ್ಲದರ ನಡುವೆ ಈ ಹೆಣ್ಣುಮಕ್ಕಳು ತಮ್ಮ ಜೀವನ ನಿರ್ವಹಣೆಗೆ ಏನು ಮಾಡಬೇಕು? ಈ ಕಡಿಮೆ ಹಣದಲ್ಲಿ ಏನು ಸಾಧ್ಯ ಎಂಬ ಪ್ರಶ್ನೆಗಳನ್ನು ಜೆರೆಮಿ ಎತ್ತಿದ್ದಾರೆ. ಜತೆಗೆ ಇದು ರಷ್ಯಾದಲ್ಲಿ ಮತ್ತಷ್ಟು ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸಮಸ್ಯೆಗಳಿಗೆ ಕಾರಣವಾಗಲಿದೆ ಎಂದೂ ಅವರು ಆತಂಕ ವ್ಯಕ್ತಪಡಿಸಿದ್ದಾರೆ. **(ಉದಯವಾಣಿ: 19–8–2022)**

================================================================

## ಹಿಂಸೆಯಿಂದ ಲಾಭವಿಲ್ಲ

**ಅಮರಾವತಿ:** ಹಿಂಸೆಯಿಂದ ಯಾರಿಗೂ ಲಾಭ ಇಲ್ಲ, ಎಲ್ಲ ಸಮುದಾಯದವರೂ ಒಟ್ಟಾಗಿ ಜೀವಿಸಬೇಕಾಗಿದೆ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ. ಮಹಾರಾಷ್ಟ್ರದ ಅಮರಾವತಿಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾನವತೆಯನ್ನು ಎತ್ತಿ ಹಿಡಿಯಬೇಕಾದ ಹಾಲಿ ದಿನಗಳಲ್ಲಿ ಪ್ರಧಾನವಾಗಬೇಕಾಗಿದೆ ಎಂದಿದ್ದಾರೆ. ದೇಶದಲ್ಲಿ ಇತ್ತೀಚೆಗೆ ನಡೆದಿದ್ದ ಕೆಲವು ಅಹಿತಕರ ಘಟನೆಗಳ ಹಿನ್ನೆಲೆಯಲ್ಲಿ ಭಾಗವತ್ ಮಾತುಗಳು ಪ್ರಾಮುಖ್ಯ ಪಡೆದಿವೆ. ಹಿಂಸೆಯೇ ಪ್ರಧಾನವಾಗಿದ್ದ ವ್ಯವಸ್ಥೆ ಈಗ ನೇಪಥ್ಯಕ್ಕೆ ಸರಿಯುತ್ತಿದೆ ಎಂದು ಹೇಳಿದ್ದಾರೆ. **(ಉದಯವಾಣಿ: 29–4–222)**

================================================================

## 'ಪ್ರತೀ ಮಸೀದಿಯಲ್ಲೂ ಶಿವಲಿಂಗ ಹುಡುಕುವುದೇಕೆ?'

**ಹೊಸದಿಲ್ಲಿ:** 'ವಾರಾಣಸಿಯ ಜ್ಞಾನವಾಪಿ ಮಸೀದಿಯ ಬಗ್ಗೆ ನಮ್ಮಲ್ಲಿ ಅನನ್ಯ ಭಾವನೆಯಿದೆ. ಆ ಭಾವನೆಗೆ ಅನುಗುಣವಾಗಿ ಜ್ಞಾನವಾಪಿ ವಿಚಾರದಲ್ಲಿ ನಾವು ಕಾನೂನು ಹೋರಾಟ ಮಾಡುತ್ತಿರುವುದು ಸರಿಯಷ್ಟೆ. ಹಾಗೆಂದು ಎಲ್ಲ ಮಸೀದಿಗಳನ್ನು ವಿವಾದಕ್ಕೊಳಪಡಿಸುವುದು, ಎಲ್ಲಾ ಮಸೀದಿಗಳಲ್ಲಿ ಶಿವಲಿಂಗವನ್ನು ಹುಡುಕುವುದು ಸರಿಯಲ್ಲ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಮಹಾರಾಷ್ಟ್ರದ ನಾಗಪುರದಲ್ಲಿ ಆಯೋಜಿಸಲಾಗಿದ್ದ ಸಂಘ ಶಿಕ್ಷಾ ವರ್ಗದ 3ನೇ ವರ್ಷದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ದೇಶದ ಪ್ರತಿಯೊಂದು ಪ್ರಾರ್ಥನಾ ಸ್ಥಳಗಳ ಬಗ್ಗೆಯೂ ನಾವೊಂದು ಭಾವನೆಯನ್ನು ಇಟ್ಟುಕೊಂಡಿರುತ್ತೇವೆ. ಸುಖಾಸುಮ್ಮನೇ ಅವುಗಳ ಬಗ್ಗೆ ದಿನಕ್ಕೊಂದು ವಿವಾದ ಎಬ್ಬಿಸುವುದು ಸರಿಯಲ್ಲ. ಅಷ್ಟಕ್ಕೂ ವಿವಾದಗಳನ್ನು ನಾವೇಕೆ ಬೆಳೆಸಬೇಕು? ಎಂದು ಅವರು ಪ್ರಶ್ನಿಸಿದರು. 'ನಾವು ಇತಿಹಾಸವನ್ನು ಬದಲಾಯಿಸಲು ಸಾಧ್ಯವಿಲ್ಲ. ಪ್ರಾರ್ಥನಾ ಮಂದಿರಗಳ ಧ್ವಂಸ ಪ್ರಕರಣಗಳು, ಈಗಿರುವ ಮುಸ್ಲಿಮರು, ಹಿಂದೂಗಳು ನಡೆಸಿದ್ದಲ್ಲ. ನೂರಾರು ವರ್ಷಗಳ ಹಿಂದೆ ಹೊರಗಡೆಯಿಂದ ಬಂದು ಇಲ್ಲಿ ಆಳ್ವಿಕೆ ಮಾಡಿದವರು, ಭಾರತೀಯರು ಕಾಣುತ್ತಿದ್ದ ಸ್ವತಂತ್ರ ಭಾರತದ ಕನಸನ್ನು ನುಚ್ಚು ನೂರು ಮಾಡಲು ಹಾಗೂ ಅವರ ಆತ್ಮಬಲವನ್ನು ಉಡುಗಿಸಲು ದೇಗುಲಗಳನ್ನು ಧ್ವಂಸಗೊಳಿಸಿದರು. ಅದನ್ನು ಈಗ ಪುನಃ ಕೆದಕುವುದು ಸರಿಯಲ್ಲ ಎಂದು ಭಾಗವತ್ ಕಿವಿಮಾತು ಹೇಳಿದ್ದಾರೆ.

ಭಾಗವತ್ ಅವರ ಈ ಹೇಳಿಕೆ ದೇಶಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಕಾಂಗ್ರೆಸ್ ನಾಯಕ ಶಶಿ ತರೂರ್ ಹೇಳಿಕೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರೆ, ಮುಸ್ಲಿಂ ಮುಖಂಡರು ಇದು ಆರ್‌ಎಸ್‌ಎಸ್‌ನ ಇಬ್ಬಗೆಯ ನೀತಿಗೆ ಸಾಕ್ಷಿಯಾಗಿದೆ ಎಂದು ವ್ಯಂಗ್ಯವಾಡಿದ್ದಾರೆ.

**(ಉದಯವಾಣಿ: 4–6–2022)**

==========================================================

## ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ
### ಮೆಕ್ಸಿಕೊ ಚರ್ಚ್ ಮುಖ್ಯಸ್ಥನಿಗೆ ಅಮೆರಿಕದಲ್ಲಿ ಜೈಲು

**ವಾಶಿಂಗ್ಟನ್, ಜೂ. 9:** ಮೆಕ್ಸಿಕೊದಲ್ಲಿರುವ ಮೆಗಾ ಚರ್ಚೊಂದರ ಮುಖ್ಯಸ್ಥನಿಗೆ ಅಮೆರಿಕದಲ್ಲಿ 17 ವರ್ಷಗಳ ಜೈಲು ಶಿಕ್ಷೆವಿಧಿಸಲಾಗಿದೆ. ಮೂವರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪವನ್ನು ಅವರು ಎದುರಿಸುತ್ತಿದ್ದರು.

ಮೆಕ್ಸಿಕೊದ ಗ್ವಾಡಲಜರದಲ್ಲಿರುವ ಇವಾಂಜಲಿಕಲ್ ಚರ್ಚೊಂದರ ಮುಖ್ಯಸ್ಥ ನಾಸನ್ ಜೋಕ್ವಿನ್ ಗಾರ್ಸಿಯ ಕಳೆದ ವಾರ ತನ್ನ ಮೇಲಿದ್ದ ಆರೋಪಗಳಿಗೆ ಸಂಬಂಧಿಸಿ ತಪ್ಪೊಪ್ಪಿಕೊಂಡಿದ್ದರು. ಅವರು ಮೂರು ದಿನಗಳ ಬಳಿಕ, ಅತ್ಯಾಚಾರ ಹಾಗೂ ಮಾನವ ಕಳ್ಳಸಾಗಣೆ ಮತ್ತು ಮಕ್ಕಳ ನೀಲಿಚಿತ್ರದಲ್ಲಿ ಶಾಮೀಲಾತಿ ಸೇರಿದಂತೆ ಮಕ್ಕಳ ವಿರುದ್ಧದ ಅಪರಾಧಕ್ಕೆ ಸಂಬಂಧಿಸಿದ ಹಲವು ಆರೋಪಗಳಲ್ಲಿ ವಿಚಾರಣೆ ಎದುರಿಸುಬೇಕಾಗಿತ್ತು. ಲೈಂಗಿಕವಾಗಿ ಸಹಕರಿಸಬೇಕೆನ್ನುವ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ನೀವು ಶಾಶ್ವತ ಶಾಪಕ್ಕೆ ಒಳಗಾಗುವಿರಿ ಎಂಬುದಾಗಿ ಗಾರ್ಸಿಯ ಮತ್ತು ಚರ್ಚ್‌ನ ಇತರ ಸದಸ್ಯರ ಒಂದು ಗುಂಪು ಆ ಬಾಲಕಿಯರು ಮತ್ತು ಯುವತಿಯರಿಗೆ ಹೇಳುತ್ತಿತ್ತು ಎಂಬುದಾಗಿ ಪ್ರಾಸಿಕ್ಯೂಟರ್‌ಗಳು ಆರೋಪಿಸಿದ್ದಾರೆ. **(ವಾರ್ತಾಭಾರತಿ: 10–6–2022)**

==========================================================

## ಮುರುಘಾ ಶ್ರೀಗಳ ವಿರುದ್ಧ ಪ್ರಕರಣ ದಾಖಲು

**ಮೈಸೂರು/ಚಿತ್ರದುರ್ಗ, ಆ. 27: ಅಪ್ರಾಪ್ತ ವಯಸ್ಕ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಸಂಬಂಧ ಚಿತ್ರ–ದುರ್ಗದ ಮರುಘಾ ಶ್ರೀ ಸಹಿತ ಐವರ ವಿರುದ್ಧ ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಾಗಿದೆ.**

ಜಿಲ್ಲಾ ಮಕ್ಕಳ ರಕ್ಷಣ ಘಟಕದ ದೂರಿನನ್ವಯ ಮಠದ ಶ್ರೀ ಸಹಿತ ವಸತಿ ನಿಲಯದ ವಾರ್ಡನ್ ರಶ್ಮಿ, ಮಠದ ಮರಿಸ್ವಾಮಿ, ಪರಮಶಿವಯ್ಯ, ವಕೀಲ ಗಂಗಾಧರಯ್ಯ ಅವರ ವಿರುದ್ಧ ಪೋಕ್ಸೋ ಕಾಯಿದೆಯಡಿ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಮ್ಮ ಮೇಲೆ ಮಠದ ಆಡಳಿತದಲ್ಲಿರುವ ವಿದ್ಯಾರ್ಥಿ ನಿಲಯದಲ್ಲಿ ದೌರ್ಜನ್ಯ ಎಸಗಲಾಗಿದೆ ಎಂದು ಇಬ್ಬರು ವಿದ್ಯಾರ್ಥಿನಿಯರು ಮೈಸೂರಿನ ಮಕ್ಕಳ ವಸತಿ ಕೇಂದ್ರವಾದ ಒಡನಾಡಿ ಸಂಸ್ಥೆಯನ್ನು ಸಂಪರ್ಕಿಸಿದ್ದರು. ಆ ಸಂಸ್ಥೆ ಬಾಲಕಿಯರನ್ನು ಮೈಸೂರು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿತು. **(ಉದಯವಾಣಿ: 28–8–2022)**

==========================================================

## 57 ಲಕ್ಷ ಮಂದಿ ನಿರಾಶ್ರಿತರು, ಮಳೆಗೆ ತತ್ತರಿಸಿದ ಪಾಕಿಸ್ಥಾನ

**ಇಸ್ಲಾಮಾಬಾದ್: ಪಾಕಿಸ್ಥಾನದಲ್ಲಿ ಮಳೆಯ ಆರ್ಭಟ ಮುಂದುವರಿದಿದ್ದು, ಜನರ ಪರದಾಟವೂ ಹೆಚ್ಚಾಗಿದೆ. ದೇಶದಲ್ಲಿ ಒಟ್ಟು 3.3 ಕೋಟಿ ಜನರಿಗೆ ಮಳೆಯಿಂದಾಗಿ ಸಂಕಷ್ಟ ಎದುರಾಗಿದ್ದು, 982 ಮಂದಿ ಸಾವನ್ನಪ್ಪಿದ್ದಾರೆ. 1,456 ಮಂದಿ ಗಾಯಾಳುಗಳಾಗಿ ಆಸ್ಪತ್ರೆ ಸೇರಿದ್ದಾರೆ. ಶುಕ್ರವಾರ ಒಂದೇ ದಿನ 45 ಮಂದಿ ಮಳೆಯಿಂದಾಗಿ ಕೊನೆಯುಸಿರೆಳೆದಿದ್ದಾರೆ ಎಂದಿದೆ ಸರಕಾರ.**

**ಸರಿ ಸುಮಾರು 7 ಲಕ್ಷ ಮನೆಗಳು ನೀರಿನಲ್ಲಿ ಕೊಚ್ಚಿಹೋಗಿವೆ ಅಥವಾ ಹಾನಿಗೊಳಗಾಗಿವೆ. 57 ಲಕ್ಷಕ್ಕೂ ಅಧಿಕ ಮಂದಿ ನಿರಾಶ್ರಿತರಾಗಿದ್ದಾರೆ. 150 ಸೇತುವೆಗಳು ಮುರಿದುಬಿದ್ದಿವೆ. 3,000 ಕಿ.ಮೀ.ನಷ್ಟು ಉದ್ದದ ರಸ್ತೆಯು ಹಾಳಾಗಿದೆ ಎಂದೂ ಸರಕಾರ ಹೇಳಿದೆ. ಪ್ರವಾಹದಲ್ಲಿ ಸಿಲುಕಿರುವವರ ರಕ್ಷಣೆಗೆ ಪ್ರಧಾನಿ ಶೆಹಬಾಜ್ ಶರೀಫ್ ಅವರು ಸೇನೆಯನ್ನೂ ಬಳಸಿಕೊಳ್ಳುವುದಕ್ಕೆ ಆದೇಶಿಸಿದ್ದಾರೆ. ಸದ್ಯ ಪಾಕಿಸ್ಥಾನದ ಅರ್ಧ ಭಾಗ ನೀರಿನಲ್ಲಿ ಮುಳುಗಿದೆ ಎಂದು ಅಲ್ಲಿನ 'ಡಾನ್' ವೆಬ್‌ಸೈಟ್ ಶನಿವಾರ ವರದಿ ಮಾಡಿದೆ.**

**ನೆರೆ ಪೀಡಿತ ಪ್ರದೇಶಗಳಿಗೆ ಪ್ರಧಾನಿ ಶೆಹಬಾಜ್ ಷರೀಫ್, ಮಾಜಿ ಪ್ರಧಾನಿ ಇಮ್ರಾನ್ ಖಾನ್ ಸೇರಿ ಅನೇಕ ಗಣ್ಯರು ಮತ್ತು ಅಧಿಕಾರಿಗಳು ಭೇಟಿಕೊಟ್ಟು ಪರಿಶೀಲನೆ ನಡೆಸಿದ್ದಾರೆ. (ಉದಯವಾಣಿ: 28–8–2022)**

## ತಾಜ್ ಕೋಣೆಗಳಲ್ಲಿ ಹಿಂದೂ ವಿಗ್ರಹಗಳಿಲ್ಲ!

### ಭಾರತೀಯ ಪ್ರಾಚ್ಯವಸ್ತು ಇಲಾಖೆ ಸ್ಪಷ್ಟನೆ

**ಆಗ್ರಾ:** ವಿಶ್ವವಿಖ್ಯಾತ ತಾಜ್ ಮಹಲ್ ಮೂಲತಃ ಶಿವನ ದೇವಸ್ಥಾನ, ಅದರ ಹೆಸರು ತೇಜೋ ಮಹಾಲಯ ಎಂಬ ವಾದವೊಂದು ಜೋರಾಗಿ ನಡೆಯುತ್ತಿದೆ. ಈ ಬಗ್ಗೆ ಹಾಕಿದ್ದ ಅರ್ಜಿಯೊಂದನ್ನು ಅಲಹಾಬಾದ್ ಉಚ್ಚ ನ್ಯಾಯಾಲಯ ಇತ್ತೀಚೆಗಷ್ಟೇ ತಿರಸ್ಕರಿಸಿದೆ. ಇದರ ಬೆನ್ನಲ್ಲೇ ಭಾರತೀಯ ಪುರಾತತ್ವ ಇಲಾಖೆಯ (ಎಎಸ್ಐ) ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿ, ತಾಜ್ ಮಹಲ್‌ನೊಳಗಿನ ಮುಚ್ಚಿದ 22 ಕೋಣೆಗಳೊಳಗೆ ಹಿಂದೂ ದೇವರ ವಿಗ್ರಹಗಳಿಲ್ಲ. ಹಾಗೆಯೇ ಆ ಕೋಣೆಗಳನ್ನು ಶಾಶ್ವತವಾಗಿ ಮುಚ್ಚಿಲ್ಲ, ಕಾಲಕಾಲಕ್ಕೆ ತೆರೆದು ಕಟ್ಟಡದ ಸಂರಕ್ಷಣೆಗೆ ಅಗತ್ಯವಾದ ಕಾರ್ಯಗಳನ್ನು ಕೈಗೊಂಡು ಬರಲಾಗಿದೆ ಎಂದು ಹೇಳಿದ್ದಾರೆ.

ತಾಜ್ ಮಹಲ್ ಮೂಲತಃ ಶಿವನ ದೇವಸ್ಥಾನ ಎಂಬ ವಾದವನ್ನೂ ಎಎಸ್ಐ ಮೂಲಗಳು ಅಲ್ಲಗಳೆದಿವೆ. ತಾಜ್ ಮಹಲ್‌ನ ನೆಲಮಾಳಿಗೆಯಲ್ಲಿ ಒಟ್ಟು 100 ಸಾರ್ವಜನಿಕ ಕೋಣೆಗಳಿವೆ. ಇವುಗಳೆಲ್ಲ ವಿವಿಧ ವಿನ್ಯಾಸಗಳನ್ನು ಹೊಂದಿವೆ. ಅವುಗಳನ್ನು ಭದ್ರತಾ ಕಾರಣಗಳಿಗಾಗಿ ಮುಚ್ಚಲಾಗಿದೆ. ಜನರು ಅಲ್ಲೆಲ್ಲ ಪ್ರವೇಶಿಸಿ ಹಾಳು ಮಾಡಬಾರದೆನ್ನುವುದೇ ಇದರ ಹಿಂದಿನ ಕಾಳಜಿ ಎಂದಿದ್ದಾರೆ.

**ಸಾಕ್ಷಿ ಕೊಡಿ:** ತಾಜ್ ಮಹಲ್ ಜೈಪುರ ರಾಜ ಮನೆತನದ ಆಸ್ತಿ ಎನ್ನುವುದಕ್ಕೆ ಸಾಕ್ಷಿ ಕೊಡಿ ಎಂದು ಬಿಜೆಪಿ ಸಂಸದೆ ದಿವ್ಯಾ ಕುಮಾರಿಗೆ ಶಹಜಹಾನ್ ವಂಶಸ್ಥ ಯಾಕೂಬ್ ಹಬೀಬುದ್ದೀನ್ ತುಸಿ ಸವಾಲು ಹಾಕಿದ್ದಾರೆ. ನಿಮ್ಮಲ್ಲಿ ಒಂದು ತೊಟ್ಟು ರಜಪೂತ್ ರಕ್ತವಿದ್ದರೆ ನಿಮ್ಮ ಹೇಳಿಕೆಯನ್ನು ಸಾಬೀತು ಮಾಡಿ ಎಂದು ವಿಡಿಯೊ ಹೇಳಿಕೆಯಲ್ಲಿ ಅವರು ಕೆಣಕಿದ್ದಾರೆ. ಅಷ್ಟು ಮಾತ್ರವಲ್ಲ 14 ಮಂದಿ ರಜಪೂತ್ ರಾಣಿಯರನ್ನು ಮೊಘಲ ಸುಲ್ತಾನರು ಮದುವೆಯಾಗಿದ್ದರು. ತಮ್ಮ ಅಳಿಯಂದಿರಿಗೆ ರಜಪೂತರು ಜಾಗಗಳನ್ನು ದಾನವಾಗಿ ಕೊಡುವ ಪದ್ಧತಿ ಇಟ್ಟುಕೊಂಡಿದ್ದರು ಎಂದು ಹಬೀಬುದ್ದೀನ್ ಹೇಳಿದ್ದಾರೆ. **(ಉದಯವಾಣಿ 14–05–2022)**

===========================================================

## ವೀರ್ಯ, ಅಂಡಾಣು ಇಲ್ಲದೇ ಭ್ರೂಣ ಸೃಷ್ಟಿ!

**ಜೆರುಸಲೇಂ:** ವೈದ್ಯಕೀಯ ವಿಜ್ಞಾನದಲ್ಲಿನ ಮಹತ್ವದ ಮೈಲುಗಲ್ಲು ಎಂಬಂತೆ, ವಿಶ್ವದಲ್ಲೇ ಮೊದಲ ಬಾರಿಗೆ ಇಸ್ರೇಲ್‌ನ ವಿಜ್ಞಾನಿಗಳು 'ಗರ್ಭಕೋಶದ ಹೊರಗೆ ಸಂಶ್ಲೇಷಿತ ಭ್ರೂಣ'ವೊಂದನ್ನು ಅಭಿವೃದ್ಧಿಪಡಿಸಿದ್ದಾರೆ. ವೀರ್ಯವಿಲ್ಲದೇ, ಫಲಿತ ಅಂಡಾಣುವಿಲ್ಲದೇ, ಗರ್ಭಕೋಶವೂ ಇಲ್ಲದೇ ಭ್ರೂಣವನ್ನು ಸೃಷ್ಟಿಸುವ ಮೂಲಕ ವಿಜ್ಞಾನಿಗಳು ಅಚ್ಚರಿ ಮೂಡಿಸಿದ್ದಾರೆ.

ವೃತ್ತಾಕಾರದ ಪಾರದರ್ಶಕ ಪಾತ್ರೆಯೊಂದರಲ್ಲಿ ಬೀಜ ಕೋಶ (ಸ್ಟೆಮ್ ಸೆಲ್)ಗಳನ್ನು ಬಳಸಿಕೊಂಡು ಕೃತಕವಾಗಿ ಇಲಿಯೊಂದರ ಭ್ರೂಣವನ್ನು ಸೃಷ್ಟಿಸಲಾಗಿದೆ. ವಿಶೇಷವೆಂದರೆ, ಯಾವುದೇ ಫಲಿತ ಅಂಡಾಣುವನ್ನು ಬಳಸದೇ ಈ ಕೋಶಗಳನ್ನು ಅಭಿವೃದ್ಧಿಪಡಿಸುವ ಮೂಲಕ 'ಭ್ರೂಣದ ಸೃಷ್ಟಿಗೆ ವೀರ್ಯದ ಅಗತ್ಯವಿಲ್ಲ' ಎನ್ನುವುದನ್ನು ಈ ವಿಜ್ಞಾನಿಗಳು ಸಾರಿದ್ದಾರೆ. ಇಸ್ರೇಲ್‌ನ ವೈಸ್‌ಮನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಸಂಶೋಧಕರು ಈ ಸಾಧನೆ ಮಾಡಿದ್ದಾರೆ.

ಅನುಕೂಲಗಳೇನು?: ಈ ಆವಿಷ್ಕಾರದಿಂದಾಗಿ ಮುಂದಿನ ದಿನಗಳಲ್ಲಿ ಇದೇ ಸಂಶ್ಲೇಷಿತ ಭ್ರೂಣ ಮಾದರಿ ಬಳಸಿಕೊಂಡು ಇತರೆ ಅಂಗಾಂಶಗಳನ್ನು ಅಭಿವೃದ್ಧಿಪಡಿಸಬಹುದು. ನಂತರ ಇದನ್ನು ಅಂಗಾಂಗ ಜೋಡಣಾ ಶಸ್ತ್ರಚಿಕಿತ್ಸೆಯಲ್ಲಿ ಬಳಸಬಹುದಾಗಿದೆ.

### ಭ್ರೂಣ ಬೆಳೆದಿದ್ದು ಹೇಗೆ?

ವಿದ್ಯುನ್ಮಾನ ನಿಯಂತ್ರಿತ ಸಾಧನವೊಂದರಲ್ಲಿ ಈ ಬೀಜಕೋಶಗಳನ್ನು ಇಡುವ ಮುನ್ನ ಅವುಗಳನ್ನು ಸಂಶೋಧಕರು 3 ಗುಂಪುಗಳಾಗಿ ಪ್ರತ್ಯೇಕಿಸಿದ್ದರು. ಮೊದಲ ಗುಂಪನ್ನು ಇದ್ದ ಹಾಗೆಯೇ ಬಿಡಲಾಯಿತು. ಮತ್ತೆರಡು ಗುಂಪುಗಳನ್ನು 48 ಗಂಟೆಗಳ ಕಾಲ ಸಂಸ್ಕರಿಸಲಾಯಿತು. ನಂತರ ಎಲೆಕ್ಟ್ರಾನಿಕ್ ಸಾಧನದಲ್ಲಿ ಮೂರನ್ನೂ ಒಟ್ಟಿಗೆ ಮಿಶ್ರ ಮಾಡಿದಾಗ, ಬಹುತೇಕ ಕೋಶಗಳು ಸಮರ್ಪಕವಾಗಿ ಬೆಳೆಯಲಿಲ್ಲ. ಆದರೆ, ಸುಮಾರು ಶೇ.0.5ರಷ್ಟು ಅಂದರೆ 10 ಸಾವಿರದಲ್ಲಿ 50ರಷ್ಟು ಬೀಜಕೋಶಗಳು ಗೋಲಾಕೃತಿಗೆ ತಿರುಗಲು ಪ್ರಾರಂಭಿಸಿ, ನಂತರ ಭ್ರೂಣದ ಮಾದರಿಯ ರಚನೆಯಾಗಿ ಮಾರ್ಪಾಡಾದವು. ಭ್ರೂಣದ ಹೊರಪದರದಲ್ಲಿ ಹೊಕ್ಕುಳಬಳ್ಳಿ ಮತ್ತು ಪೊರೆಯ ಹಳದಿ ಚೀಲವೂ ಸೃಷ್ಟಿಯಾಗಿ ನೈಸರ್ಗಿಕ ಭ್ರೂಣದ ಆಕಾರವನ್ನು ಪಡೆದವು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. **(ಉದಯವಾಣಿ: 05–08–2022)**

===========================================================

## ಬಿಷಪ್ ಮನೆ ಮೇಲೆ ಇ.ಡಿ. ದಾಳಿ

### ವೈದ್ಯಕೀಯ ಕಾಲೇಜಿಗೆ ಪ್ರವೇಶ ವೇಳೆ ಹಣಕಾಸು ಆರೋಪ

**ತಿರುವನಂತಪುರ:** ಕೇರಳದ ಸಿಎಸ್ಐ ಚರ್ಚ್‌ನ ನಿರ್ವಾಹಕ ಮತ್ತು ದಕ್ಷಿಣ ಕೇರಳ ಡಯೋಸಿಸ್ (ಎಸ್‌ಕೆಡಿ) ಬಿಷಪ್ ಎ. ಧರ್ಮರಾಜ್ ರಸಲಂ ಅವರ ಮನೆ ಮತ್ತು ಕಚೇರಿಗಳ ಮೇಲೆ ಕೊಚ್ಚಿಯ ಜಾರಿ ನಿರ್ದೇಶನಾಲಯ ಕಚೇರಿಯ ಅಧಿಕಾರಿಗಳು ದಾಳಿ ಮಾಡಿದ್ದಾರೆ.

ಡಯೋಸಿಸ್‌ನ ಅಡಿಯಲ್ಲಿ ಬರುವ ವೈದ್ಯಕೀಯ ಕಾಲೇಜಿಗೆ ಪ್ರವೇಶ ನೀಡಲು ಕ್ಯಾಪಿಟೇಶನ್ ಶುಲ್ಕವನ್ನು ಪಡೆದಿರುವ ಮತ್ತು ದತ್ತಿಗಾಗಿ ಸಂಗ್ರಹಿಸಲಾದ ಮೊತ್ತವನ್ನು ದುರ್ಬಳಕೆ ಮಾಡಿಕೊಂಡಿರುವ ಆರೋಪದ ಮೇಲೆ ಬಿಷಪ್ ಮನೆ, ಕಚೇರಿಗಳಲ್ಲಿ ಮ್ಯಾರಥಾನ್ ಶೋಧ ಕಾರ್ಯ ನಡೆಸಲಾಗಿದೆ.

ಒಟ್ಟು 13 ಗಂಟೆಗಳ ಕಾಲ ಈ ಕಾರ್ಯಾಚರಣೆ ನಡೆದಿದ್ದು, ಇವರ ಮನೆ, ಕಚೇರಿ ಮಾತ್ರವಲ್ಲದೇ, ಏಕಕಾಲಕ್ಕೆ ಸಿಎಸ್ಐ ಮೆಡಿಕಲ್

ಕಾಲೇಜು ನಿರ್ದೇಶಕ ಡಾ. ಬೆನ್ನೆಟ್ ಅಬ್ರಹಾಂ, ಡಯೋಸಿಸ್ ಆಡಳಿತಾತ್ಮಕ ಕಾರ್ಯದರ್ಶಿ ಟಿಟಿ ಪ್ರವೀಣ್ ಅವರ ಮನೆಗಳ ಮೇಲೂ ದಾಳಿ ನಡೆಸಲಾಗಿದೆ. ಈ ವೇಳೆ ಬಿಷಪ್ ಪರ ಮತ್ತು ವಿರೋಧಿಗಳ ಗುಂಪು ಅವರ ಮನೆಯ ಮುಂಭಾಗದಲ್ಲಿ ಭಾರೀ ಸಂಖ್ಯೆಯಲ್ಲಿ ನೆರೆದು, ಪರಸ್ಪರ ಪರ–ವಿರೋಧ ಘೋಷಣೆಗಳನ್ನೂ ಕೂಗಿದ್ದಾರೆ.

### ಆರ್ಚ್ ಬಿಷಪ್ ರಾಜೀನಾಮೆ ಕೇಳಿದ ವ್ಯಾಟಿಕನ್

ಸಾಮೂಹಿಕ ಪ್ರಾರ್ಥನೆ (ಮಾಸ್) ವೇಳೆ ಸಮಾನ ವಿಧಾನವನ್ನು ಪಾಲಿಸುವಂತೆ ಸೂಚಿಸಿದ್ದರೂ ಅದನ್ನು ಜಾರಿ ಮಾಡಿಲ್ಲ ಎಂಬ ಕಾರಣಕ್ಕಾಗಿ ವ್ಯಾಟಿಕನ್ ಕೇರಳದ ಎರ್ನಾಕುಳಂ ಆರ್ಚ್‌ಬಿಷಪ್ ಆ್ಯಂಟನಿ ಕರಿಯಿಲ್ ಅವರ ರಾಜೀನಾಮೆ ಕೇಳಿದೆ. ವ್ಯಾಟಿಕನ್‌ನಡಿ ಬರುವ ಪ್ರಮುಖ ಚರ್ಚುಗಳಲ್ಲಿ ಒಂದಾದ ಕೇರಳ ಮೂಲದ ಸೈರೋ ಮಲಬಾರ್ ಚರ್ಚ್ ಕಳೆದ ವರ್ಷದ ನವೆಂಬರ್‌ನಿಂದಲೇ ಎಲ್ಲ ಡಯೋಸಿಸ್‌ನಲ್ಲೂ ಸಮಾನ ಮಾದರಿಯ ಮಾಸ್ ಅನ್ನು ಪರಿಚಯಿಸಿತ್ತು. ಆದರೆ, ಅದನ್ನು ಪಾಲಿಸದ ಕಾರಣ ಕರಿಯಿಲ್‌ರನ್ನು ತೆಗೆದುಹಾಕಲು ವ್ಯಾಟಿಕನ್ ನಿರ್ಧರಿಸಿದೆ. **(ಉದಯವಾಣಿ: 21–07–2022)**

==============================================================

## ಸರಕಾರಿ ನೌಕರಿ ಆಮಿಷ ಅಲ್ಲಮಪ್ರಭು ಹಿರೇಮಠ ಶ್ರೀ ಸೆರೆ

**ಮೂಡಲಗಿ, ಆ. 19:** ಸರಕಾರಿ ನೌಕರಿ ಮಾಡಿಸಿಕೊಡುವುದಾಗಿ ಹೇಳಿ ಅಮಾಯಕರಿಗೆ ಕೋಟ್ಯಂತರ ರೂ. ವಂಚಿಸಿದ್ದ ಆರೋಪದಲ್ಲಿ ತಾಲೂಕಿನ ಹಳ್ಳೂರ ಗ್ರಾಮದ ಅಲ್ಲಮಪ್ರಭು ಹಿರೇಮಠ ಸ್ವಾಮೀಜಿಯನ್ನು ಬಂಧಿಸಲಾಗಿದೆ. ಹಣಕಾಸು ವ್ಯವಹಾರ, ಮೋಸ, ವಂಚನೆ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರಿಗೆ ಬೇಕಾಗಿದ್ದ ಇವರು ತಲೆಮರೆಸಿಕೊಂಡಿದ್ದರು. **(ಉದಯವಾಣಿ: 20–08–2022)**

==============================================================

## ಕುರಾನ್ ಮೇಲೆ ಕೃತಿಸ್ವಾಮ್ಯ ಸಾಧ್ಯವಿಲ್ಲ

**ಹೊಸದಿಲ್ಲಿ:** ಕುರಾನ್ ಮತ್ತು ಇಸ್ಲಾಂನ ಯಾವುದೇ ಧಾರ್ಮಿಕ ಹಾಗೂ ಪವಿತ್ರ ಗಂಥಗಳ ಮೇಲೆ ಯಾರೂ ಕೃತಿಸ್ವಾಮ್ಯವನ್ನು ಹೊಂದುವ ಹಾಗಿಲ್ಲ ಎಂದು ಹೊಸದಿಲ್ಲಿಯ ಜಿಲ್ಲಾ ಕೋರ್ಟ್ ಬುಧವಾರ ಅಭಿಪ್ರಾಯಪಟ್ಟಿದೆ. ಜತೆಗೆ ಅರ್ಜಿದಾರರಿಗೆ 50 ಸಾವಿರ ರೂ. ದಂಡವನ್ನೂ ವಿಧಿಸಿದೆ. 'ಪವಿತ್ರ ಕುರಾನ್ ಮತ್ತು ಹದೀಸ್ ಸೇರಿದಂತೆ ಇಸ್ಲಾಂನ ಪವಿತ್ರ ಗ್ರಂಥಗಳಲ್ಲಿ ಇರುವ ಅಂಶಗಳು ಒಂದೇ ರೀತಿಯಾಗಿ ಇರಬೇಕು. ಧಾರ್ಮಿಕ ನಂಬಿಕೆಗಳು ಮತ್ತು ಅವುಗಳನ್ನು ಪಾಲಿಸುವ ಬಗೆಗೆ ಇರುವ ನಿಯಮಗಳು ಒಂದೇ ರೀತಿಯಾಗಿ ಇರಬೇಕು. ಅಂಥ ಗ್ರಂಥಗಳ ಮೇಲೆ ಯಾರೂ ಕೂಡ ಕೃತಿಸ್ವಾಮ್ಯ ಹೊಂದಿರಬಾರದು' ಎಂದು ನ್ಯಾಯಾಧೀಶ ಸಂಜೀವ ಕುಮಾರ್ ಅಗರ್ವಾಲ್ ಹೇಳಿದ್ದಾರೆ. ಹೊಸದಿಲ್ಲಿಯ ಇಸ್ಲಾಮಿಕ್ ಬುಕ್ ಸರ್ವಿಸಸ್ ಪ್ರೈ ಲಿಮಿಟೆಡ್ ಎಂಬ ಪ್ರಕಾಶನ ಸಂಸ್ಥೆ ಈ ಬಗ್ಗೆ ಕೋರ್ಟ್ ಮೆಟ್ಟಿಲೇರಿತ್ತು. **(ಉದಯವಾಣಿ: 04–08–2022)**

==============================================================

## ತಂದೆಯ ಇಚ್ಛೆ ಪೂರೈಕೆ

**ಉತ್ತರಾಖಂಡದಲ್ಲಿ ಇಬ್ಬರು ಹಿಂದೂ ಸಹೋದರಿಯರು ಮುಸ್ಲಿಂ ಸಮುದಾಯಕ್ಕೆ ತಮ್ಮ 2.50 ಎಕರೆ ಜಮೀನು ನೀಡಿದ್ದಾರೆ. ಉತ್ತರಾಖಂಡದ ಕಾಶೀಪುರದಲಿ ಈ ಘಟನೆ ನಡೆದಿದೆ. ಈ ಮೂಲಕ ಅವರು ತಮ್ಮ ಅಸುನೀಗಿದ ತಂದೆಯ ಬಯಕೆ ಈಡೇರಿಸಿದ್ದಾರೆ. 20 ವರ್ಷಗಳ ಹಿಂದೆ ಆ ಸಹೋದರಿಯರ ತಂದೆ ಜಮೀನು ನೀಡುವ ಇಚ್ಛೆ ವ್ಯಕ್ತಪಡಿಸಿದ್ದರು. 2003ರ ಜನವರಿಯಲ್ಲಿ ಅವರು ನಿಧನರಾಗಿದ್ದರು.**

**(ಉದಯವಾಣಿ: 05–05–2022)**

==============================================================

## ಅಪ್ಪ, ಅಮ್ಮನಿಗಾಗಿ 17 ಕೋಟಿ ರೂ. ವೇತನಕ್ಕೆ ಗುಡ್ ಬೈ

### ಮಾದರಿ ಮಗ ಎನಿಸಿದ ಲಂಡನ್ ಕಂಪನಿಯೊಂದರ ಸಿಇಒ ಆ್ಯಂಡ್ರ್ಯೂ

**ಲಂಡನ್:** ಅಪ್ಪ– ಅಮ್ಮನ ಆಶ್ರಯದಲ್ಲಿ ಬೆಳೆದು ಬದುಕು ಕಟ್ಟಿಕೊಳ್ಳುವ ಮಕ್ಕಳು ಒಂದೊಳ್ಳೆ ಸ್ಥಾನಗಳಿಗೆ ಬಂದ ಮೇಲೆ ಅದೇ ಹೆತ್ತವರನ್ನು ಫುಟ್‌ಪಾತ್‌ಗೆ ಅಟ್ಟಿರುವ ಅನೇಕ ಪ್ರಸಂಗಗಳಿವೆ. ಆದರೆ ಲಂಡನ್‌ನ ಕಂಪೆನಿಯ ಉನ್ನತಾಧಿಕಾರಿ ಇಳಿ ವಯಸ್ಸಿನ ತಮ್ಮ ಅಪ್ಪ–ಅಮ್ಮನ ಜತೆಗೆ ಇರಬೇಕೆಂಬ ಉದ್ದೇಶದಿಂದಲೇ ವಾರ್ಷಿಕವಾಗಿ ಸುಮಾರು 17 ಕೋಟಿ ರೂ. ಸಂಬಳವಿರುವ ತಮ್ಮ ಹುದ್ದೆಯನ್ನು ತೊರೆದಿದ್ದಾರೆ!

ಇಂಥದ್ದೊಂದು ನಿರ್ಧಾರ ಕೈಗೊಳ್ಳುವ ಮೂಲಕ ಲಂಡನ್‌ನ ಜ್ಯೂಪಿಟರ್ ಫಂಡ್ ಮ್ಯಾನೇಜ್ಮೆಂಟ್ ಎಂಬ ಕಂಪೆನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿರುವ (ಸಿಇಒ) ಆ್ಯಂಡ್ರೂ ಫಾರ್ಮಿಕಾ ಈಗ ಸುದ್ದಿಯಾಗಿದ್ದಾರೆ! ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿಯಾಗಿದ್ದು, ಅ. 1ರಂದು ತಾವು ಕಂಪೆನಿ ಬಿಡುವುದಾಗಿ ತಿಳಿಸಿದ್ದಾರೆ. ತಮ್ಮ ಅಪ್ಪ–ಅಮ್ಮನ ಜತೆಗೆ ಕಾಲ ಕಳೆಯಲು, ಸಮುದ್ರದ ದಂಡೆಗಳಲ್ಲಿ ನಿಶ್ಚಿಂತೆಯಿಂದ ಇರಲು ತೀರ್ಮಾನಿಸಿ ಕೆಲಸ ಬಿಡುತ್ತಿರುವುದಾಗಿ ಅವರು ರಾಜೀನಾಮೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. 2019ರಲ್ಲಿ ಜ್ಯೂಪಿಟರ್ ಕಂಪೆನಿಯ ಸಿ.ಇ.ಒ ಆಗಿ ನೇಮಕಗೊಂಡಿದ್ದ ಅವರಿಗೆ ಕಂಪೆನಿಯು ಇಲ್ಲಿಯವರೆಗೆ 53 ಕೋಟಿ ರೂ. ಗಳನ್ನು (ವರ್ಷಕ್ಕೆ ಸರಾಸರಿ 17.66 ಕೋಟಿ ರೂ.) ವೇತನ ರೂಪದಲ್ಲಿ ನೀಡಿದೆ. **(ಉದಯವಾಣಿ: 30–06–2022)**

# ಪ್ರಶ್ನೋತ್ತರ

ಪ್ರ: ಕೆ. ಎ. ಬಶೀರ್ ಮೌಲವಿ ಕಲ್ಲೆಗ (ವಿದ್ಯಾರ್ಥಿ, ಪುಚ್ಚತ್ತಬೈಲ್ ದರ್ಸ್), ಯು. ಕೆ. ಯೂಸುಫ್ ಮೌಲವಿ, ಮಠ (ವಿದ್ಯಾರ್ಥಿ, ಸ. ಅ. ಕಾಲೇಜು, ಕಲ್ನಾಡ್), ಅಬುಬಕ್ಕರ್, ಸುಳ್ಯ ಮತ್ತು ಇತರರು.


* 1990ರ ಮೇ – ಜೂನ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ 'ದೇವನೊಬ್ಬನೇ' ಎಂಬ ಲೇಖನದಲ್ಲಿ ಶ್ರೀ ಕೃಷ್ಣನನ್ನು ಪ್ರವಾದಿ ಎಂದು ಚಿತ್ರಿಸಲಾಗಿದೆ. ಇದಕ್ಕೆ ಅನ್ವರ್ಥವಾಗುವಂತೆ "ಕಾನ ಫಿಲ್‌ಹಿಂದಿ ನಬಿಯ್ಯುನ್, ಅಸ್ವದುಲ್ಲವ್‌ನ್, ಇಸ್ಮುಹು ಕಾಹಿನಾ" ಎಂಬ ಒಂದು ಹದೀಸನ್ನು ಉಲ್ಲೇಖಿಸಲಾಗಿದೆ. ಈ ಹದೀಸ್ ಎಲ್ಲಿದೆ? ಯಾವ ಗ್ರಂಥದಲ್ಲಿದೆ? ಈ ಬಗ್ಗೆ ನಿಮ್ಮ ಅಭಿಪ್ರಾಯವೇನು? ದಯವಿಟ್ಟು ಉತ್ತರಿಸುತ್ತೀರಾ?

ಉ: ಈ ಹದೀಸಿನ ಕುರಿತು ಜಿಲ್ಲೆಯ ಪ್ರಮುಖ ಪಂಡಿತರಲ್ಲಿ ಚರ್ಚಿಸಿದ್ದೇನೆ. ಓರ್ವ ಪಂಡಿತರ ಅಭಿಪ್ರಾಯದಲ್ಲಿ ಪ್ರಸ್ತುತ ಹದೀಸ್ ದೈಲಮಿ ಮತ್ತು ಫಿರ್‌ದವುಸುಲ್ ಅಖ್‌ಬಾರ್ ಎಂಬ ಗ್ರಂಥಗಳಲ್ಲಿ ಇದೆ.

* ಭಾರತಕ್ಕೆ ಪ್ರವಾದಿಗಳ ಆಗಮನವಾಗಿದೆ (ಅಂದರೆ ಇಲ್ಲಿಯ ಹಿಂದಿನ ಸಮುದಾಯಕ್ಕೆ ಪ್ರವಾದಿಯರ ಅವತಾರವಾಗಿದೆ) ಎಂಬುದಕ್ಕೆ ಯಾವುದಾದರೂ ಕುರ್‌ಆನ್ ಸೂಕ್ತಗಳಲ್ಲಿ ಸೂಚನೆಗಳಿವೆಯೇ?

ಉ: ಭಾರತದ ಹೆಸರೆತ್ತದಿದ್ದರೂ "ವಲಕ್ವದ್ ಬಅಸ್‌ನಾ ಫೀಕುಲ್ಲಿ ಉಮ್ಮತಿನ್ ರಸೂಲನ್:..." ಅರ್ಥಾತ್ "ಏಕ ದೇವನಾದ ಅಲ್ಲಾಹನನ್ನು ಮಾತ್ರವೇ ಆರಾಧಿಸಬೇಕೆಂಬ ಉಪದೇಶದೊಂದಿಗೆ ನಾವು ಪ್ರತಿಯೊಂದು ಸಮುದಾಯಕ್ಕೂ ಪ್ರವಾದಿಯನ್ನು ಕಳುಹಿಸಿದ್ದೇವೆ" (ಪಾ|ಕು| 16–37) ಎಂಬ ಪವಿತ್ರ ಕುರ್‌ಅನಿನ ವ್ಯಾಖ್ಯಾನದಿಂದ ಭಾರತದ ಹಿಂದಿನ ಜನತೆ (ಸಮುದಾಯ)ಗೂ ಪ್ರವಾದಿಯ ಅವತಾರವಾಗಿರಬಹುದು ಎಂಬುದನ್ನು ಮನಗಾಣಬಹುದು. **(ತವನಿಧಿ 1991 ಮಾರ್ಚ್)**

**(ತವನಿಧಿ ಸಂಪಾದಕರು: ಬಿ.ಎಂ. ಇಚ್ಲಂಗೋಡ್. ಪ್ರಶ್ನೋತ್ತರ ಮಾಲಿಕೆ ಉತ್ತರಿಸುವವರು: ಮೌಲವಿ ಎಸ್ಲಂ ಸಜೀಪ, ಸಜೀಪನಡು)**




AHMADIYYA
MUSLIM COMMUNITY
Press & Media Office

**Statement of the World Head of the Ahmadiyya Muslim Community**

Upon the demise of Her Majesty, Queen Elizabeth II, the World Head of the Ahmadiyya Muslim Community, **His Holiness, Hazrat Mirza Masroor Ahmad** has said:

*"The death of Her Majesty, Queen Elizabeth II is a truly great loss for the United Kingdom and Commonwealth. Ahmadi Muslims will remain forever grateful for the way Her Majesty served her people with immense dignity, grace and unwavering dedication throughout her long reign.*

*On behalf of the worldwide Ahmadiyya Muslim Community, I wish to express our most sincere condolences to His Majesty, King Charles III, the members of the Royal family and to the nation. May God Almighty grant them all the patience and strength to deal with this tremendous loss."*

WWW.PRESSAHAMDIYYA.COM

# ಹಳ್ಳಿಯ ಚೈತನ್ಯ




ವಾರಂಗಲ್ ಜಿಲ್ಲೆಯ ರಾಯಪರ್ತಿ ಮಂಡಲದ ಕಾತ್ರಪಲ್ಲಿ ಗ್ರಾಮದ ದರ್ಗಾ ಪಾಷಾ ಮುಹಮ್ಮದ್ (ಜಾವೇದ್ ಅಹಮದ್) ಅವರು ಹೈದರಾಬಾದ್‌ನ ಶ್ರೀ ಪೊಟ್ಟಿ ಶ್ರೀರಾಮುಲು ವಿಶ್ವವಿದ್ಯಾನಿಲಯದಿಂದ ಎಂ.ಫಿಲ್ ಭಾಷಾಶಾಸ್ತ್ರದಲ್ಲಿ ಕರ್ನಾಟಕದ ಪರೋಪಕಾರಿ ಮತ್ತು ಶಿಕ್ಷಣತಜ್ಞ ಶ್ರೀ ಎಂ.ಎಸ್.ರಾಮಯ್ಯ ಅವರ ಚಿನ್ನದ ಪದಕವನ್ನು ಪಡೆದಿದ್ದಾರೆ.

ಅವರು ಡಾ.ಜಿ.ವೈ. ಗೇಬ್ರಿಯಲ್ ಅವರ ಮೇಲ್ವಿಚಾರಣೆಯಲ್ಲಿ 'ಪ್ರವಾದಿ ಮುಹಮ್ಮದ್ ಅವರ ಜೀವನಚರಿತ್ರೆಯ ವಿಶ್ಲೇಷಣೆ' ಎಂಬ ವಿಷಯದ ಕುರಿತು ಎಂ.ಫಿಲ್ ಪದವಿ ಮತ್ತು ಚಿನ್ನದ ಪದಕ, ಜುಲೈ 20ರಂದು ಬುಧವಾರ ರವೀಂದ್ರ ಭಾರತಿಯಲ್ಲಿ ರಾಜ್ಯಪಾಲರಾದ ಡಾ. ತಮಿಳಿಸೈ ಸೌಂದರ ರಾಜನ್ ಅವರ ಕೈಯಿಂದ ಸ್ವೀಕರಿಸಿದ್ದಾರೆ. ವಾರಂಗಲ್ ಗ್ರಾಮಾಂತರ ಜಿಲ್ಲೆ ರಾಯಪರ್ತಿ ಮಂಡಲದ ಕಾತ್ರಪಲ್ಲಿ ಗ್ರಾಮದ ದರ್ಗಾ ಪಾಷಾ ಅವರದು ಬಡ ಕುಟುಂಬ. ಅವರು ಬಾಲ್ಯದಲ್ಲಿ ತಮ್ಮ ತಂದೆಯನ್ನು ಕಳೆದುಕೊಂಡರು. ಅವರು ತಮ್ಮ ತಾಯಿ ಮೆಹರುನ್ನೀಸಾ ಅವರ ಆರೈಕೆಯಲ್ಲಿ ಬೆಳೆದರು. ಪ್ರಾಥಮಿಕ ಶಿಕ್ಷಣ ಹಳ್ಳಿಯಲ್ಲಿಯೇ ನಡೆಯುತ್ತಿತ್ತು. 10ನೇ ತರಗತಿಯ ನಂತರ, ಅವರು ಧಾರ್ಮಿಕ ಶಿಕ್ಷಣವನ್ನು ಕಲಿಯಲು ಪಂಜಾಬ್ ರಾಜ್ಯದ ಖಾದಿಯಾನ್ ಗ್ರಾಮಕ್ಕೆ ಹೋದರು ಮತ್ತು ಮೂರು ವರ್ಷಗಳ ಕಾಲ ಜಮೀಯತುಲ್ ಮುಬಶ್ಶಿರೀನ್ ಕಾಲೇಜಿನಲ್ಲಿ ಅಧ್ಯಯನ ಮಾಡಿದರು ಮತ್ತು ಆಂಧ್ರ ಮತ್ತು ತೆಲಂಗಾಣ ಪ್ರದೇಶದ ವಿವಿಧ ಗ್ರಾಮಗಳಲ್ಲಿ ಧಾರ್ಮಿಕ ಬೋಧನೆಗಳನ್ನು ಮಾಡುತ್ತಿದ್ದರು. ದರ್ಗಾ ಪಾಷಾ ಅಹ್ಮದಿಯಾ ಮುಸ್ಲಿಂ ಸಮುದಾಯಕ್ಕೆ ಸೇರಿದವರು ಎಂಬುದು ಗಮನಾರ್ಹ.

==========================================================



**ಕೂಡಾಳಿ:** ಕೂಡಾಳಿ ಜಮಾಅತಿನ ಅನಸ್ ಅಹ್ಮದ್ ಮತ್ತು ಖಾನಿತ ಸಿದ್ದೀಖ ದಂಪತಿಯ ಪುತ್ರ ಇಮ್ರಾನ್ ಅಹ್ಮದ್ – 9 ವರ್ಷ ("ಯುಗರಶ್ಮಿ" ಸಂಪಾದಕರ ಮೊಮ್ಮಗ) ಕಳೆದ ರಮಝಾನ್ ಮಾಸದಲ್ಲಿ ಖುರ್‌ಆನ್ ಪಾರಾಯಣ ಪೂರ್ತಿ ಮಾಡಿದ್ದಾನೆ. ನಮಾಝ್ ಹಾಜರಿಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾನೆ. ಮಜ್ಲಿಸ್ ಅತ್‌ಫಾಲುಲ್ ಅಹ್ಮದಿಯಾ ಜಿಲ್ಲಾ ಇಜ್ತಿಮಾದಲ್ಲಿ ಅರಬಿ ಖಸೀದ ಕಂಠಪಾಠ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾನೆ. ಬೆಸ್ಟ್ ತಿಫ್ಲ್ ಎಂದು ಗಣಿಸಲ್ಪಟ್ಟಿದ್ದಾನೆ. ಮಾಶಾ ಅಲ್ಲಾಹ್.

==========================================================



**ಕೊಯಂಬತ್ತೂರ್:** ಕೊಯಂಬತ್ತೂರ್ ಜಮಾಅತಿನ ಝುಬೈರ್ ಅಹ್ಮದ್ ಮತ್ತು ಹಾಜಿರ ಸಾದಿಕ ದಂಪತಿಯ ಪುತ್ರಿ ಖುದ್‌ಸಿಯ – 10 ವರ್ಷ ("ಯುಗರಶ್ಮಿ" ಸಂಪಾದಕರ ಮೊಮ್ಮಗಳು) ಕಳೆದ ರಮಝಾನ್ ಮಾಸದಲ್ಲಿ ಖುರ್‌ಆನ್ ಪಾರಾಯಣ ಪೂರ್ತಿ ಮಾಡಿದ್ದಾಳೆ. ಮಾಶಾ ಅಲ್ಲಾಹ್.

==========================================================

24ನೇ ಪುಟದಿಂದ – **ದೇವಾಸ್ತಿತ್ವದ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯಗಳು**

ಕಾರ್ಯಕಾರಣ ವ್ಯವಸ್ಥೆಯಿಂದ ಕೂಡಿವೆಯೆಂಬ ವಿಚಾರ ಸೂಕ್ಷ್ಮವಾಗಿ ಪರಿಶೀಲಿಸಿದರೆ ಕಾಣಬಹುದಾಗಿದೆ. ಈ ವ್ಯವಸ್ಥೆಯ ಸಾರ್ವತ್ರಿಕವಾದ ಪ್ರವರ್ತನೆಯೇ ನಾವು ಕಾಣುವ ವಿವಿಧ ವೈಜಾನಿಕ ಹಾಗೂ ತತ್ವಜ್ಞಾನಗಳ ಸೃಷ್ಟಿಗೂ ಬೆಳವಣಿಗೆಗೂ ಕಾರಣವಾಗಿದೆ. ಸೃಷ್ಟಿ ಲೋಕದ ಯಾವ ಅಂಶವೂ ಈ ಕಾರ್ಯಕಾರಣ ಸಂಬಂಧದ ವ್ಯವಸ್ಥೆಯಿಂದ ಹೊರತಾಗಿಲ್ಲ. ಕೆಲವು, ಇನ್ನು ಕೆಲವಕ್ಕೆ ಮೂಲ ಕಾರಣವಾಗಿಯೂ ಕೆಲವು, ಶಾಖೆಗಳಾಗಿಯೂ ಇರುತ್ತವೆ. ಆದಿಕಾರಣ ಹೊರತು ಪ್ರತಿಯೊಂದು ಕಾರ್ಯವೂ ಮತ್ತೊಂದು ಕಾರಣವನ್ನು ಅವಲಂಬಿಸಿದೆ. ಆ ಕಾರಣವು ಇನ್ನೊಂದು ಕಾರ್ಯದ ಪರಿಣಾಮವಾಗಿದೆ. ಹೀಗೆ ಈ ಕಾರ್ಯಕಾರಣ ಸರಣಿ ಹಿಂದಕ್ಕೆ ಹೋಗುತ್ತಲಿರುತ್ತದೆ. ಆದರೆ ಅನಂತವಲ್ಲದ ಈ ಪ್ರಪಂಚದಲ್ಲಿ ನಡೆಯುತ್ತಿರುವ ಈ ಕಾರ್ಯಕಾರಣ ಸರಣಿ ಅನಂತವಾಗಿರಲು ಅಸಾಧ್ಯವಾದುದರಿಂದ ಅದು ಎಲ್ಲಿಯಾದರೂ ಒಂದುಕಡೆ ಕೊನೆಗೊಳ್ಳಲೇಬೇಕಾಗಿದೆ. ಹೀಗೆ ಅತ್ಯಂತ ಕೊನೆಯ ಆ ಕಾರಣ ಪ್ರಪಂಚದ ಸೃಷ್ಟಿಕರ್ತನಾಗಿದ್ದಾನೆ. 'ಎಲ್ಲ ಕಾರ್ಯಕಾರಣ ಸರಣಿಗಳು ನಿನ್ನ ಪ್ರಭುವಿನಲ್ಲಿ ಕೊನೆಗೊಳ್ಳುತ್ತವೆ' ಎಂಬ ಪವಿತ್ರ ಖುರ್‌ಆನಿನ ವಚನ ಈ ಅಂತಿಮ ಕಾರಣದೆಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ." (ಇಸ್ಲಾಮೀ ಉಸೂಲ್ ಕಿ ಫಲಾಸಫೀ – ಇಸ್ಲಾಂ ಧರ್ಮ ತತ್ವಜ್ಞಾನ 1993 ಪುಟ 73).

**(ಮುಂದುವರಿಯುವುದು)**

ನಿಧನ ವಾರ್ತೆಗಳು

## ಜನಾಬ್ ನಸೀಂ ಮಹ್‌ದಿ ಸಾಹಿಬ್



ಮುಬಲ್ಲಿಗ್‌ರಾದ ನಸೀಂ ಮಹ್‌ದಿ ಸಾಹಿಬ್ ಮೇ 24ರಂದು ತನ್ನ 69ನೇ ವಯಸ್ಸಿನಲ್ಲಿ ನಿಧನರಾದರು – ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. 1976ರಲ್ಲಿ ಜಾಮಿಅ ಅಹ್ಮದಿಯದಿಂದ ತೇರ್ಗಡೆಯಾಗಿದ್ದರು. 1983ರಲ್ಲಿ ಮುಬಲ್ಲಿಗ್ ಆಗಿ ಅವರನ್ನು ಸ್ವಿಝರ್‌ಲೇಂಡಿಗೆ ಕಳುಹಿಸಲಾಗಿತ್ತು. 1984ರಲ್ಲಿ ಅವರನ್ನು ನಾಇಬ್ ವಕೀಲುತ್ತಬ್‌ಶೀರ್ ಆಗಿ ನಿಶ್ಚಯಿಸಲಾಯಿತು. 1984, ಡಿಸೆಂಬರ್‌ನಲ್ಲಿ ಲಂಡನಿಗೆ ಬಂದಿದ್ದರು. ಲಂಡನಿನಲ್ಲಿ ಪ್ರೈವೇಟ್ ಸೆಕ್ರೆಟರಿಯಾಗಿಯೂ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. 1985ರಿಂದ 2008ರ ತನಕ ಮುಬಲ್ಲಿಗ್ ಆಗಿ ಮತ್ತು ಕೆನಡದ ಮುಬಲ್ಲಿಗ್ ಇನ್‌ಚಾರ್ಜ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. 2009ರಿಂದ 2016ರ ತನಕ ಅಮೇರಿಕದ ಮುಬಲ್ಲಿಗ್ ಇನ್‌ಚಾರ್ಜ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. 1986ರಲ್ಲಿ ಬೈತುಲ್ ಇಸ್ಲಾಂ ಮಿಶನ್ ಹೌಸಿಗಾಗಿ 24 ಏಕರೆ ಭೂಮಿಯನ್ನು ಖರೀದಿ ಮಾಡಲಾಯಿತು. ಅನಂತರ ಅದನ್ನು ಜನನಿಬಿಡಗೊಳಿಸಲಾಯಿತು. ಅವರ ಕಾಲದಲ್ಲಿ ಅನೇಕ ಅಹ್ಮದಿಯರು ಕೆನಡಕ್ಕೆ ಬಂದು ನೆಲೆಸಿದರು. ಅಂತಹವರ ಸಹಾಯವನ್ನು ಅವರು ಬಹಳ ಮಾಡಿದರು. ಟೊರೊಂಟೋ ಮತ್ತು ಕೇಲ್ಗರಿಯಲ್ಲಿ ಎರಡು ದೊಡ್ಡ ಮಸೀದಿಯ ನಿರ್ಮಾಣವನ್ನು ಮಾಡಲಾಯಿತು. ಇತರ ಜಮಾಅತುಗಳಲ್ಲಿ ಸೆಂಟರ್‌ಗಳನ್ನು ಕೂಡ ಸ್ಥಾಪಿಸಲಾಯಿತು. ಬಹುಶಃ ವೇಂಕೋವರಿನ ಮಸೀದಿ ಕೂಡ ಅವರ ಕಾಲಾವಧಿಯಲ್ಲಿ ನಿರ್ಮಾಣವಾಗಿತ್ತು. ಹೇಗಿದ್ದರೂ ಈ ಎರಡು ದೊಡ್ಡ ಮಸೀದಿಗಳ ನಿರ್ಮಾಣವಾಯಿತು. 2003ರಲ್ಲಿ ಅವರ ಕಾಲಾವಧಿಯಲ್ಲೇ ಅಲ್ಲಾಹನ ಅನುಗ್ರಹದಿಂದ ಜಾಮಿಅ ಅಹ್ಮದಿಯಾ ಕೆನಡದ ಉದ್ಘಾಟನೆಯಾಯಿತು. ಎಂ.ಟಿ.ಎ. ನಾರ್ತ್ ಅಮೇರಿಕದ ಸ್ಟೇಶನನ್ನು ಸ್ಥಾಪಿಸುವುದರಲ್ಲೂ ಅವರು ಬಹಳ ದೊಡ್ಡ ಪಾತ್ರವನ್ನು ವಹಿಸಿದ್ದರು. ಅಲ್ಲಾಹನು ಅವರ ಈ ಎಲ್ಲ ಕೆಲಸಗಳನ್ನು ಸ್ವೀಕಾರ ಮಾಡಲಿ.

ನಸೀಂ ಮಹ್‌ದಿ ಸಾಹಿಬ್‌ರಿಗೆ ಆರ್ಡರ್ ಆಫ್ ಒಂಟಾರಿಯೋದ ಪದಕ 2009ರಲ್ಲಿ ಲಭಿಸಿತ್ತು. ಅದು ಒಬ್ಬ ಪ್ರಜೆಗೆ ಆ ರಾಜ್ಯದಲ್ಲಿ ಕೊಡಲಾಗುವ ಅತ್ಯಂತ ಶ್ರೇಷ್ಠ ಪದವಿಯಾಗಿದೆ. ಈ ಅವಾರ್ಡನ್ನು ಯಾವುದಾದರೂ ಫೀಲ್ಡಿನಲ್ಲಿ ಯಶಸ್ಸಿನ ಮತ್ತು ಉನ್ನತ ಸೇವೆಗಳನ್ನು ಮಾಡಲಾಗುವಾಗ ನೀಡಲಾಗುತ್ತದೆ.

ಒಂದು ಬಾರಿ ಜಲ್ಸಾ ಸಾಲಾನದ ಸಂದರ್ಭದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ತನ್ನ ಭಾಷಣದಲ್ಲಿ ಸ್ವಿಝರ್‌ಲ್ಯಾಂಡಿನ ಮಿಶನಿನ ಕೆಲಸಗಳಿಗೆ ಸಂಬಂಧಪಟ್ಟಂತೆ ನಸೀಂ ಮಹ್‌ದಿ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಹೇಳಿದರು: ಅಲ್ಲಾಹನು ಅವರಿಗೆ ಪ್ರತಿಫಲ ನೀಡಲಿ. ನನ್ನೊಂದಿಗೆ ಸಮಾಲೋಚನೆ ನಡೆಸಿದ ನಂತರ 8 ಸಾವಿರ ಫೋಲ್ಡರ್‌ಗಳನ್ನು ಸ್ವಿಝರ್‌ಲ್ಯಾಂಡಿನ ಮಲೆಗಳಲ್ಲಿ ವಾಸಿಸುವ ಪ್ರತಿಯೊಂದು ಮನೆಗೆ ತಲುಪಿಸಿದರು.

ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತ್ ಅನುಗ್ರಹಿಸಲಿ – ಆಮೀನ್

===========================================================

## ಜ| ಪಿ.ವಿ. ಅಹ್ಮದ್ ಕೋಯ ಸಾಹಿಬ್



**ಕೋಝಿಕ್ಕೋಡ್:** ಕೋಝಿಕ್ಕೋಡ್ ಜಮಾಅತಿನ ಪಿ.ವಿ. ಅಹ್ಮದ್ ಕೋಯ ಸಾಹಿಬ್(84) ಜುಲಾಯಿ 17ರಂದು ನಿಧನರಾರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್").

ಕೋಝಿಕ್ಕೋಡಿನ ಖ್ಯಾತ ಪತ್ರಕರ್ತನಾದ ಅವರು 1964ರಲ್ಲಿ ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸಿದರು. ಅವರು ಜಮಾಅತಿನ ಅನೇಕ ಸ್ಥಾನಗಳನ್ನು ವಹಿಸಿ ಸೇವೆ ಸಲ್ಲಿಸಿದ್ದಾರೆ. "ಮಾತೃಭೂಮಿ" ದಿನಪತ್ರಿಕೆಯ ಜರ್ನಲಿಸ್ಟ್ ಯೂನಿಯನ್‌ನಲ್ಲೂ ವಿವಿಧ ಹುದ್ದೆಗಳನ್ನು ವಹಿಸಿದ್ದರು. "ಚಂದ್ರಿಕಾ" ದಿನಪತ್ರಿಕೆಯಲ್ಲಿ ಉಪ ಸಂಪಾದಕರಾಗಿಯೂ "ಮಾತೃಭೂಮಿ" ದಿನಪತ್ರಿಕೆಯಲ್ಲಿ 30 ವರ್ಷಕಾಲ ವರದಿಗಾರನಾಗಿಯೂ ಅವರು ದುಡಿದಿದ್ದಾರೆ.

ಲೇಖಕನಾಗಿದ್ದ ಅಹ್ಮದ್ ಕೋಯ ಸಾಹಿಬ್ "ಸತ್ಯದೂತನ್" ಮಾಸಪತ್ರಿಕೆಯಲ್ಲೂ "ಮಾತೃಭೂಮಿ"ಯಲ್ಲೂ ಲೇಖನ ಬರೆದಿದ್ದಾರೆ. "ನೀವು ಸತ್ಯ ತಿಳಿಯಬೇಕು" ಎಂಬ ಹೆಸರಿನಲ್ಲಿ ಒಂದು ಉತ್ತಮ ಪುಸ್ತಕವನ್ನು ಅವರು ಬರೆದಿದ್ದಾರೆ. ಅಹ್ಮದಿಯಾ ಜಮಾಅತಿನ ಸತ್ಯವನ್ನು ಸಾರುವ ಆ ಪುಸ್ತಕದಲ್ಲಿ ಧಾರ್ಮಿಕವೂ ಸಾಮಾಜಿಕವೂ ಸಮಕಾಲೀನವೂ ಆದ ಅನೇಕ ವಾಸ್ತವಾಂಶಗಳು ಅಡಕವಾಗಿವೆ. 1991ರಲ್ಲಿ ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹಿಬ್ ಖಾದಿಯಾನ್ ಸಂದರ್ಶಿಸಿದಾಗ ಅವರ ಇಂಟರ್‌ವ್ಯೂ ಮಾಡಿ ಅದು "ಮಾತೃಭೂಮಿ"ಯಲ್ಲಿ ಪ್ರಕಟಿಸಲ್ಪಟ್ಟಿದೆ. 2008ರಲ್ಲಿ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹಿಬ್ ದೆಹಲಿ ಮತ್ತು ಕೇರಳ ಸಂದರ್ಶಿಸಿದಾಗ ಪತ್ರಿಕಾಗೋಷ್ಠಿ ಏರ್ಪಡಿಸುವುದರಲ್ಲಿ ಅವರು ಮುಖ್ಯ ಪಾತ್ರ ವಹಿಸಿದ್ದರು.

ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ – ಆಮೀನ್.

**ನಿಧನ ವಾರ್ತೆಗಳು**

## ಜ। ಎನ್. ರಿಯಾಝ್ ಅಹ್ಮದ್ ಸಾಹಿಬ್



**ಕೊಯಂಬತ್ತೂರ್:** ಕೊಯಂಬತ್ತೂರ್ ಜಮಾಅತಿನ ಮಾಜಿ ಅಮೀರ್ ಮರ್ಹೂಂ ನೂರುಲ್ ಅಮೀನ್ ಸಾಹಿಬರ ಜೇಷ್ಠ ಪುತ್ರ ಜ। ಎನ್. ರಿಯಾಝ್ ಅಹ್ಮದ್ ಸಾಹಿಬ್ ತನ್ನ 45ನೇ ವಯಸ್ಸಿನಲ್ಲಿ 10–8–2022ರಂದು ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್").

ಅವರು ಕೊಯಂಬತ್ತೂರ್ ಜಮಾಅತಿನ ನಾಇಬ್ ಅಮೀರ್ ಮತ್ತು ರಿಸ್ತಾನಾಥ ಸೆಕ್ರೆಟರಿಯಾಗಿದ್ದರು. ಅವರು ಅತಿಥಿ ಸತ್ಕಾರ ಮಾಡುವುದರಲ್ಲೂ ಬಡವರಿಗೆ ನೆರವು ನೀಡುವುದರಲ್ಲೂ ಹೆಸರು ಗಳಿಸಿದ್ದರು. 12–8–2022ರಂದು ಖಾದಿಯಾನಿನ ಬಿಹಿಸ್ತಿ ಮಖ್‌ಬರದಲ್ಲಿ ಅವರ ಮೃತದೇಹವನ್ನು ದಫನ ಮಾಡಲಾಯಿತು.

ಅವರು ತಾಯಿ, ಇಬ್ಬರು ಸಹೋದರರು, ಓರ್ವ ಸಹೋದರಿ, ಪತ್ನಿ, ಮೂವರು ಮಕ್ಕಳು ಮತ್ತು ಅನೇಕ ಬಂಧುಮಿತ್ರಾದಿಗಳನ್ನು ಅಗಲಿದ್ದಾರೆ. ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತನ್ನು ಅನುಗ್ರಹಿಸಲಿ – ಆಮೀನ್.

===============================================================

**ಅಹ್ಮದಿಯಾ ವಾರ್ತೆ**

## ಬೆಂಗಳೂರಿನಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವ

**ಬೆಂಗಳೂರು:** ಬೆಂಗಳೂರಿನ ಅಹ್ಮದಿಯಾ ಮಸೀದಿಯಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಲಾಯಿತು.

ಬೆಂಗಳೂರಿನ ವಿಲ್ಸನ್ ಗಾರ್ಡನ್‌ನಲ್ಲಿರುವ ಅಹ್ಮದಿಯಾ ಮಸೀದಿಯಲ್ಲಿ ಶ್ರೀ ಉದಯ ಗರುಡಾಚಾರ್, (ಎಂ.ಎಲ್.ಎ. ಚಿಕ್ಕಪೇಟೆ) ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಧ್ವಜಾರೋಹಣ ಮಾಡಿದರು.

ಅಹ್ಮದಿಯಾ ಸಂಘಟನೆಯ ಧ್ಯೇಯೋದ್ದೇಶಗಳನ್ನೂ ಲೋಕ ಶಾಂತಿಗೋಸ್ಕರ ಅಹ್ಮದಿಯಾ ಪಂಚಮ ಖಲೀಫರ ಪರಿಶ್ರಮಗಳನ್ನೂ ವಿವರಿಸಲಾಯಿತು.

ಜ। ಕೆ.ಕೆ. ಬದ್ರುದ್ದೀನ್ ಸಾಹಿಬರು "ದೇಶಪ್ರೇಮ ವಿಶ್ವಾಸದ ಅಂಶವಾಗಿದೆ" ಎಂಬ ಪೈಗಂಬರರ(ಸ) ವಚನವನ್ನು ಉದ್ಧರಿಸಿದರು. ತಾಯಿನಾಡು ಸ್ವರ್ಗ ಸಮಾನವೆಂದು ರಾಮಾಯಣದಲ್ಲಿ ಹೇಳಲಾಗಿದೆ ಎಂದು ಅವರು ನುಡಿದರು.

ಅತ್ಫಾಲ್ ಮತ್ತು ನಾಸಿರಾತ್ ಮಕ್ಕಳು "ಸಾರೆ ಜಹಾಂ ಸೆ ಅಚ್ಛಾ......" ದೇಶಪ್ರೇಮ ಹಾಡು ಹಾಡಿದರು.

ಮುಖ್ಯ ಅತಿಥಿಯವರು ಸ್ವಾತಂತ್ರ್ಯ ಹೋರಾಟದ ಬಗ್ಗೆ ವಿವರಿಸಿದರು. ಅಹ್ಮದಿಯಾ ಸದಸ್ಯರು ಹೊಣೆಗಾರಿಕೆ ಅರಿತ ನಾಗರಿಕರೆಂದು ತಾನು ತಿಳಿದುಕೊಂಡಿದ್ದೇನೆ ಎಂದು ಹೇಳಿದರು. ಲೋಕ ಶಾಂತಿಗೋಸ್ಕರ ಅಹ್ಮದಿಯಾ ಜಮಾಅತಿನ ಖಲೀಫರಾದ ಮಿರ್ಝಾ ಮಸ್ರೂರ್ ಅಹ್ಮದ್ ಸಾಹಿಬರು ಮಾಡುವ ಪ್ರಯತ್ನಗಳನ್ನು ಅವರು ಶ್ಲಾಘಿಸಿದರು.

ಜಮಾಅತ್ ಪ್ರೆಸಿಡೆಂಟ್ ಜ। ಮುಹಮ್ಮದ್ ಹಶ್ಮತುಲ್ಲಾ ಅಹ್ಮದಿ ಸಾಹಿಬರು ತನ್ನ ಭಾಷಣದಲ್ಲಿ ಮಸೀದಿಯ ಕುರಿತು, ಅದು ದೇವಾರಾಧನೆಗೆ ಮಾತ್ರವಲ್ಲ, ಜಾತಿ ಮತ ಭೇದವಿಲ್ಲದೆ ಎಲ್ಲ ಜನರ ಸೇವೆಗಿರುವ ಕೇಂದ್ರವಾಗಿದೆ ಎಂದು ಹೇಳಿದರು. ಈ ಕಾಲದ ಧರ್ಮ ಸುಧಾರಕರಾದ ಹಝ್‌ರತ್ ಮಿರ್ಝಾ ಗುಲಾಂ ಅಹ್ಮದ್(ಅ) ಅವರ ಶಾಂತಿ – ಸಾಮರಸ್ಯದ ಉಪದೇಶಗಳನ್ನು ವಿವರಿಸಿದರು.

ಜ। ಶಿರಾಝ್ ಸಾಹಿಬರು, ದೇಶಪ್ರೇಮದ ಕುರಿತು ಮತ್ತು ಜನಸೇವೆ ಬಗ್ಗೆ ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ನುಡಿಗಳನ್ನು ಮತ್ತು ಖುರ್‌ಆನಿನ ಪಾಠಗಳನ್ನು ವಿವರಿಸಿದರು.


ಶಾಂತಿ ಚರ್ಚಿನ ಪ್ರತಿನಿಧಿಗಳು ಮತ್ತು ಹತ್ತಿರದ ಅನಾಥಾಲಯದ ಮಕ್ಕಳು ತಮ್ಮ ಮೇಲಧಿಕಾರಿಗಳ ಸಹಿತ ಈ ಕಾರ್ಯಕ್ರಮದ ಕೊನೆಗೆ ಭಾಗವಹಿಸಿದರು.


**"ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ."**

**– ಹಝ್‌ರತ್ ಮುಹಮ್ಮದ್ ಪೈಗಂಬರ್(ಸ)**

### ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

1. ಜ। ರಶೀದ್ ಅಹ್ಮದ್ ಸಿದ್ದೀಖ್ ಸಾಹಿಬ್, ಮಂಗಳೂರು – ರೂ. 1000/–
2. ಜ। ಕೆ.ಎಂ. ಉಮರ್ ಸಾಹಿಬ್, ಮಡಿಕೇರಿ – ರೂ. 1000/–




*Naeem Cheema* ...نعیم

Mrs Nabeela Naeema Wahab daughter of late Ameer Jama'at Ghana Maulana Abdul Wahab Adam sahib being inducted as a Justice of Ghana High Courts. A very proud and inspiring moment for Lajna Immaillah in Africa and globally.

May Allah be her Guide, Ameen

#IslamAhmadiyyat
#ghananews



## ಪ್ರವಾದಿ ಮುಹಮ್ಮದ್ (ﷺ) ಮುಸ್ಲಿಮೇತರರ ವೀಕ್ಷಣೆಯಲ್ಲಿ 06

"ಶಾಂತಿಯನ್ನು ಹರಡುವ ಮೂಲಕ ಪ್ರವಾದಿ ಮುಹಮ್ಮದರು ಸಮಾಜದ ಕಣ್ಣು ತೆರೆಸಿದರು. ಅವರು ಅಜ್ಞಾನ ಕೆಡುಕು ಹಾಗೂ ಕ್ರೌರ್ಯವನ್ನು ತೊಲಗಿಸಿದರು.





ಶ್ರೀ ಶಿವಕುಮಾರ ಸ್ವಾಮೀಜಿ
ಸಿದ್ದಗಂಗಾ ಮಠ


"ಪ್ರವಾದಿ ಮುಹಮ್ಮದರು ಭೂಮಿಯ ಮೇಲೆ ಜೀವಿಸಿದ ಮಹಾನ್ ವ್ಯಕ್ತಿಯಾಗಿದ್ದಾರೆ."





ರಾಮ್ ಜೆಟ್ಮಲಾನಿ
ಸುಪ್ರೀಂ ಕೋರ್ಟ್ ನ್ಯಾಯವಾದಿ ಮತ್ತು ಮಾಜಿ ಕಾನೂನು ಸಚಿವ.








ಮುಹಮ್ಮದರ ಧರ್ಮದ ಬಗ್ಗೆ ನಾನು ಅರಿತುಕೊಂಡಾಗಲೇ ನನ್ನ ಮನಸ್ಸಿನಲ್ಲಿ ಗೌರವಭಾವ ಮೂಡಿತ್ತು, ಇದಕ್ಕೆ ಕಾರಣವಾದ ಅಂಶ ಅವರ ಜೀವನಶೈಲಿಯೇ ಆಗಿತ್ತು. ಮುಂದಿನ ಶತಮಾನದಲ್ಲಿ ಯುರೋಪನ್ನು ಆಳುವ ನೈಜ ಅಧಿಕಾರವಿದ್ದರೆ ಅದು ಇಸ್ಲಾಂ ಧರ್ಮಕ್ಕೆ ಮಾತ್ರ. ನಾನು ಅವರ ಬಗ್ಗೆ ಅಧ್ಯಯನ ಮಾಡಿದೆ. ನಿಜಕ್ಕೂ ಅವರ ವ್ಯಕ್ತಿತ್ವ ಅಚ್ಚರಿ ಮೂಡಿಸುವಂತಹದು. ಅವರು ಇಂದು ಜೀವಂತವಾಗಿರುತ್ತಿದ್ದರೆ, ಮಾನವ ನಾಗರಿಕತೆಯನ್ನು ಹಾಳುಮಾಡುವ ಎಲ್ಲಾ ಸಮಸ್ಯೆಗಳನ್ನು ಯಶಸ್ವಿಯಾಗಿ ಪರಿಹರಿಸುತ್ತಿದ್ದರು. ನನ್ನ ಅಭಿಪ್ರಾಯದಂತೆ ಅವರನ್ನು ಮಾನವ ಕುಲದ ವಿಮೋಚಕರೆಂದೇ ಕರೆಯಬೇಕು.




**ಜಾರ್ಜ್ ಬರ್ನಾಡ್ ಷಾ**


ಐರಿಷ್ ನಾಟಕಗಾರ ಮತ್ತು ಖ್ಯಾತ ಸಾಹಿತಿಗಾರ.
(ದಿ ಜೆನ್ಯೂನ್ ಇಸ್ಲಾಂ, ಸಂಪುಟ-1, ಸಂಖ್ಯೆ 8, 1936)

# ಬೆಂಗಳೂರಿನಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವ

(ವರದಿ ಪುಟ 50ರಲ್ಲಿ)















Registered with the Registrar of Newspapers for India No. R.N. 27354/75
**Yugarashmi** Kannada Quarterly, **October - 2022.** Price : **Rs. 15/-**




ಮೂರನೇ ಮಹಾಯುದ್ಧದ ಭೀತಿ ದಿನೇ ದಿನೇ ವರ್ಧಿಸುತ್ತಿದೆ.

ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್
ಅಹ್ಮದಿಯಾ ಮುಸ್ಲಿಂ ಜಮಾಅತಿನ ಜಾಗತಿಕ ನೇತಾರ

**#STOPWW3**

Ahmadiyya Muslim Community, India

## ಜಾಗತಿಕ ಶಾಂತಿಯ ದೂತ ಮುಂದಿರಿಸಿದ ಶಾಂತಿ ಸ್ಥಾಪನೆಯ ಸುವರ್ಣ ತತ್ವಗಳು

1. ಸೃಷ್ಟಿಕರ್ತನನ್ನು ಅರಿಯಿರಿ
2. ಸಂಪೂರ್ಣ ನ್ಯಾಯಪಾಲನೆ ಸ್ಥಾಪಿಸಿರಿ
3. ಜಾಗತಿಕ ಏಕತೆಗೆ ಪ್ರೋತ್ಸಾಹ ಕೊಡಿರಿ
4. ಅಣ್ವಸ್ತ್ರವನ್ನು ಕೊನೆಗೊಳಿಸಿರಿ
5. ಆಯುಧ ವ್ಯಾಪಾರದಿಂದ ಅತಿಲಾಭ ಪಡೆಯುವುದನ್ನು ವರ್ಜಿಸಿರಿ
6. ಆರ್ಥಿಕ ಸಮಾನತೆಯನ್ನು ಸ್ಥಾಪಿಸಿರಿ ಮತ್ತು ಬಡತನವನ್ನು ತೊಡೆದುಹಾಕಿರಿ
7. ದೇಶದ ಏಳಿಗೆಗಾಗಿ ಪ್ರಯತ್ನಿಸಿರಿ
8. ಉಗ್ರವಾದವನ್ನು ತಿರಸ್ಕರಿಸಿರಿ
9. ಮನುಕುಲದ ಸೇವೆ ಮಾಡಿರಿ
10. ಪರಸ್ಪರರ ವಿಶ್ವಾಸಗಳನ್ನು ಆದರಿಸಿರಿ.

1800-103-2131 (Toll Free)

www.lightofislam.in
www.alislam.org
www.mta.tv
www.stopww3.co.uk

islaminind
islaminindia

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore